# ಕೇರಳ ಪಾಠಾವಳಿ
# KERALA READER

## ಕನ್ನಡ - II
## KANNADA - II

ತರಗತಿ
STANDARD **X**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2019

NT-269-1-KANNADA-10-BT

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**Prepared by :**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
First Edition : 2019
Printed at : KBPS, Kakkanad, Kochi-30.

ಪ್ರೀತಿಯ ಮಕ್ಕಳೇ,

ಜ್ಞಾನವೆನ್ನುವುದು ಒಂದು ಸಾಗರ. ಅದು ಆಳವಾದುದು ಮತ್ತು ವಿಸ್ತಾರವಾದುದು. ಅದನ್ನು ಮೊಗೆದಷ್ಟು ಮುಗಿಯುವುದಿಲ್ಲ. ಅಲ್ಲಿ ವೈವಿಧ್ಯವಿದೆ. ಬದುಕನ್ನು ಸುಂದರವಾಗಿ ರೂಪಿಸುವುದಕ್ಕೆ ಅಗತ್ಯವಾದ ಪರಿಕರಗಳೆಲ್ಲ ಇವೆ.

ವ್ಯಕ್ತಿಯಿಂದ ವ್ಯಕ್ತಿಗೆ ಬದುಕು ಭಿನ್ನವಾಗಿರುತ್ತದೆ. ಅದನ್ನು ಸ್ವತಃ ತಿಳಿದುಕೊಂಡು ಸ್ವಂತ ನಿರ್ಧಾರಗಳಿಗೆ ರೂಪುನೀಡುವ ಜವಾಬ್ದಾರಿ ಪ್ರತಿಯೊಬ್ಬನಿಗೂ ಇದೆ. ಅಂತಹ ಜವಾಬ್ದಾರಿಯುತವಾದ ಹಾದಿಯಲ್ಲಿ ಸಾಗುತ್ತಿರುವವರು, ಸಾಗಬೇಕಾದವರು ನೀವು. ಆದ್ದರಿಂದಲೇ ಜ್ಞಾನಸಾಗರದ ತೀರದಲ್ಲಿ ನಿಮ್ಮನ್ನು ಅಧ್ಯಾಪಕರು ತಂದು ನಿಲ್ಲಿಸಿದ್ದಾರೆ. ಮುಂದಿನ ಆಯ್ಕೆ ನಿಮ್ಮದು.

ಭಾಷಾಜ್ಞಾನದ ವಿಚಾರದಲ್ಲಿ ಎರಡು ಮಾತಿಲ್ಲ. ಅದು ಅತ್ಯಗತ್ಯ. ಅಲ್ಲಿ ನೈಪುಣ್ಯವನ್ನು ಸಾಧಿಸಿದಷ್ಟೂ ಇತರ ವಿಷಯಗಳ ಕಲಿಕೆಗೆ ಅನುಕೂಲವಾಗುವುದರಲ್ಲಿ ಅನುಮಾನವಿಲ್ಲ.

ವೈವಿಧ್ಯಮಯವಾದ, ಸಂತೋಷದಾಯಕವಾದ ಜ್ಞಾನವನ್ನು ಸ್ವತಃ ನಿರ್ಮಾಣ ಮಾಡಿಕೊಳ್ಳುವತ್ತ ಸಾಗುವುದಕ್ಕೆ ಯೋಗ್ಯವಾದ ಚಟುವಟಿಕೆಗಳನ್ನು ಮಾಡುವುದರ ಮೂಲಕ ಹೊಸಹೊಸ ವಿಚಾರಗಳ ಕಡೆಗೆ ಗಮನಹರಿಸುವುದಕ್ಕೆ ಅನುಕೂಲಕರವಾದ ಪಠ್ಯವಿಷಯಗಳನ್ನೊಳಗೊಂಡ ಕನ್ನಡಭಾಷಾ ಪಠ್ಯಪುಸ್ತಕವನ್ನು ನಿಮ್ಮ ಮುಂದಿಡಲಾಗಿದೆ.

ಭಾಷೆಯ ಮಾಧುರ್ಯವನ್ನು ಆಸ್ವಾದಿಸುತ್ತಾ ಜ್ಞಾನಾರ್ಜನೆ ಮಾಡುತ್ತಾ ಸಾಗುವಲ್ಲಿ ಈ ಪುಸ್ತಕ ನಿಮಗೆ ಉತ್ತಮ ಸಂಗಾತಿಯಾಗಲೆಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

ಡಾ। ಜೆ. ಪ್ರಸಾದ್
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# ಭಾರತದ ಸಂವಿಧಾನ

**ಭಾಗ IV ಕ**

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಅನುಕ್ರಮಣಿಕೆ


ಘಟಕ -1. ಜೀವನಪ್ರೀತಿ ............ 7-30

| | | |
|---|---|---|
| ● ಕರುಣಾಳು ಬಾ ಬೆಳಕೆ | ಕವನ | ಬಿ.ಎಂ.ಶ್ರೀಕಂಠಯ್ಯ |
| ● ಗುಪ್ತದಾನಿ | ಅನುಭವ ಕಥನ | ಡಾ। ಸುಧಾಮೂರ್ತಿ |
| ● ಎಲ್ಲಿಹೋದರೋ ಅವರು ಎಂದು ಬರುವರು? | ಕವನ | ವೈದೇಹಿ |
| ● ನೀರು | ಕತೆ | ಜನಾರ್ದನ ಎರ್ಪಕಟ್ಟೆ |

ಘಟಕ -2 ಕಲ್ಲರಳಿ ಹೂವಾಗಿ ............ 31-48

| | | |
|---|---|---|
| ● ಬಾದಾಮಿಯ ಗುಹೆಯ ಬಳಿ | ಕವನ | ಕೆ.ಎಸ್. ನರಸಿಂಹಸ್ವಾಮಿ |
| ● ಹೀಗೊಂದು ಕನಸು... ಹೀಗಿದೆ ಜೀವನ | ಕತೆ | ಮೀನಾ ಕಾಕೋಡ್ಕರ್ |
| ● ಕಾಯಕ ನಿಷ್ಠೆ | ಆತ್ಮಕತೆ | ಗೊರೂರು ರಾಮಸ್ವಾಮಿ ಅಯ್ಯಂಗಾರ್ |

ಘಟಕ 3. ವಿಜ್ಞಾನ ದರ್ಪಣ ............ 49-71

| | | |
|---|---|---|
| ● ವಿಜ್ಞಾನಿಗೆ | ಕವನ | ಬೆಟಗೇರಿ ಕೃಷ್ಣ ಶರ್ಮ |
| ● ಮೊಳಕೆಯ ಸಿರಿ | ಜೀವನ ಚರಿತ್ರೆ | ಸಾಧಾರ |
| ● ಸಂದರ್ಶನ ಕೌಶಲ | ಲೇಖನ | ಸಾಧಾರ |
| ● ಬದುಕು ಬದಲಿಸಿದ ಜಂಗಮಗಂಟೆ! | ಅಂಕಣ ಬರಹ | ಡಾ. ನಿರಂಜನ ವಾನಳ್ಳಿ |

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ, ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**


'ಶ್ರೀ ಗಣೇಶ್, ಟಿ.ಸಿ. 14/2036, ವಾನ್‌ರೋಸ್ ಜಂಕ್ಷನ್, ತಿರುವನಂತಪುರ – 34

ಫೋನ್ : 0471–2326603


E-mail : childrightscpcr@kerala.gov.in, rtecpcr@kerala.gov.in
website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**
**ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000**

online R.T. E Monitoring: www.nireekshana.org.in



ಘಟಕ - 1



# ಜೀವನಪ್ರೀತಿ

# ನಿಜವಾದ ಆಭರಣ

**ಪಂ**ಡಿತ ಈಶ್ವರಚಂದ್ರ ವಿದ್ಯಾಸಾಗರರು ಪರೋಪಕಾರವನ್ನು ತಮ್ಮ ಜೀವನದ ವ್ರತವನ್ನಾಗಿಟ್ಟುಕೊಂಡು ಬಾಳಿದವರು. ಅವರ ಮನೆಗೆ ಹೋದ ಯಾವ ದರಿದ್ರನೂ ಬರಿಗೈಯಲ್ಲಿ ಹಿಂತಿರುಗುತ್ತಿರಲಿಲ್ಲ. ಒಂದು ದಿನ ಅವರ ತಾಯಿ ಮಗನನ್ನು ಕುರಿತು "ಈಶ್ವರಚಂದ್ರ, ನೀನು ಬಂದವರಿಗೆಲ್ಲ ಮನೆಯಲ್ಲಿದ್ದುದನ್ನು ಕೊಡುತ್ತ ಬಂದೆ. ಈಗ ಮನೆಯಲ್ಲಿ ಸ್ವಲ್ಪವೂ ಹಣವಿಲ್ಲ" ಎಂದರು. ಮಗನ ದೃಷ್ಟಿ ತಾಯಿಯ ಕೈಯಲ್ಲಿದ್ದ ಚಿನ್ನದ ಬಳೆಗಳ ಕಡೆಗೆ ತಿರುಗಿತು. "ಅಮ್ಮಾ, ನಿನ್ನ ಬಳೆಗಳನ್ನು ಕೊಡು, ಮಾರಿ ಬಂದ ಹಣದಲ್ಲಿ ಬಡವರ ಕಷ್ಟಗಳನ್ನು ಪರಿಹರಿಸುತ್ತೇನೆ. ಇನ್ನು ಕೆಲವು ವರ್ಷಗಳಲ್ಲಿ ಹಣವನ್ನು ಶೇಖರಿಸಿ ಅಮೂಲ್ಯವಾದ ಆಭರಣಗಳನ್ನು ಮಾಡಿಸಿ ಕೊಡುತ್ತೇನೆ" ಎಂದರು. ತಾಯಿ ಮಗನ ಮಾತಿನಂತೆಯೇ ತಮ್ಮ ಕೈಗಳಲ್ಲಿದ್ದ ಬಳೆಗಳನ್ನು ತೆಗೆದುಕೊಟ್ಟರು. ಕೆಲವು ವರ್ಷಗಳು ಕಳೆದವು. ಈಶ್ವರಚಂದ್ರ ವಿದ್ಯಾಸಾಗರರ ಬಳಿ ಸಾಕಷ್ಟು ಹಣ ಸೇರಿತು. ತಾಯಿಯ ಬಳಿಗೆ ಹೋಗಿ "ಅಮ್ಮಾ, ಹಿಂದೆ ಹೇಳಿದಂತೆ ಬಳೆಗಳನ್ನು ಮಾಡಿಸುತ್ತೇನೆ. ಯಾವ ರೀತಿಯ ಬಳೆಗಳನ್ನು ಮಾಡಿಸಲಿ?" ಎಂದು ಕೇಳಿದರು. ತಾಯಿ ಮಗನನ್ನು ವಾತ್ಸಲ್ಯದಿಂದ ನೋಡುತ್ತ, "ಮಗು, ನಾನು ಬಯಸುವ ನಿಜವಾದ ಆಭರಣಗಳೆಂದರೆ ಜ್ಞಾನಾರ್ಜನೆ, ರೋಗಿಗಳ ಶುಶ್ರೂಷೆ, ದರಿದ್ರ ನಾರಾಯಣರಿಗೆ ಮಾಡುವ ಅನ್ನದಾನ" ಎಂದು ಹೇಳಿದರು. ಮಗನ ಸಂತೋಷ ಉಕ್ಕಿ ಹರಿಯಿತು. ತನ್ನ ಜೀವನವನ್ನು ಈ ಉದಾತ್ತ ಕಾರ್ಯಗಳಿಗಾಗಿಯೇ ಮುಡಿಪಾಗಿಡುವುದಾಗಿ ಪ್ರತಿಜ್ಞೆ ಮಾಡಿದರು.



ಮೇಲಿನ ಗದ್ಯಭಾಗವನ್ನು ಓದಿದಿರಲ್ಲವೇ? ಇದು ನೀಡುವ ಸಂದೇಶವೇನು? ನಿಮ್ಮ ಅಭಿಪ್ರಾಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.



# ಕರುಣಾಳು ಬಾ ಬೆಳಕೆ

– ಬಿ.ಎಂ. ಶ್ರೀಕಂಠಯ್ಯ

ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈ ಹಿಡಿದು ನಡೆಸೆನ್ನನು,
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ,
ಕೈ ಹಿಡಿದು ನಡೆಸೆನ್ನನು.
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳೆನೊಡನೆಯೆ–ಸಾಕು ನನಗೊಂದು ಹೆಜ್ಜೆ.



ಮುನ್ನ ಇಂತಿರದಾದೆ; ನಿನ್ನ ಬೇಡದೆ ಹೋದೆ,
ಕೈ ಹಿಡಿದು ನಡಸು ಎನುತ.
ನನ್ನ ದಾರಿಯ ನಾನೆ ನೋಡಿ ಹಿಡಿದೆನು;–ಇನ್ನು,
ಕೈಹಿಡಿದು ನಡಸು ನೀನು.
ಮಿರುಗುಬಣ್ಣಕೆ ಬೆರೆತು, ಭಯಮರೆತು, ಕೊಬ್ಬಿದೆನು;
ಮರೆದಾಯ್ತು; ನೆನೆಯದಿರು ಹಿಂದಿನದನೆಲ್ಲ.

ಇಷ್ಟುದಿನ ಸಲಹಿರುವೆ ಮೂರ್ಖನನು; ಮುಂದೆಯೂ
ಕೈ ಹಿಡಿದು ನಡೆಸದಿಹೆಯಾ?
ಕಷ್ಟದಡವಿಯ ಕಳೆದು, ಬೆಟ್ಟ ಹೊಳೆಗಳ ಹಾದು,
ಇರುಳನ್ನು ನೂಕದಿಹೆಯಾ?
ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳಕೊಂಡ ದಿವ್ಯಮುಖ ನಗುತ?

NT-269-2-KANNADA-10-BT



## ಕವಿಪರಿಚಯ

'ಶ್ರೀ' ಎಂಬ ಕಾವ್ಯನಾಮದಿಂದ ಪರಿಚಿತರಾದ ಬಿ.ಎಂ. ಶ್ರೀಯವರು ಕನ್ನಡದ ಕಣ್ವ, ನವೋದಯ ಸಾಹಿತ್ಯದ ಆಚಾರ್ಯರೆಂದು ಪ್ರಸಿದ್ಧರಾಗಿದ್ದಾರೆ. ಇವರ ಪೂರ್ಣ ಹೆಸರು ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ. ೧೮೮೪ ಜನವರಿ ೩ರಂದು ತುಮಕೂರು ಜಿಲ್ಲೆಯ ಸಂಪಿಗೆ ಗ್ರಾಮದಲ್ಲಿ ಜನಿಸಿದರು. ತಂದೆ ಮೈಲಾರಯ್ಯ. ತಾಯಿ ಭಾಗೀರಥಮ್ಮ. ಇವರು ತಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಶ್ರೀರಂಗಪಟ್ಟಣದಲ್ಲೂ ಬಿ.ಎಲ್. ಮತ್ತು ಎಂ.ಎ. ಪದವಿಗಳನ್ನು ಮದ್ರಾಸು ವಿಶ್ವವಿದ್ಯಾಲಯದಲ್ಲೂ ಗಳಿಸಿದರು.

ಇಂಗ್ಲೀಷ್ ಗೀತೆಗಳು, ಗದಾಯುದ್ಧ ನಾಟಕಂ, ಅಶ್ವತ್ಥಾಮನ್, ಪಾರಸಿಕರು, ಕನ್ನಡ ಛಂದಸ್ಸಿನ ಚರಿತ್ರೆ, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಹೊಂಗನಸು ಮೊದಲಾದವು ಇವರ ಪ್ರಮುಖ ಕೃತಿಗಳಾಗಿವೆ.

ಬಿ.ಎಂ. ಶ್ರೀಯವರು ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪಿಸಿದರು. ೧೯೨೮ರಲ್ಲಿ ಕಲುಬುರ್ಗಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಂದಿನ ಮೈಸೂರು ಸಂಸ್ಥಾನದ ಒಡೆಯರಾಗಿದ್ದ ನಾಲ್ಮಡಿ ಕೃಷ್ಣರಾಜ ಒಡೆಯರಿಂದ 'ರಾಜಸೇವಾಸಕ್ತ' ಎಂಬ ಬಿರುದನ್ನು ಪಡೆದಿದ್ದರು. 'ಸಂಭಾವನೆ' ಎಂಬ ಅಭಿನಂದನ ಗ್ರಂಥವು ಇವರಿಗೆ ಸಮರ್ಪಿತವಾಗಿದೆ. ಇವರು ೧೯೪೬ ಜನವರಿ ೫ರಂದು ನಿಧನ ಹೊಂದಿದರು.

ಪ್ರಸ್ತುತ ಕವನವನ್ನು ಇವರ 'ಇಂಗ್ಲೀಷ್ ಗೀತೆಗಳು' ಕವನ ಸಂಕಲನದಿಂದ ಆರಿಸಲಾಗಿದೆ. ಇದು ನ್ಯೂಮನ್ ಕವಿಯ 'ಲೀಡ್ ಕೈಂಡ್ಲಿ ಲೈಟ್' ಕವನದ ಅನುವಾದವಾಗಿದೆ.



### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಕವಿಯು ದೇವರಲ್ಲಿ ತನ್ನ ಕೈಹಿಡಿದು ನಡೆಸಬೇಕೆಂದು ಬೇಡಿಕೊಂಡುದು ಯಾಕೆ?

2 ತನ್ನ ಅಪರಾಧದ ಬಗ್ಗೆ ಕವಿಯ ಹೇಳಿಕೆ ಏನು?

3 ದಿವ್ಯಮುಖದ ದರ್ಶನದ ಬಗ್ಗೆ ಕವಿಯ ಭರವಸೆಯು ಹೇಗೆ ವ್ಯಕ್ತವಾಗಿದೆ?



### ಆಶಯ ಬರೆಯಿರಿ

- 'ಕರುಣಾಳು ಬಾ ಬೆಳಕೆ' ಕವನದ ಆಶಯವನ್ನು ಬರೆಯಿರಿ.



### ಸಮರ್ಥಿಸಿ ಬರೆಯಿರಿ

- 'ಕರುಣಾಳು ಬಾ ಬೆಳಕೆ' ಕವನಕ್ಕೆ ಈ ಶೀರ್ಷಿಕೆ ಎಷ್ಟರ ಮಟ್ಟಿಗೆ ಒಪ್ಪುತ್ತದೆ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.



## ಸ್ವಾರಸ್ಯ ಬರೆಯಿರಿ

ಕೊಟ್ಟಿರುವ ಕವನದ ಸಾಲುಗಳ ಸ್ವಾರಸ್ಯ ಬರೆಯಿರಿ.

[redacted]



## ಆಸ್ವಾದನ ಟಿಪ್ಪಣಿ ಬರೆಯಿರಿ

[redacted]



## ಆಶಯ ಬರೆಯಿರಿ

ಕೆಳಗೆ ಕೊಡಲಾದ ಕವನದ ಆಶಯವನ್ನು ಬರೆಯಿರಿ.

[redacted]

# ಗುಪ್ತದಾನಿ

– ಡಾ। ಸುಧಾಮೂರ್ತಿ

ಅನೇಕ ವರ್ಷಗಳ ಹಿಂದೆ ನಾಗರಾಜರ ಪರಿಚಯ ಆಕಸ್ಮಿಕವಾಗಿ ನನ್ನ ಸ್ನೇಹಿತೆಯ ಮೂಲಕವಾಯಿತು. ಸನ್ಮಾನ್ಯ ನಾಗರಾಜರು ಅಂತರ್ಮುಖಿಗಳು, ಸದಾಕಾಲವೂ ಸಾದಾ ದಿರಿಸನ್ನು ಧರಿಸುತ್ತಿದ್ದರು. ಬಾಲ್ಯದಲ್ಲಿ ತುಂಬಾ ಕಷ್ಟಪಟ್ಟು ಯಾವುದೋ ಫಾರ್ಮಸಿ ಕಂಪನಿಯನ್ನು ಸೇರಿ ಹಂತ ಹಂತವಾಗಿ ಮೇಲೇರಿ ನಂತರ ಸ್ವಂತ ಔಷಧಿ ಕಂಪನಿಯನ್ನು ತೆಗೆದು ಈಗ ನಗರದ ಶ್ರೀಮಂತರಲ್ಲಿ ಒಬ್ಬರಾಗಿದ್ದಾರೆ.

ಒಂದು ದಿನ ನಾಗರಾಜರು ನನ್ನ ಆಫೀಸಿಗೆ ಬಂದು ನೇರವಾಗಿ ಕೆಲವೇ ಮಾತುಗಳಲ್ಲಿ ಹೇಳಿದರು. "ಮ್ಯಾಡಂ, ದೇವರು ದೊಡ್ಡವನು. ನನ್ನ ಔಷಧಿ ಕಂಪನಿ ಬಹಳ ಚೆನ್ನಾಗಿ ನಡೆಯುತ್ತಿದೆ. ನನ್ನ ಕಂಪೆನಿಯಲ್ಲಿ ಅನೇಕ ಔಷಧಿಗಳು ತಯಾರಾಗುತ್ತವೆ. ದೇವರು ನನಗೆ ಅಪಾರ ಸಂಪತ್ತನ್ನೂ ಜಾಣನಾದ ಒಬ್ಬನೇ ಮಗನನ್ನೂ ಕೊಟ್ಟಿದ್ದಾನೆ. ನನ್ನ ಮಗ ಸಾಕೇತ್ ಅಮೇರಿಕಾದಲ್ಲಿ ಎಂ.ಬಿ.ಎ. ಓದುತ್ತಿದ್ದಾನೆ. ನನ್ನ ವೇಳೆಯೆಲ್ಲಾ ಕಂಪೆನಿಯ ಕೆಲಸದಲ್ಲೇ ಕಳೆದು ಹೋಗುತ್ತದೆ. ಬಡ ಜನರಿಗಾಗಿ ಏನೂ ಮಾಡಲು ಸಾಧ್ಯವಾಗಿಲ್ಲ, ನಿಮ್ಮ ಬಳಿ ನನ್ನದೊಂದು ಸಣ್ಣ ಬಿನ್ನಹವಿದೆ........ ನಾನು ನಿಮ್ಮ ಕೆಲಸವನ್ನು ಮೊದಲಿನಿಂದಲೂ ಗಮನಿಸುತ್ತಾ ಬಂದಿದ್ದೇನೆ. ನೀವು ಅನೇಕ ದೊಡ್ಡ ಪಟ್ಟಣಗಳಲ್ಲಿ, ಕೊಳೆಗೇರಿಗಳಲ್ಲಿ ಬಡವರಿಗಾಗಿ ಉಚಿತ ವೈದ್ಯಕೀಯ ಕ್ಯಾಂಪ್ ಮಾಡುವುದನ್ನು ನೋಡಿದ್ದೇನೆ. ನೀವು ಖಾಯಂ ಆಗಿ ಒಬ್ಬ ವೈದ್ಯನನ್ನು ನೇಮಿಸಿಕೊಂಡರೆ ನಾನು ಅವರ ಸಂಬಳವನ್ನು ಕೊಡುತ್ತೇನೆ. ಅಲ್ಲದೆ ನಿಮ್ಮ ಕ್ಯಾಂಪ್‌ಗೆ ಬೇಕಾಗುವ ಔಷಧಿಗಳನ್ನು ನಾನು ಪುಕ್ಕಟೆಯಾಗಿ ಕೊಡುತ್ತೇನೆ".

ನಿಜ ಜೀವನದಲ್ಲಿ ಬಡವರಿಗೆ ಹಣ ಬಂದಾಗ ಹೆಚ್ಚು ಜನ ತಮ್ಮ ಮೇಲೇ ಆ ಹಣವನ್ನು ವಿನಿಯೋಗಿಸಲು ಇಷ್ಟಪಡುತ್ತಾರೆ. ಅವರಿಗೆ ಹಿಂದಿನ ಬಡತನ ಮರೆತು ಹೋಗಿರುತ್ತದೆ. ಆದರೆ ನಾಗರಾಜ್ ಎಲ್ಲರಿಗಿಂತಲೂ ಭಿನ್ನವಾಗಿದ್ದರು. "ನಿಮ್ಮ ಸಲಹೆಗೆ ತುಂಬಾ ಧನ್ಯವಾದಗಳು. ಆದರೆ ನೀವು ಬಿಟ್ಟಿಯಾಗಿ ಕೊಡುತ್ತೀರೆಂದು ನಾನು ಅನಾವಶ್ಯಕವಾಗಿ ಸಹಾಯವನ್ನು ಕೇಳುವುದಿಲ್ಲ. ನಮ್ಮ ಕ್ಯಾಂಪಿನಲ್ಲಿ ಇರುವ ವೈದ್ಯರು ವಾರದ ಕೊನೆಗೆ ಮಾತ್ರ ಬರುತ್ತಾರೆ. ನಮ್ಮಿಂದ ಹಣ ತೆಗೆದುಕೊಳ್ಳುವುದಿಲ್ಲ. ನಾನು ಅವರೊಡನೆ ಮಾತನಾಡಿ ಕ್ಯಾಂಪಿಗೆ ಬೇಕಾಗುವ ಔಷಧಿಯ ಪಟ್ಟಿಯೊಂದಿಗೆ ನಿಮ್ಮ ಆಫೀಸಿಗೆ ಬರುತ್ತೇನೆ. ಅಲ್ಲಿಂದ ಔಷಧಿ ತೆಗೆದುಕೊಂಡು ಹೋಗುತ್ತೇನೆ" ಎಂದೆ.

"ಮ್ಯಾಡಂ, ನೀವು ಆಫೀಸಿಗೆ ಬಂದರೆ ಸಂತೋಷ, ಆದರೆ ಔಷಧಿ ಕೊಳ್ಳಲು ಬರಬೇಡಿ. ನೀವು ಪಟ್ಟಿ ಕಳುಹಿಸಿದರೆ ಸಾಕು. ನಮ್ಮ ಹಳೆಯ ಗುಮಾಸ್ತ ಕರೀಂ ತುಂಬಾ ನಂಬಿಕಸ್ಥ. ಹೇಗಾದರೂ ಪ್ರತಿ ತಿಂಗಳ ಮೊದಲ ವಾರದಲ್ಲಿ ಡೆಲಿವರಿ ವ್ಯಾನ್ ನಿಮ್ಮ ಆಫೀಸಿನ ಮುಂದೆ ಹಾಯ್ದು ಹೋಗುತ್ತದೆ. ಆದುದರಿಂದ ಅದನ್ನು ಅವನೇ ಸರಬರಾಜು ಮಾಡುತ್ತಾನೆ". ನಾಗರಾಜ್ ಧ್ವನಿ ತಗ್ಗಿಸಿ "ಮ್ಯಾಡಂ, ನಾನು ಸಹಾಯ ಮಾಡುವುದು ಯಾರಿಗೂ



ತಿಳಿಯಬಾರದು. ಅದನ್ನು ನೀವು ಜನರೆದುರಿಗಾಗಲೀ, ಪೇಪರಿನವರಿಗಾಗಲೀ ತಿಳಿಸಬಾರದು. ನನ್ನ ಕಂಪೆನಿ ಹೆಸರನ್ನು ನೀವು ಎಲ್ಲೂ ಹೊಗಳಬಾರದು. ನಾನು ದಾನವನ್ನು ಗುಪ್ತವಾಗಿ ಮಾಡಲು ಬಯಸುತ್ತೇನೆ. ಬಲಗೈ ಮಾಡಿದ್ದು ಎಡಗೈಗೆ ತಿಳಿಯಬಾರದು ಎನ್ನುವವನು ನಾನು. ದಾನದ ಆನಂದ ಕೊಡುವುದರಲ್ಲಿದೆ ಹೊರತು ಹೆಸರಿನಲ್ಲಿ ಅಲ್ಲ". ಅವರ ಮಾತಿನಿಂದ ನಾನು ಸಂತೋಷದಿಂದ ಅಚ್ಚರಿಗೊಂಡೆ. ಅಂತಹವರನ್ನು ಅನುಮಾನಿಸಿದ್ದಕ್ಕಾಗಿ ನನ್ನನ್ನು ನಾನೇ ಹೀಯಾಳಿಸಿಕೊಂಡು ಮನಸ್ಸಿನಲ್ಲಿ 'ಇಂತಹವರ ಸಂತತಿ ಸಾವಿರವಾಗಲಿ' ಎಂದು ಹಾರೈಸಿದೆ.

ಕಾಲ ಮುಂದೆ ಸರಿಯಿತು. ಮೊದಮೊದಲು ನಾಗರಾಜ್ ಹತ್ತು ಸಾವಿರ ರೂಪಾಯಿ ಮೌಲ್ಯದ ಔಷಧಿ ಕಳುಹಿಸುತ್ತಿದ್ದರು. ಕ್ರಮೇಣ ಅದು ಐವತ್ತು ಸಾವಿರಕ್ಕೆ ಬಂತು. ಅದಲ್ಲದೆ ತಾವು ಹೊಸ ಕಾರು ಕೊಂಡಾಗ ಹಳೆಯ ಕಾರನ್ನು, ಹೊಸ ಫ್ರಿಡ್ಜ್ ಕೊಂಡಾಗ ಹಳೇ ಫ್ರಿಡ್ಜನ್ನು ಆ ಸ್ಲಮ್‌ನಲ್ಲಿರುವ ಆಫೀಸಿಗೆ ದಾನವಾಗಿ ಕೊಟ್ಟರು. ಆದರೆ ಮುಂದೆ ನಾನೆಂದೂ ನಾಗರಾಜ್‌ರನ್ನು ಭೇಟಿ ಮಾಡಲೇ ಇಲ್ಲ. ಕೆಲವು ವೇಳೆ ನಾನು ಕೆಲಸದ ಪ್ರೋಗ್ರೆಸ್ ರಿಪೋರ್ಟ್ ಮತ್ತು ಫೋಟೋ ಕಳುಹಿಸಿದಾಗ ಅವರು ಫೋನ್ ಮಾಡಿ "ನನಗೆ ನಿಮ್ಮ ಕೆಲಸದ ಸಾಕ್ಷಿಯ ಅವಶ್ಯಕತೆಯಿಲ್ಲ. ನಿಮ್ಮ ಮೇಲೆ  ನಂಬಿಕೆ ಇದೆ" ಎನ್ನುತ್ತಿದ್ದರು. ಅವರ ಮಾತು ನನ್ನನ್ನು ಕೆಲವು ಬಾರಿ ನಿರ್ವಿಣ್ಣಳನ್ನಾಗಿ ಮಾಡುತ್ತಿತ್ತು. ಪರರ ನಂಬಿಕೆ ಎಂತಹ ದೊಡ್ಡ ಧನ? ಒಂದು ಬಾರಿ ನಂಬಿಕೆ ಕಳೆದುಕೊಂಡರೆ ತಿರುಗಿ  ಸಿಗುವುದು ಅಸಾಧ್ಯವೋ ಏನೋ.

ಕಾಲಒಣಗಿದ ಎಲೆಯಂತೆ ಹಾರಿಹೋಯಿತು. ಒಂದು ದಿನ ಪೇಪರ್ ಬಿಡಿಸಿ

[redacted]

[redacted]

## ಲೇಖಕರ ಪರಿಚಯ



ಡಾ। ಸುಧಾಮೂರ್ತಿಯವರು ಧಾರವಾಡ ಜಿಲ್ಲೆಯ ಶಿಗ್ಗಾಂವ್ ಗ್ರಾಮದ ಕುಲಕರ್ಣಿ ಮನೆತನದಲ್ಲಿ 1950 ಆಗಸ್ಟ್19 ರಂದು ಜನಿಸಿದರು. ಇವರ ತಂದೆ ರಾಮಚಂದ್ರ ಕುಲಕರ್ಣಿ ಹಾಗೂ ತಾಯಿ ವಿಮಲಾ ಕುಲಕರ್ಣಿ. ಇವರ ಪ್ರಾಥಮಿಕ, ಮಾಧ್ಯಮಿಕ ಹಾಗೂ ಹೈಸ್ಕೂಲ್ ವಿದ್ಯಾಭ್ಯಾಸವೆಲ್ಲಾ ಹುಟ್ಟಿದೂರಿನಲ್ಲೇ ನಡೆಯಿತು. ವಿದ್ಯಾರ್ಥಿ ಜೀವನದಲ್ಲಿ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದ ಇವರು ಎಂ.ಟೆಕ್‌ನಲ್ಲಿ ಆ ಕಾಲಕ್ಕೆ ಚಿನ್ನದ ಪದಕ ಗಳಿಸಿದ ಏಕೈಕ ಮಹಿಳಾ ವಿದ್ಯಾರ್ಥಿ ಎನಿಸಿಕೊಂಡರು.

ಟೆಲ್ಕೋದ ಪುಣೆ, ಮುಂಬಯಿ ಹಾಗೂ ಜೆಮ್‌ಶೆಡ್‌ಪುರ ಶಾಖೆಗಳಲ್ಲಿ ಡೆವಲಪ್‌ಮೆಂಟ್ ಇಂಜಿನಿಯರ್ ಆಗಿದ್ದ ಇವರು ಟೆಲ್ಕೋಗೆ ಪ್ರವೇಶ ಪಡೆದ ಪ್ರಥಮ ಮಹಿಳಾ ಇಂಜಿನಿಯರ್ ಎನ್ನುವ ಹೆಗ್ಗಳಿಕೆಯನ್ನು ಗಳಿಸಿದರು. 1996ರಲ್ಲಿ ತಮ್ಮ ಪತಿ ಶ್ರೀನಾರಾಯಣಮೂರ್ತಿಯವರ ಜೊತೆಗೂಡಿ ಬೆಂಗಳೂರಿನಲ್ಲಿ ಇನ್ಫೋಸಿಸ್ ಫೌಂಡೇಶನ್ ಪ್ರಾರಂಭಿಸಿದರು. ಇವರ ಕೆಲವು ಕೃತಿಗಳು ಕನ್ನಡ ಪತ್ರಿಕೆಗಳಲ್ಲಿ ಧಾರವಾಹಿಗಳಾಗಿ ಪ್ರಕಟಿಸಲ್ಪಟ್ಟಿವೆ. ಇವರ ಶಾಲಾ ಮಕ್ಕಳಿಗಾಗಿ ಕಂಪ್ಯೂಟರ್, ಡಾಲರ್‌ಸೊಸೆ, ಮಹಾಶ್ವೇತಾ, ಅತಿರಿಕ್ತೆ, ಮನದ ಮಾತು ಮೊದಲಾದ ಮಕ್ಕಳಿಗಾಗಿ ಬರೆದ ಕೃತಿಗಳು ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ಪ್ರಕಟವಾಗಿವೆ. ಎರಡು ಪ್ರವಾಸ ಕಥನಗಳನ್ನೂ ಬರೆದಿದ್ದಾರೆ. ಇವರಿಗೆ 1995ರಲ್ಲಿ ಬೆಂಗಳೂರಿನ ರೋಟರಿ ಕ್ಲಬ್‌ನಿಂದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, 2000ರಲ್ಲಿ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ, ಸಮಾಜ ಸೇವೆಗಾಗಿ 2000ರ ಸಾಲಿನ ಓಜಸ್ವಿನಿ ಪ್ರಶಸ್ತಿ, 2007ರಲ್ಲಿ ಮಹಾರಾಷ್ಟ್ರದ ಶಿವಾಜಿ ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಇತ್ಯಾದಿಗಳು ದೊರೆತಿವೆ. 'ಗುಪ್ತದಾನಿ' ಅನುಭವ ಕಥನವನ್ನು ಅವರ 'ಏರಿಳಿತದ ದಾರಿಯಲ್ಲಿ' ಎಂಬ ಸಂಕಲನದಿಂದ ಆರಿಸಲಾಗಿದೆ.

### ಆಶಯ ಗ್ರಹಣ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

- ನಾಗರಾಜರು ತಾವು ಮಾಡುವ ದಾನವನ್ನು ಗುಪ್ತವಾಗಿಡಲು ಬಯಸಿದ್ದು ಯಾಕೆ?
- ಲೇಖಕಿಯವರ ಸಮಾಜ ಸೇವೆಗೆ ನಾಗರಾಜರು ಹೇಗೆ ಕೈಜೋಡಿಸಿದರು?
- ನಾಗರಾಜರ ಮರಣಾನಂತರ ಬಡವರಿಗಾಗಿರುವ ಉಚಿತ ವೈದ್ಯಕೀಯ ಶಿಬಿರಕ್ಕೆ ಲಭಿಸುತ್ತಿದ್ದ ಸಹಾಯದಲ್ಲಿ ಆದ ಬದಲಾವಣೆಗಳೇನು?
- ನಾಗರಾಜರ ಪುತ್ರ ಸಾಕೇತ್ ಲೇಖಕಿಯವರ ಮುಂದಿಟ್ಟ ನಿಬಂಧನೆಗಳೇನು?
- ಸಾಕೇತ್‌ನ ಸಹಾಯವನ್ನು ಲೇಖಕಿಯವರು ನಿರಾಕರಿಸಲು ಕಾರಣವೇನು?

## ಪಾತ್ರ ಚಿತ್ರಣ ಮಾಡಿರಿ

- "ಮ್ಯಾಡಂ, ನಾನು ಸಹಾಯ ಮಾಡುವುದು ಯಾರಿಗೂ ತಿಳಿಯಬಾರದು, ಬಲಗೈ ದಾನ ಮಾಡಿದ್ದು ಎಡಗೈಗೆ ತಿಳಿಯಬಾರದು ಎನ್ನುವವನು ನಾನು. ದಾನದ ಆನಂದ ಕೊಡುವುದರಲ್ಲಿದೆ ಹೊರತು ಹೆಸರಿನಲ್ಲಿ ಅಲ್ಲ". ಇದು ಗುಪ್ತದಾನಿ ನಾಗರಾಜರು ಲೇಖಕಿ ಸುಧಾಮೂರ್ತಿಯವರಲ್ಲಿ ಹೇಳಿದ ಮಾತುಗಳು. ಇದರ ಆಧಾರದಲ್ಲಿ ನಾಗರಾಜರ ಪಾತ್ರ ಚಿತ್ರಣ ಬರೆಯಿರಿ.

## ಆಂಗ್ಲ ಪದಗಳಿಗೆ ಸಂವಾದಿ ಪದ ಬಳಸಿ ವಾಕ್ಯ ರಚಿಸಿರಿ

ಪಾಠಭಾಗದಲ್ಲಿ ಹಲವು ಆಂಗ್ಲ ಪದಗಳು ಬಂದಿವೆ. ಅವುಗಳನ್ನು ಸಂಗ್ರಹಿಸಿ ಅವುಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ತಯಾರಿಸಿರಿ.

- ಮಾದರಿ : ನಮ್ಮ ಶಾಲೆಯಲ್ಲಿ ನಡೆದ ರಕ್ತದಾನ ಕ್ಯಾಂಪ್‌ನಲ್ಲಿ ತುಂಬ ಜನ ಭಾಗವಹಿಸಿದ್ದರು.
- ನಮ್ಮ ಊರಿನಲ್ಲಿ ಲಯನ್ಸ್ ಕ್ಲಬ್ಬಿನವರು ನಡೆಸಿದ ನೇತ್ರ ಚಿಕಿತ್ಸಾ ಶಿಬಿರವು ಯಶಸ್ವಿಯಾಯಿತು

## ಲೇಖನ ಬರೆಯಿರಿ

- ಲೇಖಕಿ ಸುಧಾಮೂರ್ತಿಯವರು ಉಚಿತ ವೈದ್ಯಕೀಯ ಶಿಬಿರದ ಮೂಲಕ ಬಡವರಿಗಾಗಿ ಸಹಾಯ ಮಾಡಿದ ರೀತಿಯನ್ನು ಓದಿ ತಿಳಿದಿರುವಿರಿ. ಪ್ರಾಕೃತಿಕ ವಿಕೋಪಗಳು ಉಂಟಾಗುವ ಸಂದರ್ಭವಿದ್ದಲ್ಲಿ ಪೂರ್ವಭಾವಿಯಾಗಿ ಎಚ್ಚರಿಕೆ ವಹಿಸುವುದು ಅಗತ್ಯ. ತ್ಸುನಾಮಿ ಮುನ್ಸೂಚನೆ ಲಭಿಸಿದಾಗ ಜನರ ಪ್ರಾಣ, ಆಸ್ತಿಗಳ ಸಂರಕ್ಷಣೆಗೆ ನೀವು ಕೈಗೊಳ್ಳಬಹುದಾದ ಕಾರ್ಯಗಳ ಕುರಿತು ಲೇಖನ ಬರೆಯಿರಿ.

## ಸಂಕ್ಷೇಪಿಸಿ ಬರೆಯಿರಿ

ಕೆಳಗಿನ ಗದ್ಯಭಾಗವನ್ನು ಓದಿ ಆಶಯಕೆಡದಂತೆ ಸಂಕ್ಷೇಪಿಸಿ ಬರೆಯಿರಿ.

ಮೂಕಿಯಾದ ಶುಭಾಳಿಗೆ ಮನೆಯಲ್ಲಿ ತುಂಬಾ ಬೇಕಾದವರು ಇರಲಿಲ್ಲವೆಂದಲ್ಲ. ಮನೆಯ ಕೊಟ್ಟಿಗೆಯಲ್ಲಿ ಎರಡು ಹಸುಗಳಿದ್ದವು. ಶುಭಾ ದಿನವೂ ಅಲ್ಲಿಗೆ ಅಡಿಯಿಡುತ್ತಿದ್ದುದನ್ನು ಅವಳ ಮೆಲ್ಲನೆಯ ಹೆಜ್ಜೆ ಸದ್ದೇ ಸಾರುತ್ತಿತ್ತು. ಹಸುಗಳಿಗೆ ಮಾತಿರದ ಅವಳ ಪ್ರೀತಿಯೇ ಇಷ್ಟ. ಮಾತಿನ ನಾದಕ್ಕಿಂತ ಅವಳ ಮಾತಿರದ ವರ್ತನೆಯೇ ಪ್ರಿಯ. ಸಿಟ್ಟಿನಿಂದ ಅವಳು ಗದರಿಸುವಂತೆ ಕಣ್ಣುಬಿಟ್ಟರೆ, ಪ್ರೀತಿಯಿಂದ ಮೈದಡವಿದರೆ ಆ ಮೂಕಪ್ರಾಣಿಗಳಿಗೆ ಅರ್ಥವಾಗುತ್ತಿತ್ತು. ಮಾತಾಡಬಲ್ಲ ಬುದ್ಧಿಶಕ್ತಿಯುಳ್ಳ ಮನುಷ್ಯನಿಗಿಂತ ಹೆಚ್ಚು ಮಮತೆಯನ್ನು ಆ ಹಸುಗಳು ತೋರಿಸುತ್ತಿದ್ದವು. ಶುಭಾ ಕೊಟ್ಟಿಗೆಗೆ ಬಂದು ಪ್ರೀತಿಯಿಂದ ಅವುಗಳ ಕತ್ತನ್ನು ತಬ್ಬಿಕೊಂಡು ತನ್ನ ಕೆನ್ನೆಯಿಂದ ಅವುಗಳ ಮುಖವನ್ನು ಮುದ್ದಿಸುತ್ತಿದ್ದಳು. 'ಪಂಗುಳಿ' ಎಂಬ ಹಸುವನ್ನು ಸಮೀಪಿಸಿ, ಅದರ ಮುಖಕ್ಕೆ ಮುಖವಿಟ್ಟು ನೋಡಿದರೆ ಅದು ಅಕ್ಕರೆಯಿಂದ ನಾಲಿಗೆ ಚಾಚಿ, ಬಿಡುಗಣ್ಣಿನಿಂದ ಅವಳ ಮುಖವನ್ನೇ ದಿಟ್ಟಿಸಿ, ಇದೆಲ್ಲ ತನಗೆ ಇಷ್ಟ ಎಂದು

NT-269-3-KANNADA-10-BT

ತೋರಿಸುತ್ತಿತ್ತು. ಶುಭಾ ದಿನಕ್ಕೆ ಮೂರು ಬಾರಿ ಈ ಹಸುಗಳ ಬಳಿ ಸಾರುತ್ತಿದ್ದಳು. ಅವಳು ಬರದಿದ್ದರೆ, ಬರುವುದು ತಡವಾದರೆ ಅವು ಅವಳ ದಾರಿಯನ್ನೇ ಕಾಯುತ್ತಿದ್ದವು. ಬೇಸರವಾದಾಗ, ಯಾರಾದರೂ ತನ್ನ ಮನಸ್ಸು ನೋಯುವಂತೆ ಮಾತಾಡಿದಾಗ ಶುಭಾ ಈ ಹಸುಗಳ ಹತ್ತಿರ ಬರುವುದು ರೂಢಿ. ಅವಳು ಬಂದಾಗ ಅವಳಿಗೆ ಶಾಂತಿ ನೀಡುವ ಹಾಗೆ ಹಸುಗಳು ಕುಣಿಯತೊಡಗುತ್ತಿದ್ದವು. ಮನೆಯಲ್ಲಿ ಬೆಕ್ಕು, ಮೇಕೆಗಳಿದ್ದರೂ ಶುಭಾ ಅವುಗಳನ್ನು ಆದರಿಸುತ್ತಿರಲಿಲ್ಲ. ಒಮ್ಮೊಮ್ಮೆ ಬೆಕ್ಕು ಅವಳ ತೊಡೆಯೇರಿ ಅಲ್ಲಿಯೇ ನಿದ್ರಿಸಲು ಅನುವಾಗುತ್ತಿತ್ತು. ತನ್ನನ್ನು ಬಯಸಿ ಬಂದ ಆ ಬೆಕ್ಕನ್ನು ದೂಡದೆ ಅವಳು ಮೆಲ್ಲನೆ ಅದರ ಮೈಸವರುತ್ತಿದ್ದಳು.



## ಪ್ರಶ್ನೆ ತಯಾರಿಸಿರಿ

ಕೆಳಗಿನ ಗದ್ಯಭಾಗವನ್ನು ಓದಿ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

ನಮ್ಮ ಶರೀರವು ಪ್ರಕೃತಿದತ್ತವಾದುದು. ಈ ದೇಹವನ್ನು ಶಕ್ತಿಯುತವಾಗಿರುವಂತೆ ಕಾಪಾಡುವುದು ನಮ್ಮಮೊದಲ ಕರ್ತವ್ಯ. ಅದಕ್ಕಾಗಿ ನಾವು ರೋಗನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಯೋಗಾಭ್ಯಾಸದ ಮೂಲಕ ಅಂತಹ ಶಕ್ತಿಯನ್ನು ಸಂಪಾದಿಸಬಹುದಾಗಿದೆ. ಭಾರತೀಯರು ಬಹುಪುರಾತನಕಾಲದಿಂದಲೂ ಯೋಗಾಭ್ಯಾಸವನ್ನು ಮಾಡಿ ಅನೇಕ ವರ್ಷಗಳ ಕಾಲ ದೃಢಕಾಯರಾಗಿ ಬದುಕುತ್ತಿದ್ದರು. ಉದಾತ್ತ ಧ್ಯೇಯಗಳನ್ನು ಅನುಷ್ಠಾನಮಾಡಿ ನಿರೋಗಿಗಳಾಗಿರಲು ಪ್ರಯತ್ನಿಸುತ್ತಿದ್ದರು. ಯೋಗಾಸನದ ಮುಖ್ಯಧ್ಯೇಯ ದೇಹವನ್ನು ಮನಸ್ಸಿನಿಂದ ನಿಯಂತ್ರಿಸುವುದು. ಯೋಗಾಭ್ಯಾಸಕ್ಕೆ ವಯಸ್ಸಿನ ಅಂತರವಿಲ್ಲ. ಎಲ್ಲರೂ ಇದನ್ನು ಸುಲಭವಾಗಿ ಅಭ್ಯಾಸ ಮಾಡಬಹುದು. ಇದರಿಂದ ಮಧುಮೇಹ, ಉಬ್ಬಸ, ರಕ್ತದ ಒತ್ತಡ ಮೊದಲಾದ ರೋಗಗಳನ್ನು ಗುಣಪಡಿಸಬಹುದು. ಯೋಗವೆಂದರೆ ಮನಸ್ಸನ್ನು ಕೇಂದ್ರೀಕರಿಸುವುದು. ಅಂತರ್ಯದಲ್ಲಿ ಅಡಗಿರುವ ಸಹಜಶಕ್ತಿಯನ್ನು ಪ್ರಕಟಿಸುವ ಕಾರ್ಯವನ್ನು ಇದು ನೆರವೇರಿಸುತ್ತದೆ. ಯೋಗದಿಂದ ದೇಹವೂ ಬುದ್ಧಿಯೂ ಚುರುಕಾಗುತ್ತವೆ. ಮಾನವ ಜೀವಿಸಲು ಶ್ವಾಸೋಚ್ಛ್ವಾಸಗಳು ಅತಿಮುಖ್ಯ. ಅವುಗಳ ಹತೋಟಿಯೇ ಯೋಗ. ಉಸಿರನ್ನು ಹಿಡಿದಿಟ್ಟುಕೊಳ್ಳುವುದೂ ದೃಢವಾದ ಕಾಯವನ್ನು ಹೊಂದುವುದೂ ಯೋಗಾಸನದ ಧ್ಯೇಯವಾಗಿದೆ.



## ಟಿಪ್ಪಣಿ ಬರೆಯಿರಿ

- "ಮ್ಯಾಡಂ, ಬಲಗೈಯಲ್ಲಿ ದಾನ ಮಾಡಿದ್ದು ಎಡಗೈಗೆ ತಿಳಿಯಬಾರದು ಎನ್ನುವವನು ನಾನು, ದಾನದ ಆನಂದ ಕೊಡುವುದರಲ್ಲಿದೆ ಹೊರತು ಹೆಸರಿನಲ್ಲಿ ಅಲ್ಲ". ಇದು ತಂದೆ ನಾಗರಾಜು ಅವರು ಹೇಳುವ ಮಾತು. "ಅಪ್ಪ ಅಪಾರ ಹಣವನ್ನು ದಾನವಾಗಿ ಕೊಟ್ಟರೇ ಹೊರತು ಯಾವುದೇ ಲಾಭವನ್ನು ಮಾಡಿಕೊಳ್ಳಲಿಲ್ಲ. ಹಾಗೆ ನಿರರ್ಥಕವಾಗಿ ಹೋದ ಹಣವನ್ನು ಇಂದು ಸೆಟಲ್ ಮಾಡಬೇಕೆಂದು ನಿರ್ಧರಿಸಿದ್ದೇನೆ". ಇದು ಮಗ ಸಾಕೇತ್ ಹೇಳುವ ಮಾತು. ಈ ಮಾತುಗಳ ಆಧಾರದಲ್ಲಿ ಸಮಾಜಸೇವೆ, ಪರೋಪಕಾರ ಇತ್ಯಾದಿ ವಿಷಯಗಳಲ್ಲಿ ಹಿಂದಿನ ತಲೆಮಾರು ಹಾಗೂ ಇಂದಿನ ತಲೆಮಾರಿನೊಳಗಿರುವ ದೃಷ್ಟಿಕೋನವನ್ನು ಈ ಪಾಠದ ಆಧಾರದಲ್ಲಿ ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.



# ಎಲ್ಲಿ ಹೋದರೋ ಅವರು ಎಂದು ಬರುವರು?

– 'ವೈದೇಹಿ'

ಎಲ್ಲಿಂದ ಬಂದರೋ
ಎಲ್ಲಿ ಸಂದರೋ ಅವರು
ಇಲ್ಲಿದ್ದಷ್ಟು ಕಾಲ ತನ್ನದೆಂದವರು

ದಣಿವೆನ್ನದ ಯೋಧ
ವೃದ್ಧನಾಗದ ವೃದ್ಧ
ಕನ್ನಡದ ಭೀಷ್ಮ ಪಿತಾಮಹರು
ತನ್ನಿಚ್ಛೆಯಂತೆಯೇ ಮರೆಯಾದರು!

ನಡೆದ ನಡಿಗೆಯೆ ನುಡಿ
ನುಡಿಯ ನಡಿಗೆಯೆ ಭಾಷೆ
ಕೃತಿ ಆಕೃತಿಯಲ್ಲೂ ಬೆರೆಸಿಕೊಂಡವರು

ಅವರು ಇವರೆಂಬ ಪರಿಭೇದವಿಲ್ಲದೆ
ಹೊತ್ತು ಮರೆಯುವ ಮಸ್ತು ಮಾತಿನವರು
ಮಾತು ಮಾತಿನಲೂ ಭೂಮಿ – ಭೂಮ ಪ್ರಜ್ಞೆ
ಜೋಕು ಜೀಕುವ ನಿತ್ಯ ಆರೋಗ್ಯದವರು
ವೈರಾಗ್ಯವೆಂಬುದನೆ ತಾಳದವರು!

ಎಲ್ಲಿಂದ ಬಂದರೋ
ಎಲ್ಲಿ ಸಂದರೋ ಅವರು
ಕಡಲಂತೆ ಇದ್ದರು – ಹೋದರು!

ಕೆಸರು ಕೆರೆ ಹೊಳೆ ಗುಡ್ಡ ಏರು ಇಳಿಜಾರು
ಚಳಿಗಾಳಿ ಮಳೆ ಬಿಸಿಲು ಬರಸಿಡಿಲು ಗುಡಿಸಲು
.... ಕಷ್ಟ ಸುಖ ತಿಳಿದವರು
ಹೆಗಲು ಕೊಡುವವರು

ಎತ್ತಹೋದರು ನಮ್ಮ ಒಡಲಿನವರು?
ಎತ್ತಿಕೊಂಡರು ಯಾವ ಕಡಲಿನವರು?

ಘರ್ಜಿಸಲು ಬಲ್ಲರು
ಪಿಸುನುಡಿಯಲೂ
ಕುಣಿತವನು ಬಲ್ಲಂತೆ ಕತೆ ಹೇಳಲೂ.

ಪ್ರಾಮಾಣಿಕತೆಗೆ ಮೊದಲ ಮಣೆ ಇಡುವವರು
ಅನುಭವದ ನಾಭಿಯಲಿ ಸೃಷ್ಟಿ ಹಟದವರು
ಯಕ್ಷಲೋಕದ ಬ್ರಹ್ಮ
ಸಿಂಹ – ಸುಂದರರು!

ಇದ್ದಷ್ಟು ದಿನವೂ ಕ್ಷಣವೆ ಧನವೆಂದು
ಜ್ಞಾನಕಾನನದಲ್ಲಿ ಅಡ್ಡಾಡಿದವರು
ತಿಳಿದೆಲ್ಲ ತಿಳಿವನ್ನು ಹಂಚಿಯೂ ಹಂಚಿಯೂ
ತಿಳಿವ – ತಿಳಿಸುವ ದಾಹ ತೀರದವರು
ಅಜ್ಞಾನದೆದುರು ಮರುಗಿದವರು.
ಮಾತೃ ಕರುಳಿನ ಗಂಡು
ಪಿತೃ ಕೊರಳಿನ ಹೆಣ್ಣು
ಸ್ತ್ರೀ ಪುರುಷ ಸಂವೇದನೆ ಆಯ್ದ ಮೊತ್ತ
ಭೌತ ಲೋಕದ ದೊಡ್ಡ ಭಕ್ತ
ಸಾವಿಗೂ ಹೋಗಿ ಬಾ – ಈಗ ಬಾ ಎಂದವರು
ಕಾಲಪುರುಷನ ಜೊತೆಗೆ ಮೌನ ಸಾಗಿದರು!

ಅರಸುತಿದೆ ಕಣ್ಣು ಕಾರಂತರನ್ನು
ಸಭೆ ತುಂಬಿ ಬರುವ ಆ ಪುಣ್ಯವನ್ನು
ಭಾಗ್ಯ ಕಳೆಯುವ ನೋವು ಬಲ್ಲಿರಾ?
ಕನ್ನಡಿಗರನು ಕೇಳಿ ಕನ್ನಡದ ಚಪ್ಪರದಿ
ನಿಶ್ಶಬ್ದ ಕಂಬನಿಗೆ – ಬೇಕೆ ವಿವರ?

ಎಲ್ಲಿಂದ ಬಂದರೋ
ಎಲ್ಲಿ ಸಂದರೋ ಅವರು
ನಮ್ಮೆಲ್ಲರೆದೆಯಲ್ಲಿ ಶಾಶ್ವತದವರು
ಕನ್ನಡದ ಭಾರತದ ವಿಶ್ವಚೇತನರು.

ಶತಮಾನದಂಗಳದಿ ಆಡಿ ಆಡೀ ಮಗು
ಕಣ್ಮುಚ್ಚಿ ಮಲಗಿಹುದು ನಿದ್ದೆ ಹೊದ್ದು

ಯಾವ ಯುದ್ಧದ ಕರೆಯೊ
ಯಾವ ಕನಸಿನ ಲೋಕ
ಯಾವ ಗ್ರಹ ತಾರೆಗಳ ಸಂಚಾರವೋ
ಯಾವೆಂಥ ಋಣಭಾರ ಸಂದಾಯವೋ
ಮುಗಿಸಿ ಬರಲಿದೆ ಕೂಸು
ನಿದ್ದೆ ತಿಳಿದು – ಮತ್ತೆ
ಕನ್ನಡದಿ ಕಡಲ ಕಡೆಯಲಿಹುದು
.... ಕಾಯೋಣ ದಡದಲ್ಲಿ ನೆಟ್ಟು ಮನಸು.

ಸದ್ದು ಮಾಡಲು ಬೇಡಿ
ನಿದ್ದೆ ಕೆಡಿಸಲು ಬೇಡಿ
ಶ್ರದ್ಧೆಯಲಿ ನೆನಪ ತೂಗಿ
ಶ್ರದ್ಧೆಯಲಿ ನೆನಪಿನಲೆ ತೂಗುತ್ತ – ಕಾರಂತ
ಬರುವಂಥ ನೆಲವನ್ನು
ಶುದ್ಧಮಾಡಿ.



## ಕವಿಪರಿಚಯ

**‘ವೈದೇಹಿ’** ಎಂಬ ಕಾವ್ಯನಾಮದಿಂದಲೇ ಪ್ರಖ್ಯಾತರಾದ ಜಾನಕಿ ಶ್ರೀನಿವಾಸಮೂರ್ತಿಯವರು ದಿನಾಂಕ ೧೨-೨-೧೯೪೫ರಂದು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಜನಿಸಿದರು. ಇವರ ತಂದೆ ಎ.ವಿ.ಎನ್. ಹೆಬ್ಬಾರ್. ತಾಯಿ ಮಹಾಲಕ್ಷ್ಮಿ. ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಬಿ.ಕಾಂ. ಪದವಿ ಮುಗಿಸಿದ ಇವರ ಸಾಹಿತ್ಯ ಸೇವೆ ಅಪಾರವಾದುದು.

ಮರಗಿಡಬಳ್ಳಿ, ಅಂತರಂಗದ ಪುಟಗಳು, ಗೋಲ, ಅಮ್ಮಚ್ಚಿಯೆಂಬ ನೆನಪು (ಸಣ್ಣಕತೆಗಳು), ಬಿಂದುಬಿಂದಿಗೆ, ಪಾರಿಜಾತ (ಕವನಸಂಕಲನಗಳು), ಅಸ್ಪೃಶ್ಯರು (ಕಾದಂಬರಿ), ಧಾಂಧೂಂ ಸುಂಟರಗಾಳಿ, ಮೂಕನ ಮಕ್ಕಳು (ಮಕ್ಕಳ ಸಾಹಿತ್ಯ) ಮಲ್ಲಿನಾಥನ ಧ್ಯಾನ ಜಾತ್ರೆ (ಪ್ರಬಂಧಗಳು), ಬೆಳ್ಳಿಯ ಸಂಕೋಲೆ, ಸೂರ್ಯಕಿನ್ನರಿಯರು, ಸಂಗೀತ ಸಂವಾದ (ಅನುವಾದ ಸಾಹಿತ್ಯ) ಇತ್ಯಾದಿ ಇವರ ಕೃತಿಗಳಾಗಿವೆ. ಇವರು ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಗೆಲ್ಲ ಭಾಜನರಾಗಿದ್ದಾರೆ. ಅಲ್ಲದೆ ಇವರಿಗೆ ಗೀತಾ ದೇಸಾಯಿ ದತ್ತಿನಿಧಿ, ಅನುಪಮ ಪುರಸ್ಕಾರ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಗಳ ಗೌರವವೂ ಸಂದಿವೆ.

ಗೃಹಿಣಿಯಾದ ವೈದೇಹಿಯವರು ಸ್ತ್ರೀಸಂವೇದನೆಯನ್ನು ಬಹು ನವುರಾಗಿ, ಅಷ್ಟೇ ಶಕ್ತವಾಗಿ ತಮ್ಮ ಬರವಣಿಗೆಯ ಮೂಲಕ ಅಭಿವ್ಯಕ್ತಪಡಿಸುವಲ್ಲಿ ಸಮರ್ಥರು. ಈ ಕವನವನ್ನು ಅವರ ‘ಪಾರಿಜಾತ’ ಎಂಬ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

ಕನ್ನಡದ ಚಪ್ಪರದಿ
ನಿಶ್ಯಬ್ದ ಕಂಬನಿಗೆ - ಬೇಕೆ ವಿವರ?

ಡಾ. ಶಿವರಾಮ ಕಾರಂತರು ತೀರಿಹೋದ ಕೆಲವೇ ದಿನಗಳಲ್ಲಿ ಮಂಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಯಿತ್ರಿ ಈ ಕವನವನ್ನು ವಾಚಿಸಿದ್ದರು. 'ಕನ್ನಡದ ಚಪ್ಪರದಿ' ಎಂದು ಈ ಸಮಾರಂಭವನ್ನು ಉದ್ದೇಶಿಸಿ ಹೇಳಲಾಗಿದೆ.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1 "ಕಾರಂತರು ತಮ್ಮ ಜೀವನದಲ್ಲಿ ವೈರಾಗ್ಯವನ್ನೇ ತಾಳಿದವರಲ್ಲ" ಎಂದು ಕವಯಿತ್ರಿ ಯಾವ ಆಧಾರದಲ್ಲಿ ಹೇಳುತ್ತಾರೆ?

2 ಕಾರಂತರ ಜ್ಞಾನದಾಹದ ಕುರಿತು ಕವಯಿತ್ರಿ ಏನು ಹೇಳುತ್ತಾರೆ?

3 ಕನ್ನಡಿಗರು ಕನ್ನಡ ಚಪ್ಪರದಲ್ಲಿ ನಿಶ್ಯಬ್ದ ಕಂಬನಿ ಸುರಿಸಲು ಕಾರಣವೇನು?

4 ಕವನದ ಕೊನೆಯಲ್ಲಿ ಯಾವ ನಿರೀಕ್ಷೆ ವ್ಯಕ್ತವಾಗುತ್ತದೆ?

5 ಕವನವು ಯಾವ ಕರೆಯೊಂದಿಗೆ ಮುಕ್ತಾಯಗೊಳ್ಳುತ್ತದೆ?



## ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಸಾಲುಗಳ ಸ್ವಾರಸ್ಯ ಬರೆಯಿರಿ.

- ಘರ್ಜಿಸಲು ಬಲ್ಲರು
  ಪಿಸುನುಡಿಯಲೂ
  ಕುಣಿತವನು ಬಲ್ಲಂತೆ ಕತೆ ಹೇಳಲೂ

- ಶತಮಾನದಂಗಳದಿ ಆಡಿ ಆಡೀ ಮಗು
  ಕಣ್ಮುಚ್ಚಿ ಮಲಗಿಹುದು. ನಿದ್ದೆ ಹೊದ್ದು.



## ಆಶಯ ಬರೆಯಿರಿ

- 'ಎಲ್ಲಿ ಹೋದರೋ ಅವರು ಎಂದು ಬರುವರು' ಕವನದ ಆಶಯವನ್ನು ಬರೆಯಿರಿ.



## ಪ್ರಬಂಧ ಬರೆಯಿರಿ

ಕವಯಿತ್ರಿ ವೈದೇಹಿ ಅವರು ಕವನದಲ್ಲಿ ಡಾ। ಶಿವರಾಮ ಕಾರಂತರ ಆರೋಗ್ಯಪೂರ್ಣ ಜೀವನದ ಬಗ್ಗೆ ಉಲ್ಲೇಖಿಸಿರುವುದನ್ನು ಕಾಣಬಹುದು. ಕಾರಂತರು ಮಾನಸಿಕವಾಗಿ, ಶಾರೀರಿಕವಾಗಿ ಆರೋಗ್ಯವಂತರಾಗಿದ್ದರು ಎಂಬುದು ಅವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ. ಈ ಹಿನ್ನೆಲೆಯಲ್ಲಿ 'ಶಾರೀರಿಕ ಮತ್ತು ಮಾನಸಿಕ ಆರೋಗ್ಯ ಸಂರಕ್ಷಣೆ' ಎಂಬ ವಿಷಯದ ಕುರಿತು ಕೊಟ್ಟಿರುವ ಹೆಗ್ಗುರುತುಗಳನ್ನು ಗಮನಿಸಿಕೊಂಡು ಒಂದು ಪ್ರಬಂಧವನ್ನು ಬರೆದು ವಿಚಾರಗೋಷ್ಠಿಯಲ್ಲಿ ಮಂಡಿಸಿರಿ.

ಹೆಗ್ಗುರುತುಗಳು : ಉತ್ತಮ ಆಹಾರ - ಶಿಕ್ಷಣ - ವ್ಯಾಯಾಮ - ಕ್ರೀಡೆ - ಯೋಗ - ಉತ್ತಮ ಹವ್ಯಾಸ.



### ಜೀವನ ಚರಿತ್ರೆ ಬರೆಯಿರಿ

- 'ಎಲ್ಲಿ ಹೋದರೋ ಅವರು ಎಂದು ಬರುವರು?' ಕವನದಲ್ಲಿ ಶಿವರಾಮ ಕಾರಂತರ ಜೀವನದ ವಿಚಾರಗಳನ್ನು ಪ್ರತಿಪಾದಿಸಲಾಗಿದೆ. ಕವನ ಮತ್ತು ಇತರ ಮಾಹಿತಿಗಳ ಆಧಾರದಲ್ಲಿ ಕಾರಂತರ ಸಂಕ್ಷಿಪ್ತ ಜೀವನ ಚರಿತ್ರೆ ಬರೆಯಿರಿ.



### ಸ್ಲೈಡ್ ತಯಾರಿಸಿರಿ

- ಕನ್ನಡ ಸಾಹಿತ್ಯ ಲೋಕದ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳು ಮತ್ತು ಅವರ ಕೃತಿಗಳ ಹೆಸರುಗಳನ್ನು ಸಂಗ್ರಹಿಸಿರಿ. ಅವುಗಳನ್ನು ಬಳಸಿ ಪ್ರೆಸೆಂಟೇಷನ್ ಸಾಫ್ಟ್‌ವೇರ್ ಮೂಲಕ ಸ್ಲೈಡ್ ತಯಾರಿಸಿರಿ.

# ನೀರು

– ಜನಾರ್ದನ ಎರ್ಪಕಟ್ಟೆ

"ಅಪ್ಪಾ, ಚಂಡಿಪಸೆ ಜೇಡಿಮಣ್ಣು ಸಿಕ್ಕಿಕ್ಕೆ ಶುರು ಆಗಿದೆ. ಇನ್ನು ಒಂದು ಕೋಲು ಅಗೆದರೆ ಸಾಕು, ನೀರು ಸಿಗಬಹುದಂತೆ" ಮಗ ಶಂಕರ ಅಂಗಳಕ್ಕೆ ಬರುತ್ತಾ ಕೂಗಿ ಹೇಳಿದ. ಜಗಲಿಯಲ್ಲಿ ಕುಳಿತು ಏನೋ ಆಲೋಚಿಸುತ್ತಿದ್ದ ಮಾಲಿಂಗನ ಮುಖದಲ್ಲಿ ಮಂದಹಾಸ ಮಿನುಗಿತು.

"ಆಗ್ಲಿ ಮಗಾ... ಎಷ್ಟು ವರ್ಷಗಳ ಆಸೆ ನಮ್ಮದು. ನೋಡುವ; ದೇವರು ಕಣ್ಣು ಬಿಟ್ಟಾನು...."

"ಅಪ್ಪಾ ನೀವು ಈಗ್ಲೇ ಅಲ್ಲಿಗೆ ಬರೋದು ಬೇಡ. ರಣ ಬಿಸಿಲು. ನೀರು ಕಂಡಾಗ ಹೇಳ್ತೇನೆ..." ಎನ್ನುತ್ತಾ ಶಂಕರ ತಂಗಿ ಶಾರದೆಯನ್ನು ಕರೆದು ಒಂದು ಚೆಂಬು ಕುಡಿಯುವ ನೀರನ್ನು ಪಡೆದು ನೂರು ಮಾರು ದೂರದಲ್ಲಿದ್ದ ಬಾವಿ ತೆಗೆಯುವ ಜಾಗಕ್ಕೆ ಓಡುತ್ತಾ ಹೋದ.

ಎಷ್ಟು ವರ್ಷಗಳ ಆಸೆ? ತನ್ನ ಸ್ವಂತ ಮಣ್ಣಿನ ಒಡಲಿನಿಂದ ಒಂದು ಹನಿ ನೀರು ಕುಡಿವ ಬಯಕೆ! ಎಲ್ಲ ಕೆಲಸಗಳನ್ನೂ ಈ ಕೈಯಾರೆ ಮಾಡಿ ಬಯಕೆಯನ್ನು ಈಡೇರಿಸಿಕೊಳ್ಳಬೇಕಾಗಿತ್ತು. ಆದರೆ ದುರದೃಷ್ಟ. ಎಲ್ಲಿಂದಲೊ ಬಂದ ಉಳುಕು ವಾತವಾಗಿ ಹೊಡೆದು ಬಲಭಾಗದ ಕೈಕಾಲುಗಳ ಸ್ವಾಧೀನ ತಪ್ಪಿಸಿ ಮಾತು ಉಳಿಸಿ ಓಡಿಹೋಗಿತ್ತು.

ಅಡ್ಕದ ಹೆಸರಾಂತ ವೈದ್ಯ ಸುಕ್ರನ ಹೆಸರು ಹೇಳಿ ಒಂದು ಗುಟುಕು ಕುರ್ದಿ ನೀರು ಕುಡಿದು ಕಾಲಿಗೆ ಒಂದು ಚಮಚ ತೆಂಗಿನಎಣ್ಣೆ ಸವರಿ ವಿಷ್ಣುಮೂರ್ತಿ, ಕಲ್ಲುರ್ಟಿ, ಚೆನ್ನಕೇಶವ ದೇವರನ್ನು ನಂಬಿ ಬೇರೆಬೇರೆಯಾಗಿ ನಾಲ್ಕಾಣೆ ಪಾವಲಿಗಳನ್ನು ತಲೆಗೆ ನಿವಾಳಿಸಿ ಈಡು ಕಟ್ಟಿದ್ದರಿಂದಲೋ ಏನೋ.... ಪಕ್ಷವಾತದ ಹೊಡೆತ ತೀವ್ರವಾಗಲಿಲ್ಲ. ನಂತರ ವೈದ್ಯ ಸುಕ್ರನ ನೀರು, ಕಷಾಯ, ಎಣ್ಣೆ, ಹುಳಿಎಲೆ ಹಾಕಿದ ನೀರಿನ ಸ್ನಾನ... ಇವುಗಳಿಂದಾಗಿ ನಿಧಾನ ವಾಸಿಯಾಗಿ ಈಗ ಕಾಲೆಳೆದು ನಡೆಯುವಂತಾಗಿದೆ.

ಆಲೋಚಿಸುತ್ತಿದ್ದಂತೆ ಗಂಟಲಾರಿದುದರಿಂದ "ಮಗಳೇ.... ಸ್ವಲ್ಪ ನೀರು ತಾ..." ಎಂದು ಕೂಗಿ ಹೇಳಿ, ನಾಲಗೆಯ ಎಂಜಲನ್ನು ತುಟಿಗಳಿಗೆ ಸವರಿ ಉಗುಳುನುಂಗಿದ.

[redacted]

NT-269-4-KANNADA-10-BT

ಆಗ ಮನೆಯವರೆಲ್ಲ... "ಯಾ ಅಲ್ಲಾ... ಭೂಮಿಯಲ್ಲಿ ಹರಿವ ನೀರು, ತೆಗೀಬೇಡ ಅಂತಾರಾ... ಒಂದು ಗುಟುಕು ಕುಡಿವ ನೀರಿಗೆ ತಡೆ ಒಡ್ಡಾರಾ... ಭಾಷೆಯಿಲ್ಲ ಅವನಿಗೆ.. ನಮ್ಮಲ್ಲಿ ನೀರು ಇರುವವರೆಗೆ ಎಷ್ಟು ಬೇಕಾದ್ರೂ ತೆಕ್ಕೊ..." ಎಂದು ಒಪ್ಪಿಗೆ ನೀಡಿದ್ದರು.

ಅಂದು ಪರಸ್ಪರ ಮುಖ ತಿರುಗಿಸಿದ ಕುಟುಂಬಗಳು ಮತ್ತೆ ಮುಖಾಮುಖಿಯಾಗಲೇ ಇಲ್ಲ. ಬಾಂಧವ್ಯದ ಕೊಂಡಿ ಕಳಚಿಹೋಗಿತ್ತು. ತಂಗಿಗೆ ಅಣ್ಣನ ಮನೆ; ಮಕ್ಕಳಿಗೆ ಮಾವನ ಮನೆ ಇಲ್ಲವಾಗಿತ್ತು.

ಆದರೂ ಬೆಳೆದು ದೊಡ್ಡವರಾಗುತ್ತಿದ್ದ ಮಕ್ಕಳು ಸಂಬಂಧವನ್ನು ಅರಿತುಕೊಂಡು ಆಟವಾಡುತ್ತಲೇ ಹತ್ತಿರವಾಗಿದ್ದರು. ಆದರೆ ಮಕ್ಕಳ ಮನಸ್ಥಿತಿಗಿಳಿಯಲು ಹಿರಿಯರ ಸ್ವಾಭಿಮಾನ, ಹಠ ಪರ್ವತವಾಗಿ ನಿಂತಿತ್ತು. ದಿನಗಳು ಹಾಗೇ ಉರುಳಿ ಹೋಗಿದ್ದವು.

ಕಾಲ ಹೆಂಡತಿಯನ್ನು ತನ್ನೊಳಗೆ ಲೀನವಾಗಿಸಿದಾಗ ತನ್ನ ರೆಕ್ಕೆಯೊಂದು ಮುರಿದ ಹಾಗಾಗಿತ್ತು. ಹಿರಿಮಗ ನಾರಾಯಣ ಶಾಲೆ ಬಿಟ್ಟು ಅಪ್ಪನ ರೆಕ್ಕೆಯಾದ. ಸಂಸಾರರಥ ಮುಂದುವರಿಯಿತು. ಆದರೆ ದೈನಂದಿನ ಉಪಯೋಗಗಳಿಗೆ ನೀರಿಗಾಗಿ ಪರದಾಡುವ ಸ್ಥಿತಿ ತಪ್ಪಲೇ ಇಲ್ಲ. ಸ್ವಂತ ಬಾವಿ ತೆಗೆಸುವ ವಿಷಯವನ್ನು ಕಲ್ಪಿಸಲೂ ಸಾಧ್ಯವಾಗಲಿಲ್ಲ.

ಕೊನೆಗೂ ಕಾಲ ಕೂಡಿಬಂದಿತ್ತು. ಎರಡನೇ ಮಗ ಶಂಕರ ಬಿ.ಎ. ಮುಗಿಸಿದಾಗ ಬ್ಯಾಂಕಿನ ಗುಮಾಸ್ತ ಹುದ್ದೆ ಹುಡುಕಿಕೊಂಡು ಬಂದಿತ್ತು. ಕೆಲಸಕ್ಕೆ ಸೇರಿದ ಆರೇ ತಿಂಗಳಲ್ಲಿ ಹಣ ಉಳಿಸಿ ಬಾವಿ ತೆಗೆಸುವ ವ್ಯವಸ್ಥೆ ಮಾಡಿದ್ದ. ಈಗ ಕೆಲಸ ಕೊನೆಯ ಹಂತ ತಲಪುತ್ತಿರುವಂತೆ ಸ್ವಂತ ಬಾವಿಯ ನೀರಿನ ಒರತೆಯನ್ನು ಕಣ್ಣಾರೆ ಕಾಣಲು ರಜೆ ಹಾಕಿ ಕೆಲಸದವರಿಗೆ ಸಹಾಯಕನಾಗಿದ್ದ....

ಬಾವಿ ತೆಗೆಯುವಲ್ಲಿಂದ ಒಮ್ಮೆಗೇ "ಹೋ...." ಎಂಬ ಬೊಬ್ಬೆ, ಕೇಕೆ, ನಗು ಕೇಳಿಬಂದಾಗ ನೆನಪಿನ ಸುಳಿಗಳಿಂದ ಬಿಡುಗಡೆಗೊಂಡ ಮಾಲಿಂಗ.

"ಅಪ್ಪಾ ನೀರು ಸಿಕ್ತು... ನೀರು ಸಿಕ್ತು..." ಇಬ್ಬರು ಮಕ್ಕಳೂ ಬೊಬ್ಬಿರಿಯುತ್ತಾ ಓಡಿ ಬರುತ್ತಿದ್ದಾರೆ.

ಅವನ ಮೈ ಪುಳಕಗೊಂಡು ರೋಮಾಂಚನವನ್ನು ಅನುಭವಿಸಿತು. "ನನ್ನ ತಂದೆ ತಾಯಿ, ಹಿರಿಯರೇ, ದೈವದೇವರುಗಳೇ... ಕೊನೆಗೂ ಕಣ್ಣು ಬಿಟ್ಟಿರಾ..." ಕೃತಜ್ಞತೆ ಅರ್ಪಿಸಿದ. ಈ ಸೌಭಾಗ್ಯವನ್ನು ಕಾಣಲಾಗದ ಹೆಂಡತಿಯ ನೆನಪಾಗಿ ಕಣ್ಣು ಹನಿಗೂಡಿತು.

"ಏ ಶಾರದೇ... ಸಕ್ಕರೆ ತಾ..." ಅಣ್ಣಂದಿರ ಕೂಗಿಗೆ ಕಿವಿ ಚುರುಕಾಗಿಸಿದ್ದ ಶಾರದೆ ಖುಷಿಯಿಂದ ಚಿಗರೆಯಂತೆ ಮನೆಯೊಳಗೆ ಹೊಕ್ಕು ಹಿಂದಿನ ದಿನ ತಂದಿರಿಸಿದ ಸಕ್ಕರೆ ಕಟ್ಟನ್ನು ಅಣ್ಣನ ಕೈಗಿತ್ತು ಬಾವಿಯತ್ತ ಓಡಿದಳು.

ಮಾಲಿಂಗ ಜಗಲಿಯಿಂದೆದ್ದು ವಾತದಿಂದ ಬಲಹೀನವಾದ ಬಲಗಾಲನ್ನು ಮೆಲ್ಲನೆ ಎತ್ತಿಡುತ್ತಾ ಬಾವಿಯ ಬಳಿ ತಲಪುದಾಗ ಎಲ್ಲರ ಮುಖದಲ್ಲೂ ಸಂತಸ ಕುಣಿದಾಡುತ್ತಿತ್ತು.

"ನಿಂಡೆ ಭಾಗ್ಯ. ನೋಕು.. ನಲ್ಲ ಒರವು... ಮೂನು ನಾಲ ದಿಕ್ಕಿನ್ನು ಬೆರುನ್ನುಂಡು..." ಬಾವಿಯ ಕೆಲಸವನ್ನು ವಹಿಸಿಕೊಂಡ ಮೇಸ್ತ್ರಿ ಅಪ್ಪಕುಞ್ಞಿ ಅಭಿನಂದಿಸಿದ.

ಮಾಲಿಂಗ ಬಾವಿಯ ರಾಟೆಕಂಬದ ಬಳಿ ಕುಳಿತು ಬಗ್ಗಿ ನೋಡಿದ. ಹದಿನಾರು ಕೋಲು ಆಳದಲ್ಲಿನ ವೃತ್ತಾಕಾರದ ತಳದಲ್ಲಿ ಮೂರು ನಾಲ್ಕು ಕಡೆಯಿಂದ ಒರತೆಯ ನೀರು ಚಿಮ್ಮಿ ಬರುತ್ತಿದೆ... ಅವನ ಹೃದಯ ತುಂಬಿಬಂತು.

ಮಾಲಿಂಗನ ಬಾವಿಯಲ್ಲಿ ನೀರು ಸಿಕ್ಕಿತೆಂಬ ಸುದ್ದಿ ಮಧ್ಯಾಹ್ನದ ಉರಿಬಿಸಿಲಲ್ಲೂ ಮನೆ ಮನೆಗೂ ಹರಡಿ ಸಂಭ್ರಮದ ಅಲೆಯೆಬ್ಬಿಸಿತು. ಸುತ್ತುಮುತ್ತಲಿನವರೆಲ್ಲ ಜಾತಿಭೇದ ಮರೆತು ಓಡಿಬಂದರು. ಅದು ಮಧ್ಯಾಹ್ನದ ಊಟದ ಹೊತ್ತಾದುದರಿಂದ ಎಲ್ಲರೂ ಮನೆಯಲ್ಲಿ ಇದ್ದುದು ಅನುಕೂಲವೇ ಆಗಿತ್ತು.

ಕೂಲಿ ಕೆಲಸದವರೇ ತುಂಬಿರುವ ಆ ಊರಲ್ಲಿ ಬಾವಿ ತೆಗೆಸುವುದೇ ಒಂದು ಸಾಧನೆ. ಅದರಲ್ಲಿ ನೀರು ಸಿಗುವುದಕ್ಕೂ ಭಾಗ್ಯ ಬೇಕು... ಮಾಲಿಂಗನ ಭಾಗ್ಯದ ಸಂಭ್ರಮ ಊರವರ ಸಂಭ್ರಮವಾಯಿತು.

ಸೇರಿದವರು ಅದು ಇದು ಮಾತಾಡುತ್ತಿರುವಂತೆ ಬಾವಿಯ ತಳಭಾಗ ಚೊಕ್ಕಟವಾಗಿ ಕೆಸರುಮಣ್ಣು, ಪಾಯಸದಂಥ ನೀರುಮಣ್ಣು ಮೇಲೇರಿ ಬಂತು. ಅರಶಿಣದ ಕೆಸರು ನೀರಲ್ಲಿ ಮುಳುಗಿದ ಹಾರೆಪಿಕಾಸುಗಳು ಮೇಲೆ ಬಂದವು... ಕೊನೆಗೆ ಜೇಡಿಮಣ್ಣಿನ ಮೂರ್ತಿಗಳಂತಿದ್ದ ಬಾವಿಯೊಳಗಿನ ಕೆಲಸಗಾರರು ಮೇಲೆ ಹತ್ತಿ ಬಂದರು.

“ಎಂಚಿನ ನೀರ್ ಮಾರಾಯ್ರೆ.... ನನ ಅರ್ಧಗಂಟೆಡ್ ಅಪ್ಪಗುಂಡಿಟ್ ರಡ್ಡ್ ಕೋಲುದಾತು ನೀರು ಉಂತು...” ಸಂಕಪ್ಪ ಮೈ ಕೈಯ ಕೆಸರು ತೊಳೆಯುತ್ತಾ ಹೇಳಿದ.

ಸ್ವಲ್ಪ ಹೊತ್ತಿನಲ್ಲಿ ರಾಟೆಗೆ ಹೊಸ ಹಗ್ಗ ಹಾಕಿ ಮನೆಯ ಹೆಣ್ಣುಮಗಳು ಶಾರದೆ ಬಾವಿಯಿಂದ ನೀರೆಳೆದಳು. ಅದು ಮೇಲೆ ತಲಪುತ್ತಲೇ ಅಪ್ಪಕುಞ್ಞಿ ಅದನ್ನು ತೆಗೆದು ಶುದ್ಧವಾದ ಅಲ್ಯೂಮಿನಿಯಂ ಮಡಕೆಯೊಂದಕ್ಕೆ ಹೊಯ್ದು ಸಕ್ಕರೆ ಹಾಕಿ ಕದಡಿದ. ಲೋಟವೊಂದರಲ್ಲಿ ಸಕ್ಕರೆ ನೀರು ತುಂಬ ಮೊದಲು ಮಾಲಿಂಗನಿಗೆ ನೀಡುತ್ತಾ ಹೇಳಿದ.

“ಇದಾ... ಮಧೂರು ಮಹಾಗಣಪತಿಗೊಂದು ಉದಯಾಸ್ತಮಾನದ ಸೇವೆ... ಸ್ಥಳ ದೇವರಾದ ಶ್ರೀ ಮದನಂತೇಶ್ವರನಿಗೆ ಬಲಿವಾಡು... ಗ್ರಾಮ ದೈವ ವಿಷ್ಣುಮೂರ್ತಿಗೆ ಒಂದು ಹಣ... ಇಲ್ಲಿ ತಿರುಗಾಡುವ ಗುಳಿಗನಿಗೊಂದು ಕಲ್ಲ ಕೊಟ್ಟುಬಿಡು....”

ಮಾಲಿಂಗ ಮೊದಲು ತನ್ನ ತಂದೆ ತಾಯಿ ಮತ್ತು ಹಿರಿಯರನ್ನು ದೈವ - ದೇವರುಗಳನ್ನು ಸ್ಮರಿಸಿ ಒಂದು ಗುಟುಕು ನೀರು ಕುಡಿದು ಉಳಿದುದನ್ನು ಮೂವರು ಮಕ್ಕಳ ಬಾಯಿಗೂ ಹೊಯ್ದು ಸಂತೋಷವನ್ನು ಹಂಚಿಕೊಂಡ.

ಸೇರಿದವರೆಲ್ಲ ಸಕ್ಕರೆ ನೀರು ಕುಡಿದು ಸಂತಸದಿಂದ ಮಾಲಿಂಗನನ್ನು ಅಭಿನಂದಿಸಿದರು. ಈ ಸಂತಸ ಸಂಭ್ರಮದಲ್ಲಿ ಮುಳುಗಿರುವಾಗಲೇ ಎಲ್ಲರ ದೃಷ್ಟಿ ದೂರದಲ್ಲಿ, ಎಲ್ಲವನ್ನೂ ದೂರದಿಂದಲೇ ನೋಡುತ್ತಾ ನಿಂತಿದ್ದು ಈಗ ಇತ್ತಲೇ ದಾಪುಗಾಲು ಹಾಕುತ್ತಾ ಬರುತ್ತಿರುವ ಆಕೃತಿಯತ್ತ ಹರಿಯಿತು. ಮಾಲಿಂಗನ ಭಾವ ಐತ ಧಾವಿಸಿ ಬರುತ್ತಿದ್ದಾನೆ.

ಎಲ್ಲರ ಮುಖದಲ್ಲೂ ಆತಂಕದ ಕರಿನೆರಳು ದಟ್ಟೈಸಿತು. ಮಾಲಿಂಗ ಮತ್ತು ಅವನ ಮಕ್ಕಳು ಭಯ, ಆತಂಕದಿಂದ ಹಿಡಿಯಾಗಿ ನಿಂತುಬಿಟ್ಟರು.

[redacted]

ಶುದ್ಧವಾಗಿಸಿದ. "ಕೊಡಿಲ್ಲಿ ಸಕ್ಕರೆ ನೀರು..." ಎನ್ನುತ್ತಾ ಶಂಕರನ ಕೈಯಿಂದ ಸಕ್ಕರೆ ನೀರಿನ ಲೋಟವನ್ನು ತೆಗೆದು ತೃಪ್ತಿಯಿಂದ ಗುಟುಕರಿಸುತ್ತಾ ಕುಡಿಯತೊಡಗಿದ.





## ಲೇಖಕರ ಪರಿಚಯ

**ಜನಾರ್ದನ ಎರ್ಪಕಟ್ಟೆ**ಯವರು ೧-೧೧-೧೯೫೨ರಂದು ಕಾಸರಗೋಡು ತಾಲೂಕಿನ ಎರ್ಪಕಟ್ಟೆ ಎಂಬಲ್ಲಿ ಜನಿಸಿದರು. ಇವರ ತಂದೆ ಮಹಾಲಿಂಗ. ತಾಯಿ ಮಾಯಿ ಹೆಂಗಸು. ಇವರು ಕಾಸರಗೋಡಿನ ಸರಕಾರಿ ಕಾಲೇಜಿನಲ್ಲಿ ಅರ್ಥಶಾಸ್ತ್ರದಲ್ಲಿ ಬಿ.ಎ. ಪದವಿಯನ್ನು, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಎಂ.ಎ. ಪದವಿಯನ್ನು ಪಡೆದರು. ಕೇಂದ್ರ ಸರಕಾರದ ಭಾರತ ಸಂಚಾರ ನಿಗಮದಲ್ಲಿ ಸಂಪರ್ಕ ಸಹಾಯಕರಾಗಿ ಉದ್ಯೋಗ ಪ್ರಾರಂಭಿಸಿದ ಇವರು ಮುಂದೆ ಸುಳ್ಯದಲ್ಲಿ ಹಿರಿಯ ದೂರವಾಣಿ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸಿದರು.

ತಿರಸ್ಕೃತರು, ಕಾಯುತ್ತಿದೆ ಈ ನೆಲ, ಪ್ರಕ್ರಿಯೆ, ಹಗ್ಗೇ ಬರ್ತೇನ್ ಗಂಗಮ್ಮಾ - ಇವರ ಪ್ರಕಟಿತ ಕೃತಿಗಳಾಗಿವೆ. ಎರ್ಪಕಟ್ಟೆ ಕತೆಗಳು (ಸಮಗ್ರ ಕತೆಗಳ ಸಂಗ್ರಹ), ದಲಿತ ಚಿಂತನೆ (ಪ್ರಬಂಧ ಸಂಕಲನ), ಸುಗಂಧ ಕಾಯ (ಕವನ ಸಂಕಲನ) ಇವುಗಳು ಇವರ ಇತರ ಕೃತಿಗಳಾಗಿವೆ. ಸುಳ್ಯ ತಾಲೂಕು ಕನ್ನಡ ರಾಜ್ಯೋತ್ಸವ ಬೆಳ್ಳಿಹಬ್ಬದ ಸಮಾರಂಭದಲ್ಲಿ ತನ್ನ ಸಾಹಿತ್ಯ ಸೇವೆಗಾಗಿ ಸನ್ಮಾನಕ್ಕೆ ಪಾತ್ರರಾದ ಇವರು ನಾಡಿನ ಹಲವು ಸಂಘಸಂಸ್ಥೆಗಳಿಂದ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯಾಸಕ್ತ ಗೆಳೆಯರೊಂದಿಗೆ 'ಸ್ವಂತಿಕಾ ಪ್ರಕಾಶನ'ವನ್ನು ಸ್ಥಾಪಿಸಿದ ಸಾಧನೆ ಇವರದು. ಇವರು ೨೯-೧೨-೨೦೧೨ರಲ್ಲಿ ನಿಧನರಾದರು. ಈ ಕತೆಯನ್ನು ಇವರ 'ಹಗ್ಗೇ ಬರ್ತೇನ್ ಗಂಗಮ್ಮಾ' ಎಂಬ ಕೃತಿಯಿಂದ ಆರಿಸಲಾಗಿದೆ.

### ವಿಶದೀಕರಣ

ಅಪ್ಪಗುಂಡಿ - ಬಾವಿತೋಡಿದಾಗ ಅದರ ಮಧ್ಯದಲ್ಲಿ ನೀರು ತುಂಬಲು ಮಾಡುವ ಒಂದು ಚಿಕ್ಕ ಹೊಂಡ.



### ಉತ್ತರಿಸಿರಿ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಮಾಲಿಂಗನ ಮುಖದಲ್ಲಿ ಮಂದಹಾಸ ಮಿನುಗಲು ಕಾರಣವೇನು?

2 ಶಾರದಾ ನೀರಿಗಾಗಿ ಬಹಳ ದೂರಕ್ಕೆ ಹೋಗಬೇಕಾಗಿಬಂದುದು ಯಾಕೆ?

3 ಮಾಲಿಂಗನಿಗೆ ತನ್ನ ಸ್ವಂತ ಭೂಮಿಯಲ್ಲಿ ಬಾವಿ ತೋಡುವ ಸೌಭಾಗ್ಯ ಬಂದದ್ದು ಯಾವಾಗ?

4 ತಮ್ಮ ಬಾವಿಯಲ್ಲಿ ಮೊದಲ ಬಾರಿಗೆ ನೀರಿನ ಒರತೆ ಕಂಡಾಗ ಮಾಲಿಂಗನ ಮನೆಯವರು ಆ ಸಂತೋಷವನ್ನು ಹೇಗೆ ಹಂಚಿಕೊಂಡರು?

5 ಐತನಿಗೆ ಮಾಲಿಂಗನ ಕುಟುಂಬದೊಡನೆ ಬದ್ಧದ್ವೇಷ ಬೆಳೆಯಲು ಕಾರಣವೇನು?

6 ಮನಸ್ಸು ಪರಿವರ್ತನೆಯಾದ ಐತನು ಏನು ಮಾಡಿದನು?

## ಪಾತ್ರಚಿತ್ರಣ ಮಾಡಿರಿ

- 'ನೀರು' ಕತೆಯನ್ನು ಓದಿದಿರಲ್ಲವೇ? ಅದರಲ್ಲಿ ನಿಮಗೆ ಇಷ್ಟವಾದ ಪಾತ್ರದ ಪಾತ್ರಚಿತ್ರಣ ಮಾಡಿರಿ.

## ಊಹಿಸಿ ಬರೆಯಿರಿ

- ಮಾಲಿಂಗನು ತನ್ನ ಭೂಮಿಯಲ್ಲಿ ಬಾವಿಯನ್ನು ತೋಡಿಸದೆ ಇರುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ಬರೆಯಿರಿ.

## ಚಿತ್ರಕಥೆ ತಯಾರಿಸಿರಿ

- 'ನೀರು' ಕತೆಯನ್ನು ಒಂದು ಚಲನಚಿತ್ರ ಮಾಡಬೇಕೆಂದಿದ್ದೀರಿ. ಅದಕ್ಕಾಗಿ ಒಂದು ಚಿತ್ರಕಥೆಯನ್ನು (ಸ್ಕ್ರಿಪ್ಟ್) ತಯಾರಿಸಿರಿ.

## ಶಿಷ್ಟರೂಪಕ್ಕೆ ಪರಿವರ್ತಿಸಿರಿ

ಕೆಳಗೆ ಕೊಡಲಾದ ಭಾಗವನ್ನು ಶಿಷ್ಟರೂಪಕ್ಕೆ ಪರಿವರ್ತಿಸಿರಿ.

ಏನ್ ಏಳ್ಲಿಮಗಾ! ಈಗ ಮಳೆಗಾಲ ಆದ್ರೂನೂ ಕುಡ್ಯೋಕೇ ನೀರಿಲ್ಲ. ನಂಗೆ ವಯಸ್ಸಾತು ನೋಡು. ನಡ್ಯೋಕೇ ಆಗಂಗಿಲ್ಲ. ಒಂದ್ಕೊಡ ನೀರು ತರ್ಬೇಕಿದ್ರೂ ಕೈಲಾಗಲ್ಲ. ಇಲ್ಲೊಂದು ಸರ್ಕಾರಿ ಬಾವಿ ಐತೆ ನೋಡು. ಆದ್ರೆ ಅದು ಇದ್ದೂ ಇಲ್ದಂಗೆ. ನಮ್ಮಂತಾ ಮುದ್ಕೀರಿಗೆ ಸಾಯ ಮಾಡ್ಬೇಕಲ್ಲ ಯಾರಾದ್ರೂ. ದಿನಕ್ಕೊಮ್ಮೆಯೋ ಎಲ್ಡು ದಿನಕ್ಕೊಮ್ಮೆಯೋ ಯಾರಾದ್ರೂ ಬಂದು ಸಾಯ ಮಾಡ್ತವ್ರೆ. ಅದು ನನ್ನ ಯಾವ್ದೋ ಜನುಮದ ಪುಣ್ಯ ನೋಡು.

## ಘೋಷಣವಾಕ್ಯ ಬರೆಯಿರಿ

- ಸಹಬಾಳ್ವೆಯ ಮಹತ್ವವನ್ನು ತಿಳಿಸುವ ಘೋಷಣವಾಕ್ಯಗಳನ್ನು ತಯಾರಿಸಿರಿ.

## ಪತ್ರಿಕಾ ವರದಿ ಬರೆಯಿರಿ

ನಿಮ್ಮ ಶಾಲೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ತಜ್ಞರೊಬ್ಬರು ಜಲಸಂರಕ್ಷಣೆಯ ಕುರಿತು ಪ್ರಬಂಧ ಮಂಡಿಸಿದರು ಎಂದು ಭಾವಿಸಿರಿ. ಆ ವಿಚಾರಗೋಷ್ಠಿಯ ಪತ್ರಿಕಾವರದಿಯನ್ನು ತಯಾರಿಸಿರಿ.

ಘಟಕ - 2



# ಕಲ್ಲರಳಿ ಹೂವಾಗಿ




# ಅಂಬಿಗ

– ಯು.ಮು. ಹೇಮಂತ ಕುಮಾರ್

ದೋಣಿ ನಡೆಸುವ ಅಂಬಿಗ ನಾನು
ಬಿರುಗಾಳಿ ಲೆಕ್ಕಿಸದೆ, ಅಲೆಗಳಿಗೆ ಹೆದರದೆ,
ಮುನ್ನಡೆಯುವ ಕಾಯಕ ನನ್ನದು
ಮೂರಿಂಚಿನ ಹೊಟ್ಟೆ ಹೊರೆಯಲು
ನನಗೆ ಈ ಕಾಯಕ-ದಡ
ಸೇರುವ ತವಕ, ಸೇರಿಸುವ ತವಕ



ಈ ಕವನವನ್ನು ಓದಿದಿರಲ್ಲವೇ? ಇದರ ಆಶಯದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.



# ಬಾದಾಮಿಯ ಗುಹೆಯ ಬಳಿ

– ಕೆ. ಎಸ್. ನರಸಿಂಹಸ್ವಾಮಿ

ಕೆರೆಯಂಚಿನಿಂದ ಬೆಟ್ಟದ ಹೆಗಲಿಗೇರುತ್ತ
ನಡೆದಿತ್ತು ಕಲ್ಲ ಹುಡುಕುತ್ತ ಪಯಣ,
‘ಕಲ್ಲು ಸಿಕ್ಕಿತು!’ ಎಂದು ಚಪ್ಪಾಳೆ ತಟ್ಟಿದರು;
ಬಿದ್ದಿತ್ತು ಉಳಿಗೆ ಸುತ್ತಿಗೆಯ ಹೊಡೆತ.

ಹಳೆಯ ಕಲ್ಲಿನ ಮೇಲೆ ಹೊಸ ಪೆಟ್ಟುಗಳು ಬಿದ್ದು
ಮೂಡಿತ್ತು ಆ ದಿನದ ತಿಳಿದ ಬದುಕು;
ನಿಂತ ಕಲ್ಲಿನ ಬಯಕೆ ಫಲಿಸಿ, ಹೊಸ ವಿಗ್ರಹದ
ಮುಖದಲ್ಲಿ ಅರಳಿತ್ತು ನೆಲದ ಚೆಲುವು.

ಕೈಗೆ ಸಿಕ್ಕಿದ ಕಲ್ಲ ಕಲೆಯಾಗಿಸುವ ತನಕ
ಸುತ್ತಿಗೆಗೆ ಉಳಿಗೆ ಬಿಡುವಿಲ್ಲವಂತೆ
ದುಡಿದವರ ಯೌವನವ ಹೀರಿ ಹಿಗ್ಗಿತು ಕಲ್ಲು–
ಮನೆಗೆ ಬಂದಾಗವರು ಮುದುಕರಂತೆ.

ಉಳಿಯ ಬದಲಿಗೆ ಬೆರಳು ಸುತ್ತಿಗೆಯ ಹೊಡೆತಕ್ಕೆ
ಸಿಕ್ಕಿ ನೋವಾದುದನು ನುಡಿಯದವರು
ಮೈ ಬೆವರಿನಿಂದ ಕಲ್ಲೆದೆಯ ಹದಮಾಡಿದರು;
ಕಡೆದ ಚೆಲುವಿನ ಹಿಂದೆ ಮರೆಯಾದರು.

NT-269-5-KANNADA-10-BT

ಕಲ್ಲಗೋಡೆಯಲೆದ್ದ ಎಲ್ಲ ವಿಗ್ರಹಗಳಲಿ
ಅವರ ಜೀವವೆ ಮಿಂಚಿನಂತೆ ಹರಿದು,
ಹಳೆಗಾಲದೊಲವು ಎದುರಿಗೆ ನಿಂತು ಹರಸಿತ್ತು,
ಹೊಗೆಯೊಳಗೆ ಅಲ್ಲಲ್ಲಿ ದೀಪವುರಿದು.

ಆ ಕಾಲ ಮುಗಿದು ಶತಮಾನಗಳು ಉರುಳಿರಲು
ಧೂಳೆದ್ದ ಗಾಳಿಯಲಿ ತೇಲಿ ಹೂವು,
ಹಳೆಯ ನಕ್ಷತ್ರಗಳ ಕೆಳಗೆ ಹೊಸ ಹಾದಿಯಲಿ
ಬೆಳ್ದಿಂಗಳಾಗಿತ್ತು ಅವರ ನೆನಪು.



## ಕವಿಪರಿಚಯ

**ಕೆ.ಎಸ್.ನ.** ಎಂದು ಪ್ರಸಿದ್ಧರಾಗಿರುವ ಕೆ.ಎಸ್. ನರಸಿಂಹಸ್ವಾಮಿಯವರು ೨೬-೦೧-೧೯೧೫ರಲ್ಲಿ ಮಂಡ್ಯ ಜಿಲ್ಲೆಯ ಕಿಕ್ಕೇರಿ ಎಂಬಲ್ಲಿ ಜನಿಸಿದರು. ಇವರ ತಂದೆ ಸುಬ್ಬರಾಯ, ತಾಯಿ ಹೊಸಹೊಳಲು ನಾಗಮ್ಮ, ಪತ್ನಿ ವೆಂಕಮ್ಮ.

ಇವರು ಮೈಸೂರು ಮಲ್ಲಿಗೆ, ಐರಾವತ, ದೀಪದ ಮಲ್ಲಿ, ಶಿಲಾಲತೆ, ತೆರೆದ ಬಾಗಿಲು, ಮಲ್ಲಿಗೆಯ ಮಾಲೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ ಅಲ್ಲದೆ ಹಲವು ಕೃತಿಗಳನ್ನು ಅನುವಾದಿಸಿದ್ದಾರೆ. ಇವರ ಮೈಸೂರು ಮಲ್ಲಿಗೆ ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಬಹುಮಾನ, ತೆರೆದ ಬಾಗಿಲು ಕವನಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿವೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳೂ ಇವರ ಕೃತಿಗಳಿಗೆ ದೊರೆತಿವೆ. ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ೬೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಸವಿಗನ್ನಡದಲ್ಲಿ ಅತ್ಯುತ್ತಮ ಗೀತೆಗಳನ್ನು ರಚಿಸಿದ ಕೆ.ಎಸ್.ನ.ರವರು 'ಸರಸಕವಿ' ಎನಿಸಿದ್ದರು. ಇಪ್ಪತ್ತೈದಕ್ಕಿಂತಲೂ ಹೆಚ್ಚು ಮುದ್ರಣಗಳನ್ನು ಕಂಡ ಇವರ ಮೈಸೂರು ಮಲ್ಲಿಗೆ ಸಂಗ್ರಹವು ಭಾವಗೀತೆಗಳ ಜನಪ್ರಿಯತೆಯ ಪರಂಪರೆಯಲ್ಲಿಯೇ ಮೈಲುಗಲ್ಲೆನಿಸಿದೆ. ಇವರು ೨೭-೧೨-೨೦೦೩ರಲ್ಲಿ ಸ್ವರ್ಗಸ್ಥರಾದರು.

ಪ್ರಸ್ತುತ ಕವನವನ್ನು 'ಮಲ್ಲಿಗೆಯ ಮಾಲೆ' ಸಮಗ್ರ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.



### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಪ್ರಯಾಣ ಆರಂಭಿಸಿದ ಶಿಲ್ಪಿಗಳು ಏನು ಮಾಡಿದರು?

2 ಹೊಸ ವಿಗ್ರಹವು ಹೇಗೆ ಮೂಡಿಬಂತು?

3 ಶಿಲ್ಪಿಗಳು ತಮ್ಮ ನೋವನ್ನು ಮರೆತು ದುಡಿಯುವುದನ್ನು ಕವಿ ಹೇಗೆ ಚಿತ್ರಿಸಿದ್ದಾರೆ?

### ಆಶಯ ಬರೆಯಿರಿ

- 'ಬಾದಾಮಿಯ ಗುಹೆಯ ಬಳಿ' ಕವನದ ಆಶಯವನ್ನು ಬರೆಯಿರಿ.

### ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಪದ್ಯಭಾಗಗಳ ಸ್ವಾರಸ್ಯವನ್ನು ಬರೆಯಿರಿ.

- ಹಳೆಯ ಕಲ್ಲಿನ ಮೇಲೆ ಹೊಸ ಪೆಟ್ಟುಗಳು ಬಿದ್ದು
  ಮೂಡಿತ್ತು ಆ ದಿನದ ತಿಳಿದ ಬದುಕು
- ಮೈ ಬೆವರಿನಿಂದ ಕಲ್ಲೆದೆಯ ಹದ ಮಾಡಿದರು;
  ಕಡೆದ ಚೆಲುವಿನ ಹಿಂದೆ ಮರೆಯಾದರು.

### ವಿಶ್ಲೇಷಿಸಿ ಬರೆಯಿರಿ

- 'ಬಾದಾಮಿ ಗುಹೆಯ ಬಳಿ' ಕವನದ ಆಧಾರದಲ್ಲಿ ಶ್ರಮದ ಕುರಿತು ಇಂದಿನ ಯುವಜನರ ಮನೋಭಾವವನ್ನು ವಿಶ್ಲೇಷಿಸಿ ಬರೆಯಿರಿ.
  (ದುಡಿಮೆಯಲ್ಲಿ ಆಸಕ್ತಿ ಕಡಿಮೆ – ಐಷಾರಾಮದ ಜೀವನದ ಬಯಕೆ – ಆಡಂಬರದ ಜೀವನ ಕನಸು – ದುಂದುವೆಚ್ಚ – ಶ್ರಮವಿಲ್ಲದೆ ಸಂಪಾದನೆ)

### ಹೋಲಿಸಿ ಬರೆಯಿರಿ

ಕೆಳಗೆ ಕೊಡಲಾದ ಕಯ್ಯಾರ ಕಿಞ್ಞಣ್ಣ ರೈಯವರ ಪದ್ಯದೊಂದಿಗೆ 'ಬಾದಾಮಿಯ ಗುಹೆಯ ಬಳಿ' ಪದ್ಯವನ್ನು ಹೋಲಿಸಿ ಬರೆಯಿರಿ.

#### ಸಾವಿನಲಿ ಸವಿಯುಂಡನು

ಕಲ್ಲರಳಿ ಪರಿಮಳಿಸಿತು!
ಶಿಲ್ಪಿವರ್ಯನ ಮನಸು
ಕಲ್ಪಿಸಿದ ಹೊಸಗನಸು
ಹಗಲಿರುಳ ಸವಿಯುಣಿಸು ನೆಲೆ ಸೇರಿತು.
ಇದ್ದನವನೇಕಾಕಿ
ನಿದ್ದೆ ಹಸಿವಂ ನೂಕಿ
ಮುದ್ದು ಮಕ್ಕಳ ಸಾಕಿ ದುಡಿದು ನೋಯೆ
ಹಸಿವನ್ನೆ ತಿನ್ನುತ್ತ
ದಾಹವನೆ ಕುಡಿಯುತ್ತ
ಬಾಳುವೆಯ ಬೇಳುತ್ತ ತಪದಿ ನಿಂತು,
ಕಠಿಣ ಶಿಲೆಯಂ ಕೆತ್ತಿ
ಬಾಳಿನಾಸೆಯ ಬತ್ತಿ
ಜೀವದೆಣ್ಣೆಯ ಬತ್ತಿ ಆರಿಹೋಯ್ತು!
ಅಲ್ಲಿ–ಆ ಗುಡಿಸಲಲಿ
ನೆಲ ತಾಯ ಮಡಿಲಲ್ಲಿ
ಮಲಗಿದವನಂ ಮರಳಿ ನೆನೆಯಬೇಡ!
ಇಲ್ಲಿ–ಈ ಶಿಲೆಯಲ್ಲಿ
ಕಲೆಯ ಹೂಯೆಸಳರಳಿ
ಪರಿಮಳಿಸುತಿದೆ ಹೊರಳಿ ನಿಂತು ನೋಡ!

# ಹೀಗೊಂದು ಕನಸು ........
# ಹೀಗಿದೆ ಜೀವನ

ಕೊಂಕಣಿ ಮೂಲ : ಮೀನಾ ಕಾಕೋಡ್ಕರ್ ಅನುವಾದ : ಗೀತಾ ಶೆಣೈ

**ಆ**ನಂದು ತಲೆಯ ಮೇಲಿರುವ ಹೊರೆಯನ್ನು ಗುಡಿಸಲಿನ ಬಾಗಿಲ ಬಳಿ ಎಸೆದು ದೀರ್ಘಶ್ವಾಸ ಎಳೆದುಕೊಂಡ. ಆಮೇಲೆ ಮೈಬೆವರು ಚೆನ್ನಾಗಿ ಒರಸಿಕೊಂಡ. ಗುಡಿಸಲಿನ ಒಳಗೆ ಬಂದು ಕೋಣೆಯೊಳಗೆ ಹಣಕಿ ನೋಡಿದಾಗ ಅವನಿಗೆ ಮೊಳೆಗೆ ತೂಗುಹಾಕಿದ ಚೀಲ ಕಾಣಿಸಲಿಲ್ಲ.

"ರಾಮು ಶಾಲೆಯಿಂದ ಬಂದಿಲ್ಲವೇ?" ಅವನು ಹೆಂಡತಿಯಲ್ಲಿ ಕೇಳಿದ.

"ಇದುವರೆಗೆ ಬಂದಿಲ್ಲ." ಒಳಗಿನಿಂದ ಕೇಸರ ಹೇಳಿದ ಮಾತು ಕೇಳಿ ಅವನು ಮತ್ತೆ ಗುಡಿಸಲಿನಿಂದ ಹೊರಗೆ ಬಂದು ಕಣ್ಣಿನ ಮೇಲೆ ಕೈಯಿಟ್ಟು ದೂರದವರೆಗೆ ದೃಷ್ಟಿ ಬೀರಿದ. ಅವನಿಗೆ ರಸ್ತೆಯ ತಿರುವಿನಲ್ಲಿರುವ ಮಾವಿನ ಮರದ ಬಳಿ ರಾಮು ಕಾಣಿಸಿದ.

"ಬಂದ ನೋಡು..." ಅವನು ಖುಷಿಯಿಂದ ಹೇಳಿದ. ದೂರದಿಂದಲೇ ಅವನನ್ನು ನೋಡಿದ ರಾಮು ಕೈಯಿಂದ ಚೀಲವನ್ನು ಗಟ್ಟಿಯಾಗಿ ಹಿಡಿದು ಓಡುತ್ತಾ ಅವನ ಬಳಿ ಬಂದು ಮುಟ್ಟಿದ.

"ಅಪ್ಪಾ... ಇವತ್ತು ಶಾಲೆಗೆ ಯಾರು ಬಂದ್ರು ಹೇಳು ನೋಡೋಣ."

"ಯಾರೋ ಅದು?"

"ನನಗೆ ಅವರ ಪರಿಚಯವಿಲ್ಲ. ಅವರು ದೊಡ್ಡ ಸಾಹೇಬರಂತೆ. ಅವರು ನನ್ನಲ್ಲಿ ಪ್ರಶ್ನೆ ಕೇಳಿದರು. ನಾನು ಎಲ್ಲ ಉತ್ತರ ಸರಿಯಾಗಿಯೇ ಹೇಳಿದೆ."

"ನಿಜವಾಗಿಯೂ?" ಆನಂದುವಿನ ಹೃದಯ ತುಂಬಿಬಂತು.

"ನಿಜವಾಗಿಯೂ ಅಪ್ಪಾ! ಸಾಹೇಬರು ಹೋದ ನಂತರ ಮಾಸ್ತರರು ನನ್ನ ಬೆನ್ನು ತಟ್ಟಿದರು."

"ಕೇಳಿದೆಯೇನೇ?" ಆನಂದು ಸಂತೋಷದಿಂದ ಕೇಸರಳಲ್ಲಿ ಹೇಳಿದ. "ನಮ್ಮ ರಾಮು ಜಾಣನಾಗಿದ್ದಾನೆ. ಒಂದು ದಿನ ಅವನೂ ದೊಡ್ಡ ಸಾಹೇಬನಾಗುತ್ತಾನೆ, ಹೌದಲ್ಲ ಪುಟ್ಟಾ?"

ಗುಡಿಸಲಿನ ಒಳಗೆ ಮಲಗಿಕೊಂಡು ಅವರ ಮಾತುಕತೆ ಆಲಿಸುತ್ತಿದ್ದ ಆನಂದುವಿನ ವಯಸ್ಸಾದ ತಂದೆ ಹೇಳಿದರು. "ಅರೆ ಆನಂದೂ, ರಾಮುವನ್ನು ದೊಡ್ಡ ಅಧಿಕಾರಿಯನ್ನಾಗಿಸುವ ಆಲೋಚನೆ ಮಾಡುವ ಮೊದಲು ಅವನಿಗೆ ನೇಗಿಲು ಹಿಡಿಯಲು ಕಲಿಸು ಮಗಾ. ನಿನಗೆ ಇರುವವನು ಒಬ್ಬನೇ ಮಗ. ಅವನನ್ನು ಸಾಹೇಬನನ್ನಾಗಿ ಮಾಡಿದರೆ ಹೊಲದಲ್ಲಿ ಬೆಳೆ ಬೆಳೆಸುವವರು ಯಾರು?"

"ಅಲ್ಲಿಯವರೆಗೆ ಹೊಲ ಉಳಿದರೆ ತಾನೇ" ಆನಂದು ಹೇಳಿದ. "ಹೊಲ ಅಡವಿಟ್ಟು ಎಷ್ಟು ಸಾಲ ತೆಗೆಯಲಾಗಿದೆ ಎಂಬುದನ್ನು ಮರೆತಿರೇನು? ಅದನ್ನು ತೀರಿಸಿ ಹೊಲ ಬಿಡಿಸಿಕೊಳ್ಳಬೇಕಾದರೆ ರಾಮು ಸಾಹೇಬನಾಗಿ ಹಣ ಸಂಪಾದಿಸಬೇಕು."

ಆನಂದುವಿನ ಮಾತು ಕೇಳಿ ಶಿವಗೊ ಕಿಮ್ಮೆತ್ತಾ ಸುಮ್ಮನಾದ. ಮಗನಿಗೆ ಎಷ್ಟು ಹೇಳಿದರೂ, ಅವನ ತಲೆಯಿಂದ ಈ 'ಸಾಹೇಬ'ನ ಹುಚ್ಚು ಹೋಗುವುದು ಸಾಧ್ಯವಿಲ್ಲ ಎನ್ನುವುದು ಅವನಿಗೆ ಚೆನ್ನಾಗಿ ಗೊತ್ತಿದೆ. ಆದರೂ ಏನಾದರೂ ಹೇಳದೆ ಸುಮ್ಮನಿರುವುದು ಅವನಿಂದ ಸಾಧ್ಯವಿಲ್ಲ.

"ಆನಂದೂ, ರಾಮು ಸಾಹೇಬನಾಗಿ ಸಂಪಾದಿಸುವುದಕ್ಕಿಂತ ಎಷ್ಟೋ ಹೆಚ್ಚು ಪಾಲು ಹೊಲದಿಂದ ಸಂಪಾದಿಸುವುದು ಅವನಿಗೆ ಸಾಧ್ಯವಿದೆ ಮಗಾ."

ತಂದೆಗೆ ಯಾವ ಉತ್ತರವನ್ನೂ ನೀಡದೆ ಆನಂದು ಒಳಗೆ ಹೋದನು. ಅವರು ಆಡುತ್ತಿರುವ ಈ ಮಾತುಗಳು ರಾಮುವಿನ ಕಿವಿಗೆ ಯಾವಾಗಲೂ ಬೀಳುತ್ತಿರುತ್ತವೆ. ಆನಂದು ಒಳಗೆ ಹೋದ ಕೂಡಲೇ ರಾಮು ಬಟ್ಟೆಬದಲಾಯಿಸಿ ಅಜ್ಜನ ಬಳಿ ಬಂದು ಕುಳಿತ.

"ಅಜ್ಜಾ..."

"ಏನು ಮಗೂ?"

"ನಿಮಗೆ ನಾನು ಶಾಲೆಗೆ ಹೋಗುವುದು ಇಷ್ಟವಿಲ್ಲವೇ?"

"ಹಾಗಲ್ಲ ಮಗೂ, ಶಾಲೆಗೆ ಹೋಗುವುದು ಒಳ್ಳೆಯದೇ. ಆದರೆ ಅದು ನಮ್ಮ ತರಹದವರಿಗೆ ನೆರವಿಗೆ ಬರುವುದಿಲ್ಲ."

"ಯಾಕೆ?"

"ನೀನು ಶಾಲೆಗೆ ಹೋಗಿ ಸಾಹೇಬನಾದರೆ ನಮ್ಮ ಹೊಲವನ್ನು ಬೆಳೆಸುವವರು ಯಾರು?"

"ಹೊಲದ ಕೆಲಸಕ್ಕೆ ಗೌರವ ಇಲ್ಲ ಎಂದು ಅಪ್ಪ ಹೇಳುತ್ತಾನೆ."

"ನಿನ್ನ ಅಪ್ಪನ ಆಲೋಚನೆ ಸರಿ ಇಲ್ಲ ಮಗೂ. ಕಷ್ಟಪಟ್ಟು ದುಡಿಯುವ ಎಲ್ಲಾ ಮನುಷ್ಯರಿಗೆ ಗೌರವ ಇದ್ದೇ ಇರುತ್ತದೆ."

"ಅಜ್ಜಾ, ನಮ್ಮ ಶಾಲೆಯಲ್ಲಿ ಸಾಹೇಬರು ಬಂದರೆ ಮಾಸ್ತರರು ಕೂಡ ಎದ್ದು ನಿಲ್ಲುತ್ತಾರೆ; ಆದರೆ ಮಾಸ್ತರರನ್ನು ಭೇಟಿಯಾಗಲು ನಮ್ಮಪ್ಪ ಬಂದರೆ ಮಕ್ಕಳು ಕೂಡ ಎದ್ದು ನಿಲ್ಲುವುದಿಲ್ಲ, ಯಾಕೆ?"

"ಹುಚ್ಚ ಕಣೋ ನೀನು! ಅರೇ, ನಿನ್ನ ಅಪ್ಪ ಹೊಲದ ಸಾಹೇಬ ಕಣೋ, ಶಾಲೆಯ ಸಾಹೇಬನಲ್ಲ. ಅವನ ಕಷ್ಟಕ್ಕೆ ಗೌರವ ನೀಡುವ ಸಲುವಾಗಿ ಹೊಲದ ಸಸಿಗಳೆಲ್ಲ ಅರಳಿ ನಿಲ್ಲುತ್ತವೆ! ನಿನ್ನ ಅಪ್ಪನಿಗೆ ಶಾಲೆಯ ಮಕ್ಕಳು ಎದ್ದು ನಿಲ್ಲಲಿಕ್ಕಿಲ್ಲ. ಆದರೆ ನಿನ್ನ ಶಾಲೆಯ ಸಾಹೇಬನಿಗಾಗಿ ಹೊಲದ ಸಸಿಗಳು ಅರಳಿ ನಿಲ್ಲುತ್ತವೆ ಏನು?"

ರಾಮು ಮೌನವಾಗಿ ಯೋಚನೆಯಲ್ಲಿ ಮಗ್ನನಾಗಿ ಕುಳಿತ. ಶೆವಗೊ ಮೊಮ್ಮಗನನ್ನು ಕೇಳಿದ, "ನಿನಗೆ ಶಾಲೆಗೆ ಹೋಗುವುದು ಇಷ್ಟವೇ?"

"ಹೌದು ಅಜ್ಜಾ, ಮಾಸ್ತರರು ಕೂಡ ಹೇಳ್ತಾರೆ, ನಾನು ತುಂಬಾ ಚೆನ್ನಾಗಿ ಕಲಿಯುತ್ತೇನೆ ಎಂದು." ಶೆವಗೊ ದೀರ್ಘವಾಗಿ ಉಸಿರೆಳೆದುಕೊಂಡ.

ಶೆವಗೊನಿಗೆ ರಾತ್ರಿ ಹಾಸಿಗೆಯ ಮೇಲೆ ಮಲಗಿದ ತಕ್ಷಣ ನಿದ್ದೆ ಬರುವುದಿಲ್ಲ. ಅವನ ತಲೆಯಲ್ಲಿ ಏನೇನೋ ಆಲೋಚನೆ ಬರುತ್ತದೆ. ಅವನಿಗೆ ಇಬ್ಬರು ಮಕ್ಕಳು. ಆನಂದು ಮತ್ತು ಆವಡೆ. ಅವನಲ್ಲಿ ಪುಟ್ಟದೊಂದು ಹೊಲದ ತುಣುಕು ಇದೆ. ಕಷ್ಟಪಡುವುದು ಮತ್ತು ಹೊಟ್ಟೆತುಂಬುವಷ್ಟು ದುಡಿಯುವುದು ಅವನ ದಿನಚರಿ. ಆವಡೆಯು ಮದುವೆಯಾಗಿ ಬೇರೆ ಮನೆಯಲ್ಲಿ ವಾಸಿಸುತ್ತಿದ್ದನು. ಅವನ ಮದುವೆಯಾದಾಗ ಹೊಲದ ಮೇಲೆ ಸಾಲ ತೆಗೆದುಕೊಳ್ಳಬೇಕಾಗಿ ಬಂದಿತ್ತು. ಬೇಗನೆ ತೀರಿಸುವುದೆಂದು ಸಾಲ ಪಡೆದುಕೊಂಡದ್ದು ನಿಜ. ಅದನ್ನು ತೆಗೆದುಕೊಂಡು ಐದು ವರ್ಷವಾಯಿತು. ಇದುವರೆಗೆ ಅದನ್ನು ತೀರಿಸುವುದು ಸಾಧ್ಯವಾಗಲಿಲ್ಲ. ಬಡ್ಡಿ ಎಷ್ಟಾಗಿದೆಯೋ ಯಾರಿಗೆ ಗೊತ್ತು! ಆ ಲೆಕ್ಕ ಯಾರಿಗೆ ತಿಳಿಯುತ್ತದೆ? ಅವರು "ಬಡ್ಡಿ ಇಷ್ಟಾಗಿದೆ" ಎಂದು ಹೇಳಿದರೆ ಅದನ್ನು ನಂಬಬೇಕು ನಾವು. ಈ ಲೆಕ್ಕ ತಿಳಿದುಕೊಳ್ಳಬೇಕಾದರೂ ಮನುಷ್ಯನಿಗೆ ವಿದ್ಯೆ ಬೇಕು. ಹೀಗೆ ಅವನಿಗೆ ಭಾವನೆ ಬರುವುದು. ರಾಮುವಿನ ಶಿಕ್ಷಣಕ್ಕೆ ಅವನು ಅಡ್ಡಿಯಾಗಿಲ್ಲ. ಆದರೆ ಓದು ಬರಹ ತಿಳಿಯುವಷ್ಟು ಕಲಿತರೆ ಸಾಕು ಎಂದು ಅವನಿಗೆ ಕಾಣುವುದು. ಈಗ ಅವನಿಗೆ ಹೊಲದ ರುಚಿ ಹತ್ತದೇ ಇದ್ದರೆ ಮುಂದೆ ಹೊಲವನ್ನು ಯಾರು ಬೆಳೆಸುವರು ಎನ್ನುವ ಭಯ ಅವನಿಗೆ. ಬಾಲ್ಯದಲ್ಲಿಯೇ ಮಣ್ಣಿನ ಪರಿಚಯ ಮಾಡಿಸದೇ ಇದ್ದರೆ ದೊಡ್ಡವನಾದ ಬಳಿಕ ಅವನು ಹೊಲಕ್ಕೆ ಹೋಗಲಾರ. ಇದನ್ನು ಚಿಂತಿಸಿ ಅವನು ಕಸಿವಿಸಿಗೊಳ್ಳುತ್ತಿದ್ದ. ತಾನು ಬೆವರಿಳಿಸಿ, ಕಷ್ಟಪಟ್ಟು ಹೊಲದಲ್ಲಿ ಚಿನ್ನವನ್ನು ಬೆಳೆಸಿದೆ. ನಾಳೆ ಅದು ಮೂರನೆಯವರ ಪಾಲಿಗೆ ಹೋಗುವುದು ಖಂಡಿತ. ಇದು ಅವನನ್ನು ದುಃಖಿತನನ್ನಾಗಿ ಮಾಡುತ್ತಿತ್ತು.

ಅವರ ಹೊಲದ ಸಮೀಪವೇ ಯಶವಂತನ ಹೊಲವೂ ಇದೆ. ಅವನ ಇಬ್ಬರು ಮಕ್ಕಳು ಕಲಿತು ಉದ್ಯೋಗಕ್ಕೆ ಸೇರಿದ್ದಾರೆ. ಈಗ ಅವರು ಆ ಹೊಲದಲ್ಲಿ ಕಾಲು ಕೂಡ ಇಡುವುದಿಲ್ಲ. ಇದನ್ನು ಶೆವಗೊ ಕಂಡಿದ್ದಾನೆ. ಆದರೆ ಯಶವಂತನಿಗೆ ನಾಲ್ಕು ಗಂಡುಮಕ್ಕಳು; ಇಬ್ಬರು ಕಲಿತವರಾಗಿದ್ದರೆ ಉಳಿದ ಇಬ್ಬರು ಹೊಲದಲ್ಲಿ ದುಡಿಯುತ್ತಿದ್ದಾರೆ. ಹೀಗಾಗಿ ಅವನಿಗೆ ಹೇಳಿಕೊಳ್ಳುವಂತಹ ತಾಪತ್ರಯ ಏನೂ ಇಲ್ಲ. ಆದರೆ ಆನಂದುವಿನದು ಹಾಗಲ್ಲ. ರಾಮು ಅವನ ಒಬ್ಬನೇ ಮಗ. ಆನಂದು ಕೂಡ ಶೆವಗೊನ ಜೊತೆಗಿರುವ ಒಬ್ಬನೇ ಮಗ. ಹೀಗಾಗಿ ಮಣ್ಣಿನ ಕೂಗನ್ನು ಅವನ ಕಿವಿಯ ಮೇಲೆ ಹಾಕುವುದಕ್ಕೆ ಅವನನ್ನು ಶಾಲೆಗೆ ಕಳುಹಿಸಿಲ್ಲ. ರಾಮುವಷ್ಟು ದೊಡ್ಡವನಿರುವಾಗ ಆನಂದುವನ್ನು ಶೆವಗೊ ತನ್ನ ಜೊತೆಯಲ್ಲಿ ಹೊಲಕ್ಕೆ ಕರೆದುಕೊಂಡು ಹೋಗುತ್ತಿದ್ದನು.

ಇತ್ತೀಚೆಗೆ ಶಿವಗೊನ ಆರೋಗ್ಯ ಚೆನ್ನಾಗಿಲ್ಲ. ಯಾವಾಗ ದಮ್ಮಿನ ಕಾಟ ಶುರುವಾಗುತ್ತೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಈಗ ಹೆಚ್ಚು ಕಷ್ಟದ ಕೆಲಸ ಮಾಡುವುದು ಅವನಿಂದ ಸಾಧ್ಯವಿಲ್ಲ. ಎಲ್ಲಾ ಭಾರ ಆನಂದುವಿನ ಮೇಲೆ ಬಿದ್ದಿದೆ. ಅವನು ಕೂಡ ಎಲ್ಲವನ್ನೂ ತನ್ನ ಹೆಗಲಿನ ಮೇಲೆ ಹೊತ್ತುಕೊಂಡಿದ್ದಾನೆ. ಹಗಲು ರಾತ್ರಿ ಹೊಲದಲ್ಲಿ ದುಡಿಯುತ್ತಾನೆ. ಆದರೆ ಮಗನಿಗೆ ಹೊಲದ ಪ್ರೀತಿ ಹುಟ್ಟಲು ಬಿಡುವುದಿಲ್ಲ. ಸ್ವತಃ ಆನಂದುವೇ ಕಲಿಯುವ ಇಚ್ಛೆಯನ್ನು ಅದುಮಿಕೊಂಡಿದ್ದರಿಂದ ಅವನು ರಾಮುವಿಗೆ ಕಲಿಯಲು ಬಿಟ್ಟಿರಬಹುದೇ? ಶಿವಗೊನಿಗೆ ಏನೂ ತಿಳಿಯದ ಪರಿಸ್ಥಿತಿ.

ಅವನು ಮತ್ತೆ ಆನಂದುವಿಗೆ ಹೇಳುತ್ತಿರುತ್ತಾನೆ, “ಅರೆ, ನಮ್ಮ ಮಕ್ಕಳು ಆಕಾಶದಲ್ಲಿ ಹಾರುವ ಬಯಕೆಯನ್ನು ಇಟ್ಟುಕೊಳ್ಳುವ ಹಾಗಿಲ್ಲ. ನಮ್ಮ ಬೇರುಗಳನ್ನು ಮಣ್ಣಿನಿಂದ ಕಿತ್ತು ಬಿಸಾಡುವುದು ಸರಿಯಲ್ಲ ಮಗಾ. ಆಕಾಶದಲ್ಲಿ ಹಾರಾಡಲು ರೆಕ್ಕೆಗಳ ಶಕ್ತಿ ಬೇಕು. ಇಲ್ಲದಿದ್ದರೆ ಆಕಾಶವೂ ದೂರ ಉಳಿಯುತ್ತದೆ ಮತ್ತು ಕಾಲಕೆಳಗಿನ ಭೂಮಿಯೂ ಕೈಬಿಡುತ್ತದೆ ಕಂಡ್ಯಾ.”

ಈ ಬಾಬತ್ತಿನಲ್ಲಿ ಆನಂದು ತಂದೆಯ ಮಾತನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ. ಅವರ ಮನೆಯಲ್ಲಿ ಯಾರಿಗೂ ಓದಲು ಬರುವುದಿಲ್ಲ. ಅಲ್ಲಿ ರಾಮು ಪುಸ್ತಕವನ್ನು ಸರಸರನೆ ಓದಿಕೊಳ್ಳುವುದು ಅವನಿಗೆ ತುಂಬಾ ಹೆಮ್ಮೆಯ ವಿಷಯ. ಅವನು ಉರುಹೊಡೆಯುತ್ತಿದ್ದರೆ ಹಸಿವು, ಬಾಯಾರಿಕೆ ಎಲ್ಲವೂ ಮರೆತು ಹೋಗುತ್ತದೆ. ವಾರ್ಷಿಕ ಪರೀಕ್ಷೆಯಲ್ಲಿ ರಾಮು ತೇರ್ಗಡೆ ಹೊಂದಿದ ಸುದ್ದಿ ಬಂದ ಕೂಡಲೇ ಅವನು ಅತ್ತಿಮರದ ಮುಂದೆ ಊದುಕಡ್ಡಿ ಹಚ್ಚಿ ಬರುತ್ತಾನೆ. “ರಾಮುವಿಗೆ ಕಲಿಯುವುದರಲ್ಲಿ ಉತ್ತಮ ಯಶಸ್ಸುಕೊಡು” ಎಂದು ಮೂಗು ಉಜ್ಜುತ್ತಾನೆ. ಆಮೇಲೆ ಮನೆಗೆ ಬಂದಾಗ ಶಿವಗೊ ಅವನಿಗೆ ತಪ್ಪದೆ ಹೇಳುತ್ತಾನೆ. “ರಾಮು ಕಲಿತದ್ದು ಸಾಕು. ಈಗ ಅವನನ್ನು ಹೊಲಕ್ಕೆ ಕರೆದುಕೊಂಡು ಹೋಗು. ಹೆಚ್ಚುಹೆಚ್ಚು ಕಲಿತು ಏನಾಗಬೇಕು? ಓದಲು ಬರೆಯಲು ಬಂದರೆ ಸಾಕು.”

“ಅವನು ತುಂಬಾ ಕಲಿತು ನಮ್ಮ ಹೆಸರು ಮುಂದೆ ತರಬೇಕು” ಆನಂದು ಹೇಳುತ್ತಾನೆ.

“ಕುಲದ ಹೆಸರು ಉದ್ಧಾರ ಮಾಡುವುದು ಅಂದರೆ ಹೊಲವನ್ನು ಹಾಳುಗೆಡಹುವುದು ಅಲ್ಲವೇ? ಇವತ್ತು ನೀನು ಅತ್ತಿಮರಕ್ಕೆ ಊದುಕಡ್ಡಿ ಹಚ್ಚಿ ಬಂದಿರುವೆ. ಆದರೆ ಯಾವಾಗ ರಾಮು ಕೈಯಲ್ಲಿ ನೇಗಿಲು ಹಿಡಿಯುತ್ತಾನೋ ಅಂದು ನಾನು ಅತ್ತಿಮರದ ಮುಂದೆ ಎರಡು ಊದುಕಡ್ಡಿ ಹಚ್ಚುತ್ತೇನೆ” ಎಂದು ಶಿವಗೊ ತಪ್ಪದೆ ಹೇಳುತ್ತಾನೆ.

ಅಜ್ಜ ಹೀಗೆ ಸಿಟ್ಟು ಮಾಡಿಕೊಂಡಿದ್ದಾನೆಂದರೆ ಅದು ರಾಮು ಪಾಲಿಗೆ ಕೆಟ್ಟ ದಿನವಾಗುತ್ತದೆ. ಅವನು ರಾತ್ರಿ ಅಜ್ಜನ ಬಳಿಯೇ ಮಲಗುವುದು. ಅಜ್ಜನ ಮನಃಸ್ಥಿತಿ ಸರಿಯಿದ್ದ ದಿನವನ್ನು ನೋಡಿ ಅವನು ಅಜ್ಜನಲ್ಲಿ ಕೇಳುತ್ತಾನೆ.


“ಅಜ್ಜಾ, ನಾನು ಮೊದಲು ಬರೆಯುವುದನ್ನು ಕಲಿಯುತ್ತೇನೆ. ಆಮೇಲೆ ಹೊಲದಲ್ಲಿ ಬೆಳೆ ಬೆಳೆಯುವುದನ್ನು ಕಲಿಯುತ್ತೇನೆ. ನೀವು ಚಿಂತೆ ಮಾಡುವುದು ಬೇಡ.”

ಶಿವಗೊಗೆ ಇದು ಇಷ್ಟವಾಯಿತು. “ಹಾಗಿದ್ದರೆ ನೀನು ಕಲಿ ಮಗಾ.”

“ನನ್ನನ್ನು ಶಾಲೆಯಿಂದ ಬಿಡಿಸುವಂತೆ ನೀನು ಅಪ್ಪನಲ್ಲಿ ಹೇಳುವುದಿಲ್ಲ ತಾನೇ?”

[redacted]

ಅವನು ಹೀಗೆ ಅಳುವುದನ್ನು ನೋಡಿ ಕೆಲವು ದಿನ ರಾಮು ಅವನ ಹತ್ತಿರ ಕುಳಿತುಕೊಳ್ಳುತ್ತಿದ್ದನು. "ಅಪ್ಪಾ, ಅಳಬೇಡ, ನಾನು ಇದ್ದೇನಲ್ಲ. ನೀನು ಏನೂ ಹೆದರಬೇಡ."



[redacted]

[redacted]

## ಲೇಖಕರ ಪರಿಚಯ

**ಮೀನಾ ಕಾಕೋಡ್ಕರ್**ರವರು ಕೊಂಕಣಿ ಭಾಷೆಯ ಖ್ಯಾತ ಕತೆಗಾರ್ತಿ. ಅವರ ಮೊದಲ ಕಥಾಸಂಕಲನ ದೊಂಗರ್ ಚಂವಲ್ಲಾ. ಅವರ ಸಪನಪುಲಾಂ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಗ್ರಾಮೀಣ ಪರಿಸರ ಮತ್ತು ಸಂಸ್ಕೃತಿಯನ್ನು ನಿರೂಪಿಸುವ ಅವರ ಹಲವು ಕಥೆಗಳು ಮನುಷ್ಯ ಸಂಬಂಧದ ಎಳೆಗಳನ್ನು ಶೋಧಿಸುತ್ತವೆ. ಅವರು ಕಾರವಾರದಲ್ಲಿ ನಡೆದ ೨೦ನೇ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರು ಕೊಂಕಣಿ ಭಾಷೆಯಲ್ಲಿ ಬರೆದ 'ಹೀಗೊಂದು ಕನಸು ಹೀಗಿದೆ ಜೀವನ' ಕತೆಯನ್ನು ಗೀತಾ ಶೆಣೈಯವರು ಕನ್ನಡಕ್ಕೆ ಅನುವಾದಿಸಿದ್ದಾರೆ.

### ವಿಶದೀಕರಣ

[redacted]



### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

[redacted]

2 "ಸಾಹೇಬರು ಶಾಲೆಗೆ ಬಂದಾಗ ಎದ್ದು ನಿಲ್ಲುವ ಮಕ್ಕಳು ಅಪ್ಪ ಶಾಲೆಗೆ ಬಂದರೆ ಯಾಕೆ ಎದ್ದು ನಿಲ್ಲುವುದಿಲ್ಲ?" ಎಂಬ ರಾಮುವಿನ ಪ್ರಶ್ನೆಗೆ ಆತನ ಅಜ್ಜನು ಏನೆಂದು ಉತ್ತರಿಸಿದನು?

3 ಶಿವಗೊ ಏನನ್ನು ಚಿಂತಿಸಿ ಕಸಿವಿಸಿಗೊಳ್ಳುತ್ತಿದ್ದನು?

4 ಶಿವಗೊ ಅತ್ತಿಮರದ ಮುಂದೆ ತಾನು ಊದುಕಡ್ಡಿ ಹಚ್ಚುವುದು ಯಾವಾಗ ಎಂದು ಹೇಳುತ್ತಾನೆ?



## ಪರಿವರ್ತಿಸಿ ಬರೆಯಿರಿ

ಕೆಳಗೆ ಕೊಡಲಾದ ಸಂಯುಕ್ತವಾಕ್ಯಗಳನ್ನು ಸರಳವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

- ಧಾರಾಕಾರವಾಗಿ ಮಳೆ ಸುರಿದುದರಿಂದ ರೈತನ ಕೃಷಿ ನಾಶವಾಯಿತು.
- ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿದಾಗ ಅಧ್ಯಾಪಕರಿಗೆ ಸಂತೋಷವಾಯಿತು.



## ಸಂಭಾಷಣೆ ಬರೆದು ಅಭಿನಯಿಸಿರಿ

- ಈ ಪಾಠದಲ್ಲಿ ಬಂದ ಪಾತ್ರಗಳೊಳಗೆ ನಡೆಯುವ ಸಂಭಾಷಣೆಯನ್ನು ಗುರುತಿಸಿ ನಾಟಕ ರೂಪದಲ್ಲಿ ಬರೆದು ತರಗತಿಯಲ್ಲಿ ಅಭಿನಯಿಸಿರಿ.



## ಪಾತ್ರಚಿತ್ರಣ ಮಾಡಿರಿ

- ಈ ಪಾಠದಲ್ಲಿ ನಿಮಗೆ ಇಷ್ಟವಾದ ಪಾತ್ರದ ಪಾತ್ರಚಿತ್ರಣ ಮಾಡಿರಿ.




## ಟಿಪ್ಪಣಿ ಬರೆಯಿರಿ

- ಶಾಲೆಯಲ್ಲಿ ಜೈವಿಕ ಉದ್ಯಾನವನ್ನು ನಿರ್ಮಿಸುವುದರ ಉದ್ದೇಶಗಳನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿ ಬರೆಯಿರಿ.



## ಕತೆಯನ್ನು ಮುಂದುವರಿಸಿ ಬರೆಯಿರಿ

- ಕಲಿಕೆಯಲ್ಲಿ ಅದಮ್ಯ ಆಸಕ್ತಿ ಹೊಂದಿದ ರಾಮು ಕೊನೆಗೆ ಕೃಷಿಯಲ್ಲೂ ಆಸಕ್ತಿ ಹೊಂದುತ್ತಾನಲ್ಲವೇ? ಹಾಗಾದರೆ ಅವನ ಜೀವನ ಹೇಗೆ ಮುಂದುವರಿದಿರಬಹುದು? ಊಹಿಸಿ ಕತೆಯನ್ನು ಮುಂದುವರಿಸಿ ಬರೆಯಿರಿ.



# ಕಾಯಕ ನಿಷ್ಠೆ

ಬ್ಯಾರಿಸ್ಟರ್‌ನ ಮನೆಯಲ್ಲಿ ಎಷ್ಟು ಸಾಧ್ಯವಾಗಬಹುದೋ ಅಷ್ಟೆಲ್ಲ ಸರಳತೆಯನ್ನು ನಾನು ಮನೆಯಲ್ಲಿ ಆಚರಣೆಗೆ ತಂದೆ. ಕೆಲವಾದರೂ ಕುರ್ಚಿ ಮೇಜುಗಳಿಲ್ಲದೆ ಸಾಧ್ಯವಿರಲಿಲ್ಲ. ನಾನು ಮಾಡಿದ ಬದಲಾವಣೆ ಬಾಹ್ಯಕ್ಕಿಂತ ಹೆಚ್ಚಾಗಿ ಅಂತರಂಗದ್ದಾಗಿತ್ತು. ದೇಹಶ್ರಮದ ಕೆಲಸಗಳನ್ನೆಲ್ಲ ನಾನೇ ಮಾಡಿಕೊಳ್ಳುವ ಇಚ್ಛೆ ಹೆಚ್ಚಾಯಿತು. ಆದುದರಿಂದ ನನ್ನ ಮಕ್ಕಳನ್ನೂ ಅದೇ ನಿಯಮಕ್ಕನುಸಾರವಾಗಿ ನಾನು ಬೆಳೆಸತೊಡಗಿದೆ.

ಅಂಗಡಿಯ ರೊಟ್ಟಿಯನ್ನು ಕೊಳ್ಳುವುದರ ಬದಲು, ಕೂನೆಯವರ ಕ್ರಮದಂತೆ ನಾವು ಹೊಟ್ಟು ತೆಗೆಯದ ಗೋಧಿಯಿಂದ, ಹುಳಿ ಹಿಡಿಸದೆಯೇ ರೊಟ್ಟಿಯನ್ನು ಮನೆಯಲ್ಲಿಯೇ ಮಾಡತೊಡಗಿದೆವು. ಅಂಗಡಿಯಲ್ಲಿ ಸಿಕ್ಕುತ್ತಿದ್ದ ಗೋಧಿಯ ಹಿಟ್ಟಿನಿಂದ ನಮಗೆ ಪ್ರಯೋಜನವಿರಲಿಲ್ಲ. ಕೈಯಲ್ಲಿ ಬೀಸಿದ ಗೋಧಿಯ ಹಿಟ್ಟಿನಿಂದ ಸರಳತೆ, ಆರೋಗ್ಯ, ಮಿತವ್ಯಯ ಎಲ್ಲವನ್ನೂ ಸಾಧಿಸಬಹುದೆಂದು ಯೋಚಿಸಿದೆವು. ಆದುದರಿಂದ ನಾನು ಏಳು ಪೌಂಡಿಗೆ ಒಂದು ಕೈಯಿಂದ ಬೀಸುವ ಯಂತ್ರವನ್ನು ಕೊಂಡುಕೊಂಡೆ. ಅದರ ಕಬ್ಬಿಣದ ಚಕ್ರವನ್ನು ತಿರುಗಿಸಲು ಒಬ್ಬನಿಗೆ ಬಹಳ ಭಾರವಾಗುತ್ತಿತ್ತು. ಆದರೆ ಇಬ್ಬರು ತಿರುಗಿಸಲು ಬಹು ಸುಲಭವಾಗಿತ್ತು. ನಾನು, ಪೋಲಕ್ ಮತ್ತು ಮಕ್ಕಳು ಸಾಧಾರಣವಾಗಿ ಅದರಲ್ಲಿ ಕೆಲಸ ಮಾಡುತ್ತಿದ್ದೆವು. ಆಗಾಗ ನನ್ನ ಹೆಂಡತಿಯೂ ಬೀಸಲು ಸ್ವಲ್ಪ ಸಹಾಯ ಮಾಡುತ್ತಿದ್ದಳು. ಆದರೆ ಬೀಸುವ ಕಾಲ, ಅವಳು ಸಾಧಾರಣವಾಗಿ ಅಡಿಗೆಯನ್ನು ಪ್ರಾರಂಭಿಸುತ್ತಿದ್ದ ಕಾಲವಾಗಿತ್ತು. ಶ್ರೀಮತಿ ಪೋಲಕ್‌ರು ಬಂದ ಮೇಲೆ, ಆಕೆಯೂ ನಮ್ಮ ಜೊತೆಗೆ ಸೇರಿ ಕೊಂಡರು. ಬೀಸುವುದು ಮಕ್ಕಳಿಗೆ ಲಾಭದಾಯಕವಾದ ವ್ಯಾಯಾಮವಾಯಿತು. ಈ ಕಾರ್ಯವನ್ನೇ ಆಗಲಿ ಅಥವಾ ಮತ್ತಾವ ಕಾರ್ಯವನ್ನೇ ಆಗಲಿ, ಅವರ ಮೇಲೆ ಬಲಾತ್ಕಾರವಾಗಿ ಯಾವಾಗಲೂ ಹೇರುತ್ತಿರಲಿಲ್ಲ. ಅದು ಅವರಿಗೆ ಒಂದು ಆಟ, ವಿನೋದವಾಗಿತ್ತು. ಆಯಾಸವಾದ ಕೂಡಲೇ ಅವರು ಬಿಟ್ಟು

ಬಿಡುತ್ತಿದ್ದರು. ಆದರೆ ನನ್ನ ಮಕ್ಕಳೂ ಮತ್ತು ಇತರರ ಮಕ್ಕಳೂ ಎಂದಿಗೂ ಕೆಲಸ ಮಾಡಲು ಹಿಂದೆಗೆಯಲಿಲ್ಲ. ಸೋಮಾರಿಗಳು ಇರಲೇ ಇಲ್ಲವೆಂದಲ್ಲ. ಆದರೆ ಹೆಚ್ಚು ಮಂದಿ ಸಂತೋಷದಿಂದಲೇ ಕೆಲಸ ಮಾಡುತ್ತಿದ್ದರು. ಆ ಕಾಲದಲ್ಲಿ ಕೆಲಸಕ್ಕೆ ಹಿಂದೆಗೆಯುವವರಾಗಲಿ, ಆಯಾಸವಾಯಿತೆಂದು ಹೇಳುವವರಾಗಲೀ ಇದ್ದುದು ನನಗೆ ನೆನಪಿಲ್ಲ.

ಮನೆಯನ್ನು ನೋಡಿಕೊಳ್ಳುವುದಕ್ಕೆ ನಾವು ಒಬ್ಬ ಆಳನ್ನು ಇಟ್ಟುಕೊಂಡಿದ್ದೆವು. ಅವನು ನಮ್ಮೊಂದಿಗೆ ಸಂಸಾರಕ್ಕೆ ಸೇರಿದವನಂತೆ ಇರುತ್ತಿದ್ದ. ಹುಡುಗರು ಅವನ ಕೆಲಸದಲ್ಲಿ ಸಹಾಯ ಮಾಡುತ್ತಿದ್ದರು. ಪೌರಸಭೆಯವರು ನಿಯಮಿಸಿದ್ದ ಝಾಡಮಾಲಿ ಮಲವನ್ನು ಎತ್ತಿಕೊಂಡು ಹೋಗುತ್ತಿದ್ದ. ಆದರೆ ಅನಂತರ ನಾವೇ ಪಾಯಖಾನೆ ಗೃಹವನ್ನು ಶುದ್ಧಿ ಮಾಡುತ್ತಿದ್ದೆವು. ಆಳಿಗೆ ಹೇಳುತ್ತಿರಲಿಲ್ಲ. ಮಕ್ಕಳಿಗೆ ಇದು ಒಳ್ಳೆಯ ಅಭ್ಯಾಸವಾಯಿತು. ಇದರ ಫಲವಾಗಿ ನನ್ನ ಮಕ್ಕಳಲ್ಲಿ ಯಾರಿಗೂ ಝಾಡಮಾಲಿ ಕೆಲಸವೆಂದರೆ ಅಸಹ್ಯವಾಗುತ್ತಿರಲಿಲ್ಲ. ಸಾಮಾನ್ಯವಾದ ಆರೋಗ್ಯ ಮತ್ತು ಪರಿಶುದ್ಧತೆಯ ಜ್ಞಾನವೂ ಅವರಿಗೆ ಚೆನ್ನಾಗಿ ಆಯಿತು. ಜೊಹಾನ್ಸ್‌ಬರ್ಗ್‌ನ ಮನೆಯಲ್ಲಿ ಯಾರೂ ಕಾಯಿಲೆ ಬೀಳುತ್ತಿರಲಿಲ್ಲ. ಆದರೆ ಯಾರಾದರೂ ಬಿದ್ದರೆ ಹುಡುಗರೇ ಸಂತೋಷದಿಂದ ಅವರ ಶುಶ್ರೂಷೆಯನ್ನು ಮಾಡುತ್ತಿದ್ದರು. ಅವರ ಪುಸ್ತಕ ವಿದ್ಯಾಭ್ಯಾಸದ ವಿಷಯದಲ್ಲಿ ನಾನು ಉದಾಸೀನನಾಗಿದ್ದೆನೆಂದೂ ಹೇಳುವುದಿಲ್ಲ. ಆದರೆ ಅದನ್ನು ಬಲಿಕೊಡಲು ನಾನು ಹಿಂದೆಗೆಯುತ್ತಿರಲಿಲ್ಲ. ಆದುದರಿಂದ ನನ್ನನ್ನು ಆಕ್ಷೇಪಿಸಲು ನನ್ನ ಮಕ್ಕಳಿಗೆ ಸ್ವಲ್ಪ ಕಾರಣವಿದೆ. ನಿಜವಾಗಿ ಅವರು ಆ ಆಕ್ಷೇಪಣೆಯನ್ನು ಅಗಾಗ್ಗೆ ಪ್ರಕಟಿಸಿದ್ದಾರೆ. ಸ್ವಲ್ಪ ಮಟ್ಟಿಗೆ ನಾನು ತಪ್ಪಿತಸ್ಥನೆಂದು ಒಪ್ಪಬೇಕು. ಅವರಿಗೆ ಪುಸ್ತಕ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ಇಷ್ಟವೇನೋ ನನಗೆ ಇತ್ತು. ಅದನ್ನು ಅವರಿಗೆ ಕೊಡಲು ನಾನೇ ಪ್ರಯತ್ನಿಸಿದೆ. ಆದರೆ ಆಗಿಂದಾಗ್ಗೆ ಯಾವುದಾದರೂ ಎಡರು ತೊಡರು ಬರುತ್ತಲೇ ಇತ್ತು. ಅವರಿಗೆ ಪಾಠಗಳನ್ನು ಹೇಳಿಕೊಡಲು ನಾನು ಬೇರೆ ಯಾವ ಏರ್ಪಾಡನ್ನೂ ಮಾಡಿರಲಿಲ್ಲವಾಗಿ ಅವರನ್ನು ನನ್ನ ಜತೆಯಲ್ಲಿ ನನ್ನ ಕಛೇರಿಗೂ, ಕಛೇರಿಯಿಂದ ಹಿಂದಕ್ಕೆ ಮನೆಗೂ ಒಟ್ಟು ಐದು ಮೈಲಿ ದೂರ ನಾನು ನಡೆಸಿಕೊಂಡು ಹೋಗುತ್ತಿದ್ದೆ. ಇದರಿಂದ ಅವರಿಗೂ ನನಗೂ ತಕ್ಕಮಟ್ಟಿನ ವ್ಯಾಯಾಮವಾಗುತ್ತಿತ್ತು. ಈ ತಿರುಗಾಟದಲ್ಲಿ ನನ್ನ ಜತೆಯಲ್ಲಿ ಯಾರಾದರೂ ಇದ್ದು ನನ್ನ ಲಕ್ಷ್ಯವನ್ನು ಸೆಳೆದುಕೊಳ್ಳದಿದ್ದರೆ ನಾನು ಅವರೊಂದಿಗೆ ಮಾತನಾಡುತ್ತಾ ಅವರಿಗೆ ಶಿಕ್ಷಣವನ್ನು ಕೊಡಲು ಪ್ರಯತ್ನಿಸುತ್ತಿದ್ದೆ. ಭಾರತದಲ್ಲಿ ಉಳಿದಿದ್ದ ಹೀರಾಲಾಲ್‌ನ ಹೊರತು, ಜೊಹಾನ್ಸ್‌ಬರ್ಗ್‌ನಲ್ಲಿ ನನ್ನೊಂದಿಗೆ ಇದ್ದ ನನ್ನ ಮಕ್ಕಳೆಲ್ಲ ಈ ರೀತಿಯಾಗಿಯೇ ಬೆಳೆದರು. ನಾನು ದಿನಕ್ಕೆ ಒಂದು ಗಂಟೆಯನ್ನಾದರೂ ಅವರಿಗೆ ತಪ್ಪದೆ ವಿನಿಯೋಗಿಸಲು ಸಾಧ್ಯವಾಗಿದ್ದಿದ್ದರೆ, ಅವರಿಗೆ ನನ್ನ ಅಭಿಪ್ರಾಯಕ್ಕನುಗುಣವಾಗಿ ಆದರ್ಶವಾದ ಪುಸ್ತಕ ವಿದ್ಯಾಭ್ಯಾಸವನ್ನು ಕೊಡಬಹುದಾಗಿತ್ತು ಎಂಬುದು ನನ್ನ ಮತ. ಆದರೆ ಅವರಿಗೆ ತಕ್ಕಷ್ಟು

ಪುಸ್ತಕ ವಿದ್ಯಾಭ್ಯಾಸ ಜ್ಞಾನವನ್ನು ಕೊಡಿಸಲು ನಾನು ಸರಿಯಾದ ಏರ್ಪಾಡನ್ನು ಮಾಡಲಿಲ್ಲ ಎಂಬುದು ನನಗೂ ವಿಷಾದವಾಗಿದೆ. ನನ್ನ ಹಿರಿಯ ಮಗ ತನ್ನ ದುಃಖವನ್ನು ನನ್ನೊಂದಿಗೂ ವೃತ್ತಪತ್ರಿಕೆಗಳ ಮೂಲಕ ಸಾರ್ವಜನಿಕವಾಗಿಯೂ ವ್ಯಕ್ತಪಡಿಸಿದ್ದಾನೆ. ಉಳಿದ ಮಕ್ಕಳು ಇದು ಅನಿವಾರ್ಯವೆಂದು ನನ್ನ ಈ ತಪ್ಪನ್ನು ಉದಾರ ಬುದ್ಧಿಯಿಂದ ಮನ್ನಿಸಿದ್ದಾರೆ. ಇದರಿಂದ ನಾನೇನೂ ದುಸ್ಸಹವಾದ ವ್ಯಥೆಯನ್ನು ಅನುಭವಿಸುತ್ತಿಲ್ಲ. ನಾನು ಆದರ್ಶ ತಂದೆಯಾಗಲಿಲ್ಲವಲ್ಲಾ ಎಂಬುದೊಂದೇ ವ್ಯಥೆ. ಆದರೆ ನನ್ನ ದೃಷ್ಟಿಯಲ್ಲಿ ಪ್ರಾಮಾಣಿಕವಾಗಿ ಸಮಾಜ ಸೇವೆ ಯಾವುದೆಂದು ನಾನು ಭಾವಿಸಿದೆನೋ, (ನಾನು ಭಾವಿಸಿದುದು ತಪ್ಪು ಇರಬಹುದು) ಆ ಸೇವೆಗಾಗಿ ಅವರ ಪುಸ್ತಕ ಜ್ಞಾನವನ್ನು ನಾನು ಬಲಿಗೊಟ್ಟೆನೆಂಬುದು ನನ್ನ ಅಭಿಪ್ರಾಯ. ಅವರ ಚಾರಿತ್ರ್ಯವನ್ನು ಬೆಳೆಸಲು, ಅವಶ್ಯಕವಾದ ಕರ್ತವ್ಯಗಳನ್ನು ಮಾಡುವುದರಲ್ಲಿ ನಾನು ಅಲಕ್ಷ್ಯ ಮಾಡಲಿಲ್ಲವೆಂಬುದು ಸ್ಪಷ್ಟವಾಗಿ ತಿಳಿದಿದ್ದೇನೆ. ಇದಕ್ಕೆ ಏರ್ಪಾಡು ಮಾಡುವುದು ಪ್ರತಿಯೊಬ್ಬ ಪೋಷಕನ ಅವಶ್ಯಕ ಕರ್ತವ್ಯವೆಂದು ನಾನು ನಂಬುತ್ತೇನೆ. ನನ್ನ ಎಲ್ಲ ಪ್ರಯತ್ನಗಳನ್ನೂ ಮೀರಿ ನನ್ನ ಮಕ್ಕಳಲ್ಲಿ ಏನಾದರೂ ದೋಷಗಳು ವ್ಯಕ್ತವಾಗಿದ್ದರೆ, ಅವು ಮಕ್ಕಳ ವಿಷಯದಲ್ಲಿ ನನ್ನ ಅಲಕ್ಷ್ಯವನ್ನು ತೋರಿಸುವುದಿಲ್ಲ. ಅವು ತಂದೆ ತಾಯಿಗಳು ಇಬ್ಬರಲ್ಲಿಯೂ ಇರುವ ದೋಷಗಳನ್ನು ತೋರಿಸುತ್ತವೆ ಎಂಬುದು ನನ್ನ ದೃಢವಾದ ನಂಬಿಕೆ.

ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣವನ್ನು ಕೊಡುವುದರಿಂದ ಕೆಡುಕೇ, ಇಲ್ಲವೇ ಎಂಬ ವಿಷಯದಲ್ಲಿ ನನಗೂ ಪೋಲಕರಿಗೂ ಅನೇಕ ವೇಳೆ ತೀವ್ರವಾದ ವಾಗ್ವಾದವುಂಟಾಗುತ್ತಿತ್ತು. ಎಳೆ ಮಕ್ಕಳಾಗಿದ್ದಾಗಿನಿಂದಲೂ ಮಕ್ಕಳಿಗೆ ಇಂಗ್ಲೀಷಿನಲ್ಲಿ ಯೋಚಿಸುವುದನ್ನು, ಮಾತನಾಡುವುದನ್ನು ಕಲಿಸುವ ಭಾರತೀಯ ಪೋಷಕರು, ತಮಗೂ ತಮ್ಮ ಮಕ್ಕಳಿಗೂ ದ್ರೋಹವೆಸಗುತ್ತಾರೆಂಬುದು ನನ್ನ ದೃಢವಾದ ನಂಬಿಕೆ. ಅವರು ತಮ್ಮ ಮಕ್ಕಳನ್ನು ರಾಷ್ಟ್ರದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಕುಲಧನದಿಂದ ವಂಚಿಸುತ್ತಾರೆ. ಅಷ್ಟರಮಟ್ಟಿಗೆ ಅವರನ್ನು ದೇಶದ ಸೇವೆಗೆ ಅನರ್ಹರನ್ನಾಗಿ ಮಾಡುತ್ತಾರೆ. ನನಗೆ ಈ ದೃಢವಾದ ನಂಬಿಕೆ ಯಾವಾಗಲೂ ಇದ್ದುದರಿಂದ ನಾನು ನನ್ನ ಮಕ್ಕಳೊಂದಿಗೆ ಮಾತನಾಡುವಾಗಲ್ಲೆಲ್ಲ ಗುಜರಾತಿಯಲ್ಲಿಯೇ ಮಾತನಾಡುತ್ತಿದ್ದೆ. ಇದು ಪೋಲಕ್‌ರಿಗೂ ಎಂದಿಗೂ ಒಪ್ಪಿಗೆಯಾಗುತ್ತಿರಲಿಲ್ಲ. ಮಕ್ಕಳ ಭವಿಷ್ಯವನ್ನು ನಾನು ಹಾಳು ಮಾಡುತ್ತಿರುವೆನೆಂದು ಅವರು ಭಾವಿಸಿದರು. ಮಕ್ಕಳು ಬಾಲ್ಯದಿಂದಲೂ ವಿಶ್ವಭಾಷೆಯಾಗಿರುವ ಇಂಗ್ಲೀಷ್ ನಂತಹ ಭಾಷೆಯನ್ನು ಕಲಿತರೆ, ಜೀವನದ ಹೋರಾಟದಲ್ಲಿ ಅವರು ಇತರರಿಗಿಂತ ಸುಲಭವಾಗಿ ಮುಂದುವರಿಯುವರೆಂದು ಅವರು ತಮ್ಮ ಎಲ್ಲ ಶಕ್ತಿ ಮತ್ತು ಪ್ರೇಮವನ್ನೂ ಪ್ರಕಟಿಸಿ ವಾದಿಸುತ್ತಿದ್ದರು. ನಾನು ನನ್ನ ಭಾವನೆಗಳೇ ಸರಿ ಎಂದು ಅವರಿಗೆ ನಂಬಿಕೆಯನ್ನುಂಟು ಮಾಡಿದೆನೋ ಅಥವಾ ಅವರೇ ನನ್ನದು ಹಠಮಾರಿ

ಸ್ವಭಾವವೆಂದು ನನ್ನ ಕೈಬಿಟ್ಟರೋ ನನಗೆ ನೆನಪಿಲ್ಲ. ಇದು ನಡೆದುದು ಇಪ್ಪತ್ತು ವರುಷಗಳ ಕೆಳಗೆ. ನನ್ನ ಅನುಭವದಿಂದ ನನಗೆ ಆಗ ಇದ್ದ ಮನೋಭಾವಗಳೇ ಇನ್ನೂ ಹೆಚ್ಚು ದೃಢವಾಗುತ್ತಿವೆ. ನನ್ನ ಮಕ್ಕಳು ಪುಸ್ತಕ ವಿದ್ಯಾಭ್ಯಾಸವಿಲ್ಲದುದರಿಂದ ಕಷ್ಟಪಟ್ಟಿದ್ದರೂ, ಅವರಿಗೆ ಸ್ವಾಭಾವಿಕವಾಗಿ ಬಂದಿರುವ ಮಾತೃಭಾಷೆಯ ಜ್ಞಾನ, ಅವರಿಗೂ ದೇಶಕ್ಕೂ ಮಂಗಳವನ್ನೇ ಉಂಟು ಮಾಡಿದೆ. ಈಗ ಅವರು ಇಂಗ್ಲೀಷನ್ನು ಕಲಿತಿದ್ದರೆ ಇರುತ್ತಿದ್ದಷ್ಟು ಪರದೇಶಿಯರಾಗಿ ಕಾಣುವುದಿಲ್ಲ. ಇಂಗ್ಲೀಷ್ ಮಾತನಾಡುವ ಅನೇಕ ಮಿತ್ರರೊಂದಿಗೆ ಅವರಿಗೆ ಸಂಪರ್ಕವುಂಟಾಗುತ್ತಿದ್ದುದರಿಂದಲೂ ಅವರು ಇಂಗ್ಲೀಷನ್ನು ಸರಾಗವಾಗಿ ಮಾತನಾಡಲು ಮತ್ತು ಬರೆಯಲು ಶಕ್ತರಾಗಿ ಸ್ವಾಭಾವಿಕವಾಗಿ ದ್ವಿಭಾಷಿಗಳೇ ಆದರು.

*****

ಮೇಲಿನ ಭಾಗವು ಗಾಂಧೀಜಿಯವರ ಆತ್ಮಕಥೆಯ ಭಾಗವಾಗಿದೆ. ಇದನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ಕನ್ನಡಕ್ಕೆ ಅನುವಾದಿಸಿದ್ದಾರೆ.

## ವಿಶದೀಕರಣ

ಕೂನೆ – ಲೂಯಿಸ್ ಕೂನೆ ಜರ್ಮನಿಯ ಒಬ್ಬ ಪ್ರಕೃತಿ ವೈದ್ಯ. ಜಲ ಚಿಕಿತ್ಸೆಯ ಪ್ರತಿಪಾದಕ.

ಜೊಹಾನ್ಸ್‌ಬರ್ಗ್ – ದಕ್ಷಿಣ ಆಫ್ರಿಕಾದ ಒಂದು ಪ್ರದೇಶ

ಪೋಲಾಕ್ – ಗಾಂಧೀಜಿಯವರು ದಕ್ಷಿಣ ಆಫ್ರಿಕಾದ ಜೊಹಾನ್ಸ್‌ಬರ್ಗ್‌ನಲ್ಲಿದ್ದಾಗ ಹೆನ್ರಿ ಪೋಲಾಕ್ ಹಾಗೂ ಶ್ರೀಮತಿ ಮಿಲ್ಲಿ ಪೋಲಾಕ್ ಗಾಂಧೀಜಿಯವರ ಕುಟುಂಬದ ಗೆಳೆಯರಾಗಿದ್ದರು.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಗಾಂಧೀಜಿಯವರು ತಮ್ಮ ಮಕ್ಕಳಿಗೆ ಆರೋಗ್ಯ ಮತ್ತು ಪರಿಶುದ್ಧತೆಯ ಜ್ಞಾನವನ್ನು ಹೇಗೆ ಮನದಟ್ಟು ಮಾಡಿದರು ?
2. ಗಾಂಧೀಜಿಯವರ ಮಕ್ಕಳು ಗಾಂಧೀಜಿಯವರನ್ನು ಆಕ್ಷೇಪಿಸಲು ಕಾರಣವೇನು?
3. ಇಂಗ್ಲೀಷ್ ಶಿಕ್ಷಣದ ಬಗ್ಗೆ ಗಾಂಧೀಜಿಯವರ ನಿಲುವೇನು ?
4. ಗಾಂಧೀಜಿಯವರ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಲಭಿಸಿದ್ದರೂ ಅವರು ಇಂಗ್ಲೀಷ್ ಭಾಷೆಯಲ್ಲಿ ಪರಿಣಿತರಾದದ್ದು ಹೇಗೆ?

### ಅಭಿಪ್ರಾಯ ಬರೆಯಿರಿ

- ನಮ್ಮ ಶೌಚಾಲಯವನ್ನು ನಾವೇ ಶುದ್ಧ ಮಾಡುತ್ತಿದ್ದೆವು. ಆಳಿಗೆ ಹೇಳುತ್ತಿರಲಿಲ್ಲ. ಇದರ ಫಲವಾಗಿ ನನ್ನ ಮಕ್ಕಳಲ್ಲಿ ಯಾರಿಗೂ ಝಾಡಮಾಲಿ ಕೆಲಸವೆಂದರೆ ಅಸಹ್ಯವಾಗುತ್ತಿರಲಿಲ್ಲ.

ಗಾಂಧೀಜಿಯವರ ಈ ಮಾತಿನ ಆಧಾರದಲ್ಲಿ ವೃತ್ತಿ ಗೌರವದ ಕುರಿತು ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

### ವಿಸ್ತರಿಸಿ ಬರೆಯಿರಿ

- ‘ಕಾಯಕವೇ ಕೈಲಾಸ’ – ಎಂಬ ಗಾದೆ ಮಾತನ್ನು ಪಾಠದ ಆಧಾರದಲ್ಲಿ ವಿಸ್ತರಿಸಿ ಬರೆಯಿರಿ.

### ಟಿಪ್ಪಣಿ ಬರೆಯಿರಿ

- ‘ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳಬೇಕು’ ಎಂಬುದನ್ನು ಪಾಠಭಾಗದ ಆಧಾರದಲ್ಲಿ ಸಮರ್ಥಿಸಿ ಟಿಪ್ಪಣಿ ಬರೆಯಿರಿ.

### ರೂಪಾಂತರಿಸಿ ಬರೆಯಿರಿ

ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರ ಆತ್ಮಕಥೆಯ ಭಾಗವೊಂದನ್ನು ಕೆಳಗೆ ಕೊಡಲಾಗಿದೆ. ಅದನ್ನು ಜೀವನಚರಿತ್ರೆಯಾಗಿ ರೂಪಾಂತರಿಸಿರಿ.


ನಾನೆಷ್ಟು ಧೈರ್ಯ ತಂದುಕೊಂಡರೂ ಸ್ವಲ್ಪ ಅಧೀರನಾಗಿಬಿಟ್ಟಿದ್ದೆ. ಒಟ್ಟು ಇಪ್ಪತ್ತೈದು ಸ್ಪರ್ಧಾಳುಗಳಲ್ಲಿ ನಾನು ಪಡೆದ ಕ್ರಮಾಂಕ ಒಂಬತ್ತು. ಹೀಗಾಗಿ ಬೇಸರಗೊಂಡೆ. ಭಾರತೀಯ ವಾಯುದಳದಲ್ಲಿ ಸೇರ್ಪಡೆಗೊಳ್ಳುವ ಅವಕಾಶ ನನಗೆ ತಪ್ಪಿಹೋಯಿತು. ತೀವ್ರವಾಗಿ ಇದನ್ನು ತಲೆಗೆ ಹಚ್ಚಿಕೊಂಡ ನಾನು ಹೃಷಿಕೇಶದತ್ತ ಸಾಗಿದೆ. ಪವಿತ್ರ ಗಂಗೆಯಲ್ಲಿ ಸ್ನಾನ ಮಾಡಿ ಆನಂದ ಪಡೆದೆ. ಬಳಿಕ ಹತ್ತಿರದಲ್ಲಿದ್ದ ಆಶ್ರಮದತ್ತ ಸಾಗಿದೆ. ನಾನು ಮಾನಸಿಕವಾಗಿ ತೀರಾ ಬಸವಳಿದಿದ್ದೆ. ನನಗೆ ಮನಃಶಾಂತಿ ಬೇಕಾಗಿತ್ತು.

### ಲೇಖನ ಚಿಹ್ನೆ ಅಳವಡಿಸಿರಿ

ಕೆಳಗೆ ಕೊಡಲಾದ ಗದ್ಯಭಾಗಕ್ಕೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿರಿ.


ಮಗೂ ಕಷ್ಟಪಟ್ಟರೆ ಇಷ್ಟ ಸಿಗಬಹುದೆಂಬ ಮಾತು ನೆನಪಿದೆಯಲ್ಲವೇ ಕಷ್ಟಪಟ್ಟು ಓದು ಉತ್ತಮ ಅಂಕ ಗಳಿಸು ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಯೆನಿಸು ನಾಲ್ಕುಮಂದಿ ನಿನ್ನನ್ನು ನೋಡಿ ಭಲಾ ಎನ್ನುವಂತೆ ಬದುಕು ಆಗ ಬಂಧುಗಳಿಗೂ ಗುರುಹಿರಿಯರಿಗೂ ಹೆಮ್ಮೆ ಎಂದು ಅಮ್ಮ ಹೇಳಿದಳು

## ಘಟಕ - 3



# ವಿಜ್ಞಾನ ದರ್ಪಣ

NT-269-7-KANNADA-10-BT



 ಮೇಲಿನ ಚಿತ್ರವನ್ನು ಗಮನಿಸಿದಾಗ ನಿಮ್ಮ ಮನಸ್ಸಿನಲ್ಲಿ ಮೂಡಿದ ವಿಚಾರಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.



# ವಿಜ್ಞಾನಿಗೆ

– ಆನಂದಕಂದ

ಕಾಣದಿರುವ ಕಲ್ಯಾಣಶಕ್ತಿಗಳ ಕಾಣಲು ಹಣುಗುವೆ ನೀ
ಬಾನು – ಭೂಮಿಗಳ ಅಳೆದು ಬಳಚುತಿಹೆ ಧಣು ಧಣು ವಿಜ್ಞಾನಿ!

೧


ಗಾಳಿಯನ್ನು ಮನೆಯಾಳಿನಂತೆ ಮಾಡಿದೆಯೊ ಮಾಟಗಾರ–
ಜಾಳು – ಉಗಿಯೊಳಗಡಗಿರುವ ಅಮಿತಬಲ ಕಂಡ ನೋಟಗಾರ–
ಹರಿವ ನೀರೊಳಗೆ ಹುದುಗಿ ಕುಳಿತ ಹೆಮ್ಮಿಂಚ ಹುಡುಕಿದವನೀ...
ಬಾನು – ಭೂಮಿಗಳ ಅಳೆದು ಬಳಚುತಿಹೆ ಭಲೆ ಭಲೆ ವಿಜ್ಞಾನಿ!

೨

ಸಾವಿರ ಗಾವುದ ದೂರ ಕತೆಯ ಕುಳಿತಲ್ಲಿಯೆ ಕೇಳಿಸುವೆ–
ಸಾವಿರ ಸಾವಿರ ಯೋಜನದಾಟವ ಎಲ್ಲೆಡೆ ಕೇಳಿಸುವೆ
ಜೀವ–ಜೀವಗಳ ಠಾವು–ನೆಲೆಯ ತಪದಿಂದ ಕಂಡ ಮೌನಿ...
ಬಾನು – ಭೂಮಿಗಳ ಅಳೆದು ಬಳಚುತಿಹೆ ಧಣು ಧಣು ವಿಜ್ಞಾನಿ!

೩

ಮಾನವರಿಗೆ ಬಾನೊಳು ಹಾರಾಡುವ ತ್ರಾಣವಿತ್ತ ಧೀರ–
ಅಣುವಿನೊಳಡಗಿಹ ಅನಂತಶಕ್ತಿಯ ತುಡುಕಿ ಹಿಡಿದ ವೀರ!
ತಿಂಗಳ ಲೋಕಕೆ ತೆರಳಲು ಕಟ್ಟುತಲಿರುವೆ ನನಸಿನೇಣಿ...
ಬಾನು – ಭೂಮಿಗಳ ಅಳೆದು ಬಳಚುತಿಹೆ ಭಲೆ ಭಲೆ ವಿಜ್ಞಾನಿ!



# ಕವಿಪರಿಚಯ

**ಬೆಟಗೇರಿ ಕೃಷ್ಣಶರ್ಮ** ಇವರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಬೆಟಗೇರಿಯಲ್ಲಿ ೧೯೦೦ನೇ ಇಸವಿಯಲ್ಲಿ ಜನಿಸಿದರು. 'ಆನಂದಕಂದ' ಎಂಬುದು ಇವರ ಕಾವ್ಯನಾಮ. ಖ್ಯಾತ ಸಾಹಿತಿಯಾಗಿರುವ ಇವರು ಸುದರ್ಶನ, ಮಗಳ ಮದುವೆ, ರಾಜಯೋಗಿ, ಅಶಾಂತಿಪರ್ವ ಮೊದಲಾದ ಕಾದಂಬರಿಗಳನ್ನೂ, ಮುದ್ದನಮಾತು, ಅರುಣೋದಯ, ಒಡನಾಡಿ, ಕಾರಹುಣ್ಣಿಮೆ, ನಲ್ವಾಡುಗಳು ಮೊದಲಾದ ಕವನಸಂಕಲನಗಳನ್ನೂ, ಮಾತನಾಡುವ ಕಲ್ಲು, ಕಳ್ಳರಗುರು ಮತ್ತು ಇತರ ಕಥೆಗಳು ಮೊದಲಾದ ಕಥಾಸಂಕಲನಗಳನ್ನೂ ರಚಿಸಿದ್ದಾರೆ. ಇವರ ಮಗಳ ಮದುವೆ ಕಾದಂಬರಿಗೆ ೧೯೫೧ರಲ್ಲಿ ಮುಂಬೈ ಸರಕಾರದ ಪ್ರಥಮ ಬಹುಮಾನ ಬಂದಿದೆ. ಪತ್ರಿಕೋದ್ಯಮಿಯೂ ಆಗಿದ್ದ ಇವರು ಸ್ವಧರ್ಮ ಹಾಗೂ ಜಯಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದರು. ಮಾತ್ರವಲ್ಲದೆ ೧೯೩೮ರಲ್ಲಿ ಜಯಂತಿ ಎಂಬ ಮಾಸಪತ್ರಿಕೆಯನ್ನು ಆರಂಭಿಸಿ ಮುನ್ನಡೆಸಿದ್ದರು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಇವರು ಭಾಜನರಾಗಿದ್ದಾರೆ. ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಸ್ಥಾನ ಇವರಿಗೆ ಸಂದ ಗೌರವ. ಕರ್ನಾಟಕ ವಿ.ವಿ.ಯು ಇವರಿಗೆ ಡಿ.ಲಿಟ್ ಪದವಿಯನ್ನು ನೀಡಿ ಗೌರವಿಸಿದೆ.

'ವಿಜ್ಞಾನಿಗೆ' ಕವನವನ್ನು ಇವರ 'ಜಯಂತಿ' ಮಾಸಪತ್ರಿಕೆಯಿಂದ ಆರಿಸಲಾಗಿದೆ.

## ವಿಶದೀಕರಣ

| | | |
|---|---|---|
| ಗಾವುದ, ಯೋಜನ | – | ದೂರವನ್ನು ಅಳೆಯುವ ಪ್ರಮಾಣ |
| ಗಾವುದ | – | ಸುಮಾರು ಆರು ಮೈಲು |
| ಯೋಜನ | – | ಸುಮಾರು ಹನ್ನೆರಡು ಮೈಲು |



## ಉತ್ತರ ಬರೆಯಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ವಿಜ್ಞಾನಿಯ ಕಾರ್ಯವ್ಯಾಪ್ತಿ ಇಡೀ ಲೋಕವನ್ನೇ ಆವರಿಸಿದೆ ಎನ್ನುವುದನ್ನು ಕವಿ ಹೇಗೆ ಹೇಳಿದ್ದಾರೆ?

2 ತಿಂಗಳಲೋಕಕೆ ತೆರಳಲು ಕಟ್ಟುತಲಿರುವೆ ನನಸಿನೇಣಿ

– ಈ ಸಾಲಿನಲ್ಲಿ ಕವಿಯು ಉದ್ದೇಶಿಸಿರುವುದು ಏನನ್ನು?

3 ಕವನದಲ್ಲಿ ಮೂಡಿಬಂದಿರುವ ವಿಜ್ಞಾನದ ಆವಿಷ್ಕಾರದ ಸುಳುಹುಗಳನ್ನು ಗುರುತಿಸಿರಿ.

## ಆಶಯ ಬರೆಯಿರಿ

- ‘ವಿಜ್ಞಾನಿಗೆ’ ಕವನದ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಸ್ವಾರಸ್ಯವನ್ನು ಬರೆಯಿರಿ

ಕೆಳಗೆ ಕೊಡಲಾದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

- ಹರಿವ ನೀರೊಳಗೆ ಹುದುಗಿ ಕುಳಿತ ಹೆಮ್ಮೀಂಚ ಹುಡುಕಿದವನೇ....
- ಜೀವ–ಜೀವಗಳ ಶಾವು–ನೆಲೆಯ ತಪದಿಂದ ಕಂಡ ಮೌನಿ....

## ಟಿಪ್ಪಣಿ ಬರೆಯಿರಿ

- ದೈನಂದಿವ ಜೀವನದಲ್ಲಿ ವಿಜ್ಞಾನದ ಕೊಡುಗೆಗಳನ್ನು ಕವನದ ಆಧಾರದಲ್ಲಿ ವಿಶ್ಲೇಷಿಸಿ ಬರೆಯಿರಿ.

## ಆಲ್ಬಂ ತಯಾರಿಸಿರಿ

- ಅಂತರ್ಜಾಲದ ಸಹಾಯದಿಂದ ಪ್ರಸಿದ್ಧ ವಿಜ್ಞಾನಿಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಅಂದವಾದ ಆಲ್ಬಂ ತಯಾರಿಸಿರಿ.

## ಘೋಷಣವಾಕ್ಯ ತಯಾರಿಸಿರಿ

- ವಿಜ್ಞಾನದ ಮಹತ್ವವನ್ನು ಸಾರುವ ಘೋಷಣವಾಕ್ಯಗಳನ್ನು ಬರೆಯಿರಿ.

## ಕವನ ರಚಿಸಿರಿ

ಕೆಳಗೆ ಕೊಡಲಾದ ಗದ್ಯಭಾಗವನ್ನು ಆಧಾರವಾಗಿಟ್ಟುಕೊಂಡು ಕವನ ರಚಿಸಿರಿ.

ಇದು ವಿಜ್ಞಾನಯುಗ. ಒಂದು ಕಾಲದಲ್ಲಿ ನೈಸರ್ಗಿಕವಾದ ವಸ್ತುಗಳ ಬಳಕೆ ಆಗುತ್ತಿದ್ದರೆ ಇಂದು ಹೊಸ ಸಂಶೋಧನೆಗಳ ಫಲವಾಗಿ ಮೂಡಿಬಂದವುಗಳು ನಮ್ಮ ಜೀವನ ಸಂಗಾತಿಗಳಾಗಿವೆ. ಪ್ರಕೃತಿಯ ಬಗ್ಗೆ ನಮಗೆ ಕಾಳಜಿ ಕಡಿಮೆಯಾಗಿದೆ. ಹೊಸ ಯಂತ್ರಾವಿಷ್ಕಾರಗಳ ಕಡೆಗೆ ಮಾತ್ರ ಗಮನ ಹರಿದಿದೆ. ವಿಜ್ಞಾನದ ಒಳಿತನ್ನು ಬಳಸಿ ಕೆಡುಕನ್ನು ಕಡೆಗಣಿಸುವ ಬಗ್ಗೆ ಗಮನ ಹರಿಸಬೇಕು. ಬಹುಶಃ ಅಂತಹ ಚಿಂತನೆಗೂ ಅವಕಾಶವಿಲ್ಲದಂತೆ ಕಾಲದ ಕೈಯಲ್ಲಿ ನಾವೆಲ್ಲ ಬಂದಿಗಳಾಗಿದ್ದೇವೆ. ಹೊಸತನ್ನು ಹುಡುಕಬೇಕು, ಹಳತನ್ನು ಉಳಿಸಬೇಕು ಎಂಬ ತತ್ವ ನಮ್ಮದಾದರೆ ಎಷ್ಟು ಒಳ್ಳೆಯದು; ಕ್ಷಣಕ್ಷಣಕ್ಕೂ ನಮ್ಮ ಮೇಲೆ ದುಷ್ಪರಿಣಾಮ ಬೀರುವ ನವನವೀನ ಉತ್ಪನ್ನಗಳ ಸೌಂದರ್ಯಕ್ಕೆ ಮಾರುಹೋಗುವ ಈ ಕಾಲಘಟ್ಟದ ಜನತೆ ಹಿಂದಿರುಗಿ ನೋಡಬೇಕಾದುದು ಅತ್ಯಗತ್ಯ. ಮಾನವ ಕುಲದ ಉಳಿವಿಗಾಗಿ ಪ್ರಯತ್ನಿಸುವ ಕಾರ್ಯ ಶೀಘ್ರದಲ್ಲೇ ಆಗಬೇಕು.



# ಮೊಳಕೆಯ ಸಿರಿ

ಅಂದು ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಬೆಕ್‌ಮ್ಯಾನ್ ಸಭಾಂಗಣ ಜನರಿಂದ ಕಿಕ್ಕಿರಿದಿತ್ತು. ಕಾಲೇಜು ವಿದ್ಯಾರ್ಥಿಗಳ, ಸಂಶೋಧಕರ ಕುತೂಹಲದ ಕಣ್ಣುಗಳು ವೇದಿಕೆಯ ಮೇಲೆ ನೆಟ್ಟಿದ್ದವು. ಆ ವಿಶಾಲ ವೇದಿಕೆಯಲ್ಲಿ ಹಿಂಬದಿ ಪರದೆ ಬಿಟ್ಟರೆ ಬೇರೇನೂ ಇರಲಿಲ್ಲ. ಮುಖ್ಯ ಅತಿಥಿ ಇನ್ನೇನು ಯಾವುದೇ ಕ್ಷಣದಲ್ಲಿ ಬರಬಹುದು ಎನ್ನುವ ಪ್ರಕಟಣೆ ಮೊಳಗುತ್ತಿತ್ತು. ಇಡೀ ಸಭಾ ಸದನ ಉಸಿರು ಬಿಗಿಹಿಡಿದು ಈ ಕಾರ್ಯಕ್ರಮದ ಮುಖ್ಯ ಅತಿಥಿಯನ್ನು ಕಾಯುತ್ತಿರಬೇಕಾದರೆ..........

ಹೊರಾಂಗಣದಲ್ಲಿ ಕ್ಯಾಂಪಸ್‌ಗೆ ಬಂದ ಕಾರಿನೊಳಗಿನಿಂದ 'ಮಿನಿಕಾರು' ಇಳಿಯಿತು. ಯಾವ ಸ್ವಾಗತದ ಉಪಚಾರಕ್ಕೂ ಕಾಯದ ಆ ವಾಹನ ರೊಯ್ಯ ರೊಯ್ಯನೆ ಸಭಾಂಗಣಕ್ಕೆ ನುಗ್ಗಿತು. ಎಲ್ಲರೂ ಗೌರವದಿಂದ ಎದ್ದು ನಿಂತು ಅತಿಥಿಯನ್ನು ಕರತಾಡನಗಳೊಂದಿಗೆ ಸ್ವಾಗತಿಸಿದರು. ಸಾವಿರಾರು ಕೈಗಳು ಒಂದಾಗಿ ಮಾಡುತ್ತಿದ್ದ ತಾಡನದ ಮೊರೆತ ಒಂದೈದು ನಿಮಿಷ ನಿಲ್ಲಲಿಲ್ಲ. ಸೀದಾ ವೇದಿಕೆ ಏರಿದ ಆ ವಾಹನ ವೇದಿಕೆಯ ನಡುಭಾಗದಲ್ಲಿ ನಿಂತು ಕೊಂಡಿತು. ಆ ವಾಹನ ಈ ಜಗತ್ತು ಕಂಡ ಒಂದು ಅತ್ಯದ್ಭುತ ಗಾಲಿಕುರ್ಚಿ. ಈ ಗಾಲಿ ಕುರ್ಚಿಗೆ ಆತುಕೊಂಡು ಕುಳಿತ ವ್ಯಕ್ತಿ ಜಗತ್ತಿನ ಅತ್ಯಂತ ಹೆಸರುವಾಸಿ ಹಾಗೂ ಮೇಧಾವಿ ವಿಜ್ಞಾನಿ ಡಾ। ಸ್ಟೀಫನ್ ಹಾಕಿಂಗ್.

ನಾಲ್ಕು ದಶಕಗಳಿಂದ ಗಾಲಿ ಕುರ್ಚಿಯಲ್ಲಿ ಬಂದಿಯಾಗಿರುವ, ಮೋಟರ್ ನ್ಯೂರಾನ್ ಸಮಸ್ಯೆಯಿಂದ ಬಳಲುತ್ತಿರುವ ಈ ಶರೀರ ಕ್ಯಾಲಿಫೋರ್ನಿಯಾದಲ್ಲಿದ್ದರೂ ಮನಸ್ಸು ಇನ್ನಾವುದೋ ನೀಹಾರಿಕೆಯಲ್ಲಿ ತೇಲಾಡುತ್ತಿರುತ್ತದೆ; ಇಲ್ಲವೇ ಕೃಷ್ಣರಂಧ್ರದ ಕತ್ತಲ ಒಳಗೆ ಬೆಳಕು ಚೆಲ್ಲುತ್ತಿರುತ್ತದೆ. ಅಂದೂ ಅಷ್ಟೇ, ಅಲ್ಲಿ ಕಾದಿದ್ದ ಸಾವಿರಾರು ಮಂದಿಗೆ ಖಗೋಲ ಮಂಡಲದ, ಅಂದರೆ ನಾವು ಸಂಕ್ಷಿಪ್ತವಾಗಿ 'ವಿಶ್ವ' ಎಂದು ಹೇಳುವ ಅಖಿಲ ಬ್ರಹ್ಮಾಂಡದ ಹುಟ್ಟು, ಬೆಳವಣಿಗೆ ಹಾಗೂ ಸಾವಿನ ವಿಶ್ವದರ್ಶನವನ್ನೇ ಈ ಮಹಾನುಭಾವ ಮಾಡಿಸಿದ.

ಮೊದಲೇ ಧ್ವನಿ ಮುದ್ರಿಸಿ ಸಿದ್ಧಪಡಿಸಲಾಗಿದ್ದ ಉಪನ್ಯಾಸವು ಗಾಲಿ ಕುರ್ಚಿಗೆ ಅಳವಡಿಸಲಾಗಿದ್ದ ಕಂಪ್ಯೂಟರಿನಿಂದ ಬಿತ್ತರವಾಯಿತು. ಸುಮಾರು ಒಂದು ಗಂಟೆ ಉಪನ್ಯಾಸದ ಬಳಿಕ ಪ್ರಶ್ನೋತ್ತರಗಳ ಅವಕಾಶ. ವಿದ್ಯಾರ್ಥಿಗಳ ಪ್ರಶ್ನೆಗೆ ಹಾಕಿಂಗ್ ಕಂಪ್ಯೂಟರಿನ ಮೂಲಕ ಉತ್ತರಿಸುತ್ತಿದ್ದರು. ಬಲಭಾಗಕ್ಕೆ ತಲೆ ಬಾಗಿಸಿಕೊಂಡಿರುವ ಹಾಕಿಂಗ್ ಅವರ ಗಲ್ಲದ ಭಾಗದ ಸ್ನಾಯುಗಳು ಕಂಪ್ಯೂಟರ್‌ನ ಕರ್ಸರನ್ನು ಚಲಿಸುವಂತೆ ಮಾಡುತ್ತವೆ. ಕಣ್ಣಿನ ಭಾಗದ ಈ ಸ್ನಾಯುಗಳ ಚಲನೆ ಕಂಪ್ಯೂಟರಿನಲ್ಲಿ ಆಗಲೇ ತುಂಬಲಾಗಿರುವ ಒಂದೊಂದೇ ಪದವನ್ನು ಆಯ್ದು ಪೋಣಿಸುತ್ತದೆ. ಹೀಗೆ ತುಸು ಸಮಯದ ಬಳಿಕ  ಅವರು ಕಂಪ್ಯೂಟರಿನ ಮೂಲಕ ಉತ್ತರಿಸುತ್ತಿದ್ದರು.

ಭೂಮಿಯಿಂದಾಚೆ ಸದಾ ಇಣಿಕಿ ಹಾಕುತ್ತಿರುವ ಹಾಕಿಂಗ್ ಅವರಿಗೆ ಅನ್ಯಗ್ರಹಗಳ ಜೀವಿಗಳ ಬಗ್ಗೆ ಪ್ರಶ್ನೆಯೊಂದು ಎದುರಾಯಿತು. 'ಅನ್ಯಗ್ರಹ ಜೀವಿಗಳು ಇರುವುದು ನಿಜ. ಆದರೆ ಅವುಗಳ ಜತೆ ಸಂಪರ್ಕ ಸಾಧಿಸುವ ಉಸಾಬರಿಗೆ ಹೋಗದಿರುವುದೇ ಲೇಸು. ಒಂದು ವೇಳೆ ಅವು ಭೂಮಿಗೆ ಕಾಲಿಟ್ಟರೆ ಅಪಾಯ ಕಾದಿಟ್ಟ ಬುತ್ತಿ. ಈ ವಿಶ್ವದಲ್ಲಿ ನಮಗೆ ಇನ್ನೂ ಎಟುಕದ ಜಾಗದಲ್ಲಿ ಮನುಷ್ಯರ ಹಾಗೆಯೇ ಬೇರೆ ಜೀವಿಗಳೂ ಇರಬಹುದು. ಈ ಜೀವಿಗಳು ಸಂಪನ್ಮೂಲಕ್ಕಾಗಿ ಭೂಮಿಗೆ ಹೆಜ್ಜೆ ಇಡದಂತೆ ನೋಡಿಕೊಳ್ಳಬೇಕು' ಎಂದು ಮಿತವಾದ ಶಬ್ದಗಳಲ್ಲಿ ಹೇಳಿದರು.

ಇನ್ನೊಂದು ಪ್ರಶ್ನೆ ಬಂತು. "ಈ ಭೀಕರ ರೋಗ ತಗಲಿದರೂ ನೀವು ಸಾವನ್ನು ಗೆದ್ದಿರಬಹುದು. ಆದರೆ ಅದರಿಂದ ಅನುಭವಿಸಿದ ನೋವೇನು?" 69ರ ಪ್ರಾಯದ ಹಾಕಿಂಗ್ ಸುಮಾರು 15 ನಿಮಿಷದ ನಂತರ ಉತ್ತರವನ್ನು ಕಂಪ್ಯೂಟರಿನಲ್ಲಿ ಪೋಣಿಸಿ ಉತ್ತರಿಸಿದರು. 'ಈ ರೋಗದಿಂದ ಬಳಲುತ್ತಿದ್ದೇನೆ ಎನ್ನುವ ನೋವು ಇಲ್ಲ. ಮಕ್ಕಳ ಜತೆ ಸ್ವಚ್ಛಂದವಾಗಿ ಆಟ ಆಡಲು ಆಗದು ಎನ್ನುವ ನೋವು ಮಾತ್ರ ನನ್ನದು. ಅದು ಬಿಟ್ಟರೆ ನಾನು ತುಂಬಾ ಅದೃಷ್ಟವಂತ. ನನ್ನ ಅಂತರ್‌ದೃಷ್ಟಿ ಮೂಲಕ ನಾನು ಕೆಲಸ ಮಾಡುತ್ತೇನೆ' ಎಂದರು. 45 ವರ್ಷಗಳ ಹಿಂದೆಯೇ ಸಾವಿನ ಕದ ತಟ್ಟಿ ಬಂದಿದ್ದ ಹಾಕಿಂಗ್ ಅವರ ಈ ಮಾತಿಗೆ ಬೆಕ್‌ಮ್ಯಾನ್ ಸಭಾಂಗಣದಲ್ಲಿ ಚಪ್ಪಾಳೆಯ ಮೊರೆತ. ಭಾವುಕರ ಕಣ್ಣಲ್ಲಿ ನೀರು, ಯುವ ಸಮುದಾಯದ ಕಣ್ಣಲ್ಲಿ ಹೊಸ ಹೊಳಪು..

1942 ಜನವರಿ 8, ಇಡೀ ಮಾನವ ಜಗತ್ತು ಹೆಮ್ಮೆ ಪಡುವ ಡಾ. ಸ್ಟೀಫನ್  ಹಾಕಿಂಗ್ ಅವರ ಜನ್ಮದಿನ. ಈ ದಿನಕ್ಕೆ ಇನ್ನೊಂದು ವಿಶೇಷತೆ ಇದೆ. 300 ವರ್ಷಗಳ ಹಿಂದೆ ಇದೇ ದಿನದಂದು ಇಟಲಿಯ ವಿಜ್ಞಾನಿ ಗೆಲಿಲಿಯೋ ಮರಣ ಹೊಂದಿದ್ದರು. ಸ್ಟೀಫನ್ ಜನಿಸಿದ್ದು ಎರಡನೇ ಮಹಾಯುದ್ಧದ ಕಾಲದಲ್ಲಿ. ಜಗತ್ತಿನ ಬಹುಭಾಗ ಯುದ್ಧ ಭಯದಿಂದ ನಡುಗುತ್ತಿತ್ತು. ಹೀಗಾಗಿ, ಸ್ಟೀಫನ್‌ನ ತಂದೆ ಫ್ರಾಂಕ್ ಹಾಕಿಂಗ್ ಮತ್ತು ತಾಯಿ ಇಸಬೆಲ್ ಅವರಿಗೆ ಪುತ್ರೋತ್ಸವದ ಸಂಭ್ರಮವಿರಲಿಲ್ಲ. ಇಸಬೆಲ್ ಮಗನನ್ನು ಹೆರಲು ಲಂಡನ್‌ನಿಂದ ಆಕ್ಸ್‌ಫರ್ಡ್‌ಗೆ ಓಡಿ ಬಂದಿದ್ದರು. ಕಾರಣ  ಆಕ್ಸ್‌ಫರ್ಡ್ ಮೇಲೆ ಬಾಂಬ್ ಹಾಕುವುದಿಲ್ಲವೆಂದು ಹಿಟ್ಲರ್

ಭಾಷೆ ಕೊಟ್ಟಿದ್ದನಂತೆ. ಹಾಕಿಂಗ್‌ಗೆ ಎಂಟು ವರ್ಷವಾದ ನಂತರ ಇಡೀ ಕುಟುಂಬ ಸೇಂಟ್ ಆಲ್ಬನ್ ಎಂಬ ನಗರಕ್ಕೆ ಸ್ಥಳಾಂತರಗೊಂಡಿತ್ತು. ಯುದ್ಧ ಮುಗಿದದ್ದರಿಂದ ಹಾಕಿಂಗ್ ಸೇಂಟ್ ಆಲ್ಬನ್ಸ್ ಶಾಲೆಗೆ ಸೇರಿದರು.

ಹಾಕಿಂಗ್ ತನ್ನ ಬಾಲ್ಯಾವಸ್ಥೆಯನ್ನು ದಾಟತೊಡಗಿದಂತೆ ಅವರಲ್ಲಿ ಅನಾರೋಗ್ಯದ ಲಕ್ಷಣಗಳು ಕೊಂಚ ಕೊಂಚವಾಗಿ ಕಂಡು ಬರತೊಡಗಿದವು. ತೆಳ್ಳಗಿನ ದೇಹದ ಅವರು ಆರೋಗ್ಯವಂತ ಮಕ್ಕಳ ಮಧ್ಯೆ ನಿಂತರೆ ವಿಚಿತ್ರವಾಗಿ ಕಾಣಿಸಲಾರಂಭಿಸಿದರು. ದೊಗಳೆ ಷರಟು ಹಾಕಿಕೊಂಡು ಶಾಲೆಗೆ ಹೋದರೆಂದರೆ ವಿಲಕ್ಷಣ ಮನುಷ್ಯನಂತೆ ಕಾಣಿಸುತ್ತಿದ್ದರು. ವಯಸ್ಸು ಹತ್ತು ಉರುಳಿದರೂ ಮಾತು ಅಸ್ಪಷ್ಟವಾಗಿಯೇ ಇತ್ತು. ಧ್ವನಿಯೂ ಕೀರಲಾಗಿತ್ತು. ಅವರ ಮಾತುಗಳನ್ನು ಸಹಪಾಠಿಗಳು 'ಹಾಕಿಂಗೀಸ್' ಎಂದು ಗೇಲಿ ಮಾಡುತ್ತಿದ್ದರು. ಇದಾವುದಕ್ಕೂ ಕಿವಿಗೊಡದ ಹಾಕಿಂಗ್ ತಮ್ಮ ಪಾಡಿಗೆ ತಾವಿರುತ್ತಿದ್ದರು. ಆದರೆ ಅವರು ಅದ್ಭುತ ಪ್ರತಿಭಾವಂತರಾಗಿದ್ದು ಅಧ್ಯಾಪಕ ವೃಂದಕ್ಕೂ ಅಚ್ಚುಮೆಚ್ಚಿನವರಾಗಿದ್ದರು.

1959ನೇ ಇಸವಿ, ಆಗ ಹಾಕಿಂಗ್‌ಗೆ 17 ವರ್ಷ ಕಾಲೇಜು ಸೇರುವ ಹರಯ. ಆಕ್ಸ್‌ಫರ್ಡ್ ಯುನಿವರ್ಸಿಟಿ ಕಾಲೇಜು ಅವರ ಗುರಿಯಾಗಿತ್ತು. ಹಾಗೆಂದು ಸೀಟು ಸುಲಭವಾಗಿರಲಿಲ್ಲ. ಅದಕ್ಕಾಗಿ ಪ್ರತ್ಯೇಕ ಪ್ರವೇಶ ಪರೀಕ್ಷೆ ಇರುತ್ತದೆ. ಆದರೆ ಹಾಕಿಂಗ್‌ಗೆ ಆ ಪರೀಕ್ಷೆ ಕಷ್ಟವಾಗಿರಲಿಲ್ಲ. ಉತ್ತಮ ಸಾಧನೆ ತೋರಿ ಆಕ್ಸ್‌ಫರ್ಡ್‌ಗೆ ಪ್ರವೇಶ ಪಡೆದರು.

ಆಕ್ಸ್‌ಫರ್ಡ್‌ನಲ್ಲಿ ಎಲ್ಲಾ ತರಗತಿಗಳಲ್ಲೂ ಹಾಕಿಂಗ್ ಮುಂಚೂಣಿಯಲ್ಲಿದ್ದರು. ಆ ಕಾಲದಲ್ಲಿ 'ವಿಶ್ವವಿಜ್ಞಾನ' ದಲ್ಲಿ ಹೆಸರಾಂತ ವಿಜ್ಞಾನಿಯಾಗಿದ್ದ ಫ್ರೆಡ್‌ಹಾಯ್ಲ್ ರೇಡಿಯೋ ಭಾಷಣಗಳ ಮೂಲಕ ಮನೆ ಮಾತಾಗಿದ್ದರು. ಇದರಿಂದ ಪ್ರೇರಿತರಾದ ಹಾಕಿಂಗ್ ತಾನು ಈ ವಿಶ್ವದ ನಿಗೂಢ ಲೋಕಕ್ಕೆ ಲಗ್ಗೆ ಹಾಕಬೇಕೆಂಬ ಛಲತೊಟ್ಟರು. ಅದಕ್ಕಾಗಿ ಮುಂದಿನ ಪ್ರಯಾಣ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದತ್ತ ಎಂದು ನಿರ್ಧರಿಸಿದರು. ಅದರಂತೆ ಆಕ್ಸ್‌ಫರ್ಡ್‌ನಲ್ಲಿ ಪದವಿಯಲ್ಲಿ ಪ್ರಥಮ ಸ್ಥಾನ ಗಳಿಸಿ ಕೇಂಬ್ರಿಡ್ಜ್‌ಗೆ ಪ್ರವೇಶಾತಿ ಪಡೆದರು. ಆದರೆ ಹಾಯ್ಲ್‌ಗೆ ಅತಿ ಹೆಚ್ಚುಸಂಖ್ಯೆಯ ವಿದ್ಯಾರ್ಥಿಗಳಿದ್ದುದರಿಂದ ಅವರು ಸ್ಟೀಫನ್‌ಗೆ ಗುರುವಾಗಿ ಸಿಗಲಿಲ್ಲ; ಬದಲಾಗಿ ಪ್ರೊ. ಡೆನಿಸ್‌ಶಿಯಾಮ ಅವರು ದೊರಕಿದರು. ಅಲ್ಲಿ ವಿಶ್ವ ವಿಜ್ಞಾನದ ವಿದ್ಯಮಾನಗಳನ್ನು ಕೌತುಕದ ಕಣ್ಣುಗಳಿಂದ ನೋಡುತ್ತಿದ್ದ ಸ್ಟೀಫನ್ ಹಾಕಿಂಗ್‌ಗೆ ಖಭೌತ ವಿಜ್ಞಾನವನ್ನು ಅಧ್ಯಯನ ಮಾಡುವಂತೆ ಪ್ರೊ. ಶಿಯಾಮ ಸಲಹೆ ನೀಡಿದರು.

ಪ್ರತಿಭಾನ್ವಿತರಾಗಿದ್ದ ಸ್ಟೀಫನ್‌ರಿಗೆ ಬಾಲ್ಯದಲ್ಲೇ ಕಾಣಿಸಿಕೊಂಡಿದ್ದ ರೋಗ ಲಕ್ಷಣಗಳು ಈಗ ಉಲ್ಬಣಾವಸ್ಥೆಗೆ ತಲುಪತೊಡಗಿದ್ದುವು. ಚಿಕಿತ್ಸೆಗಾಗಿ ಸೇಂಟ್ ಬಾರ್ತೋಲೋಮಿಯಾಸ್ ಆಸ್ಪತ್ರೆಗೆ ದಾಖಲಿಸಿದಾಗ ಪರೀಕ್ಷಿಸಿದ ವೈದ್ಯರು ಮೋಟಾರ್ ನ್ಯೂರಾನ್ ಡಿಸೀಸ್ ಎಂಬ ಮಾರಣಾಂತಿಕ ಕಾಯಿಲೆ ತಗುಲಿದ್ದು, ಇನ್ನು ಅವರು ಎರಡು ವರ್ಷಗಳ ಕಾಲವಷ್ಟೆ ಬದುಕಬಲ್ಲರು ಎಂಬ ಆಘಾತಕಾರಿ ಮಾಹಿತಿಯನ್ನು ನೀಡಿದರು. ಆದರೆ ಹಾಕಿಂಗ್ ಸಾವನ್ನು ಗೆಲ್ಲಬೇಕೆಂಬ ಗುರಿಯಿಂದ ಆತ್ಮಸ್ಥೈರ್ಯ ಬಿಡದೆ ಸಂಗೀತ ಆಲಿಸುವಿಕೆ, ವೈಜ್ಞಾನಿಕ ಕತೆಗಳ ಓದಿನ ಕಡೆಗೆ

[redacted]



NT-269-8-KANNADA-10-BT

ಇನ್ನೊಬ್ಬರ ಸಹಾಯ ಬೇಕು ಎನ್ನುವ ಸ್ಥಿತಿ ಬಂತು. ಆಗ ಅವರ ಸಂಶೋಧನ ವಿದ್ಯಾರ್ಥಿಗಳ ದಂಡೇ ಅದಕ್ಕೆ ಸಿದ್ಧವಾಗಿತ್ತು. ಈ ಮಧ್ಯೆ ಅವರಿಗೆ ನ್ಯುಮೋನಿಯಾ ಬಾಧಿಸಿತು. ಪರಿಣಾಮವಾಗಿ ಅವರು ತಮ್ಮ ಧ್ವನಿಯನ್ನು ಕಳೆದು ಕೊಂಡರು. ಈ ಸಂದರ್ಭದಲ್ಲಿ ಹಾಕಿಂಗ್‌ರ ವಿದ್ಯಾರ್ಥಿಯೊಬ್ಬನು ವಿಶೇಷ ಕಂಪ್ಯೂಟರ್ ಸಿದ್ಧಪಡಿಸಿದನು. ಅದರಲ್ಲಿರುವ ಮೌಸ್ ಮೂಲಕ ಪದಗುಚ್ಛಗಳನ್ನು ಕ್ಲಿಕ್ ಮಾಡಿದರೆ ಆ ಕಂಪ್ಯೂಟರೇ ಮಾತನಾಡುತ್ತದೆ. ಇದರ ನೆರವಿನಿಂದ ಹಾಕಿಂಗ್ ಸಭಿಕರು ಕೇಳಿದ ಪ್ರಶ್ನೆಗಳಿಗೆ ಚುಟುಕಾಗಿ ಉತ್ತರ ಕೊಡತೊಡಗಿದರು.

ಮಾರಕ ರೋಗಕ್ಕೆ ತುತ್ತಾಗಿದ್ದರೂ ಆತ್ಮಸ್ಥೈರ್ಯದಿಂದಲೇ ಸಾವನ್ನು ಗೆದ್ದ ಹಾಕಿಂಗ್ ದೈಹಿಕ ವಿಕಲತೆಯನ್ನು ಲೆಕ್ಕಿಸದೆ ವೈಜ್ಞಾನಿಕ ಕ್ಷೇತ್ರಕ್ಕೆ ಅಗಾಧ ಕೊಡುಗೆಯನ್ನಿತ್ತರು. ಯಾಂತ್ರೀಕೃತ ಕುರ್ಚಿಯಲ್ಲೇ ತಲೆ ಆನಿಸಿ ಕುಳಿತುಕೊಂಡ ಈ ಅಪಾರ ಪ್ರತಿಭೆಯ ವಿಜ್ಞಾನಿಯ ಮನಸ್ಸು ಬುವಿಯಲ್ಲಿರಲಿಲ್ಲ. ಅದನ್ನು ದಾಟಿ ಅಂತರಿಕ್ಷಕ್ಕೆ ಜಿಗಿದು ಇನ್ನೊಂದು ನಕ್ಷತ್ರವ್ಯೂಹವನ್ನು ಮೀಟಿ ಇನ್ನೆಲ್ಲೋ ಇರುವ ಮನುಷ್ಯರಂತಹ ಜೀವಿಗಳ ಹುಡುಕಾಟದಲ್ಲಿ ತೊಡಗಿತ್ತು. ಅಷ್ಟು ಹೊತ್ತಿಗೆ ಸಾವು ಅವರನ್ನರಸಿ ಬಂದಿತ್ತು. 2018 ಮಾರ್ಚ್ 14 ರಂದು ವಿಜ್ಞಾನ ಸಂಶೋಧನ ರಂಗಕ್ಕೆ ವಿಷಾದನೀಯ ದಿನ. ಸ್ಟೀಫನ್ ಹಾಕಿಂಗ್ ತನ್ನ ಇಹಲೋಕಯಾತ್ರೆ ಮುಗಿಸಿದರು ಅವರ ಜೀವ ಮರೆಯಾದರೂ ಸಾಧನೆ ಮೆರೆಯುತ್ತಲೇ ಇದೆ.

– ಸಾಧಾರ



## ಉತ್ತರ ಬರೆಯಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

- ಸಭಿಕರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಸ್ಟೀಫನ್ ಹಾಕಿಂಗ್ ಕಂಪ್ಯೂಟರ್ ಹೇಗೆ ಕಾರ್ಯಾಚರಿಸುತ್ತಿತ್ತು?
- ಅನ್ಯಗ್ರಹ ಜೀವಿಗಳ ಬಗ್ಗೆ ಹಾಕಿಂಗ್‌ರ ಅಭಿಪ್ರಾಯವೇನು ?
- ಬಾಲ್ಯದಲ್ಲೇ ಹಾಕಿಂಗ್‌ರಲ್ಲಿ ಕಾಣಿಸಿಕೊಂಡ ರೋಗ ಲಕ್ಷಣಗಳೇನು?
- ಕೃಷ್ಣರಂಧ್ರವೆಂದರೇನು?
- ಸ್ಟೀಫನ್ ಹಾಕಿಂಗ್‌ರಿಗೆ ಒಲಿದು ಬಂದ ಪುರಸ್ಕಾರಗಳಾವುವು?



## ರೂಪಾಂತರಿಸಿ ಬರೆಯಿರಿ

ಖ್ಯಾತ ವಿಜ್ಞಾನಿ ಆಲ್‌ಫ್ರೆಡ್ ನೊಬೆಲ್ ಅವರ ಜೀವನ ಚರಿತ್ರೆಯ ಭಾಗವನ್ನು ಕೆಳಗೆ ಕೊಡಲಾಗಿದೆ. ಅದನ್ನು ಆತ್ಮಕಥೆಯಾಗಿ ರೂಪಾಂತರಿಸಿ ಬರೆಯಿರಿ.

ಆಲ್ಫ್ರೆಡ್ ಬೆನಾರ್ಡ್ ನೊಬೆಲ್ ೧೮೩೩ ಅಕ್ಟೋಬರ್ ೨೧ರಂದು ಸ್ವೀಡನ್‌ನ ಸ್ಟಾಕ್‌ಹೋಂನಲ್ಲಿ ಇಮಾನ್ಯುವೆಲ್ ನೊಬೆಲ್‌ಗೆ ಮಗನಾಗಿ ಜನಿಸಿದನು. ಅವನಿಗೆ ಮನೆಯೇ ಪಾಠಶಾಲೆ. ತಂದೆಯೇ ಗುರು. ತನ್ನ ತಂದೆಯ ಪ್ರಯೋಗಶಾಲೆಯಲ್ಲಿಯೇ ನೊಬೆಲ್ ಕೆಲಸ ಮಾಡಿದನು. ಹದಿನಾರನೇ ವಯಸ್ಸಿಗೆ ಅವನು ಇಂಗ್ಲಿಷ್, ಫ್ರೆಂಚ್, ಜರ್ಮನ್, ರಷ್ಯನ್ ಮತ್ತು ಸ್ವೀಡಿಶ್ ಭಾಷೆಗಳನ್ನು ಕಲಿತು ವಿದ್ವಾಂಸನೆನಿಸಿದನು. ೧೮೫೦ರಲ್ಲಿ ಅವನು ರಸಾಯನಶಾಸ್ತ್ರದ ಅಧ್ಯಯನಕ್ಕಾಗಿ ಪ್ಯಾರಿಸಿಗೆ ಹೋದನು. ಬಳಿಕ ಪೀಟರ್ಸ್‌ಬರ್ಗ್‌ಗೆ ಹಿಂತಿರುಗಿ ತಂದೆಯ ಕಾರ್ಯಾಗಾರದಲ್ಲಿ ಸಂಶೋಧನೆಗೆ ತೊಡಗಿದನು. ಅಪಾಯಕಾರಿಯಾದ ನೈಟ್ರೋಗ್ಲಿಸರೀನನ್ನು ಘನರೂಪಾಂತರಮಾಡಿ ಇದಕ್ಕೆ ಡೈನಾಮೈಟ್ ಎಂದು ಹೆಸರಿಟ್ಟನು. ಇದು ಆತನ ಮೊದಲ ಸಂಶೋಧನೆ. ಅಲ್ಲಿಂದ ಮುಂದೆ ನೊಬೆಲ್‌ನ ಕಾರ್ಖಾನೆಗಳು ಅಭಿವೃದ್ಧಿಗೊಂಡವು. ಡೈನಾಮೈಟ್ ಮಾರಿ ಅಪಾರ ಹಣಗಳಿಸಿದನು. ಆ ಹಣದ ಮೇಲೆ ಬರುವ ಬಡ್ಡಿಯಿಂದ ನೊಬೆಲ್ ತನ್ನ ಹೆಸರಿನಲ್ಲಿ ಬಹುಮಾನ ನೀಡಬೇಕೆಂದು ಘೋಷಿಸಿ ಮರಣಪತ್ರ ಬರೆದಿಟ್ಟನು. ಕಂಡುಹಿಡಿದದ್ದು ಸಿಡಿಮದ್ದಾದರೂ ನೊಬೆಲ್ ಬಯಸಿದ್ದು ಶಾಂತಿಯನ್ನು.



## ವ್ಯಕ್ತಿಪರಿಚಯ ಬರೆಯಿರಿ

ಕೆಳಗೆ ಕೊಟ್ಟಿರುವ ಮಾಹಿತಿಗಳ ಆಧಾರದಲ್ಲಿ ಭಾರತೀಯ ವಿಜ್ಞಾನಿ ಭಾರತರತ್ನ ಡಾ|ಸಿ.ಎನ್.ಆರ್.ರಾವ್ ಇವರ ವ್ಯಕ್ತಿಪರಿಚಯವನ್ನು ಬರೆಯಿರಿ.

| | | |
|---|---|---|
| ಪೂರ್ಣ ಹೆಸರು | : | ಚಿಂತಾಮಣಿ ನಾಗೇಶ ರಾಮಚಂದ್ರ ರಾವ್ |
| ಜನನ | : | ಜೂನ್ ೩೦, ೧೯೩೪ ಮೈಸೂರು ಸಂಸ್ಥಾನ. |
| ತಂದೆ/ತಾಯಿ | : | ಹನುಮಂತ ನಾಗೇಶರಾವ್, ನಾಗಮ್ಮ |
| ಮಡದಿ | : | ಇಂದುಮತಿ ರಾವ್ |
| ಉನ್ನತ ವಿದ್ಯಾಭ್ಯಾಸ | : | ಬನಾರಸ್ ಹಿಂದೂ ವಿಶ್ವವಿದ್ಯಾಲಯ |
| ಕಾರ್ಯಕ್ಷೇತ್ರ | : | ರಸಾಯನಶಾಸ್ತ್ರ |
| ಪ್ರಾಧ್ಯಾಪಕರಾಗಿ ದುಡಿದ ಸಂಸ್ಥೆಗಳು | : | ಭಾರತೀಯ ಬಾಹ್ಯಾಕಾಶ ಸಂಶೋಧನ ಕೇಂದ್ರ<br>ಭಾರತೀಯ ವಿಜ್ಞಾನ ಸಂಸ್ಥೆ<br>ಕೇಂಬ್ರಿಡ್ಜ್, ಆಕ್ಸ್‌ಫರ್ಡ್, ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯಗಳು<br>ಜವಹರಲಾಲ್ ಉನ್ನತ ಅಧ್ಯಯನ ಕೇಂದ್ರ. |

ಸಂಶೋಧನೆಗಳು : ಅತಿವಾಹಕತೆ (ಸೂಪರ್‌ಕಂಡಕ್ಟಿವಿಟಿ)

ನ್ಯಾನೋ ವಿಜ್ಞಾನ ಕ್ಷೇತ್ರ, ಅನೇಕ ಸಂಶೋಧನ ಲೇಖನಗಳು (೧೫೦೦ಕ್ಕೂ ಅಧಿಕ)

ಪ್ರಶಸ್ತಿಗಳು : ೧೯೭೪ ಪದ್ಮಶ್ರೀ, ೧೯೮೫ ಪದ್ಮವಿಭೂಷಣ, ೨೦೧೩ ಭಾರತರತ್ನ, ೪೨ಕ್ಕೂ ಅಧಿಕ ವೈಯಕ್ತಿಕ ಪ್ರಶಸ್ತಿಗಳು, ದೇಶವಿದೇಶಗಳ ಅನೇಕ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್.

ಗೌರವ : ಭಾರತದ ಪ್ರಧಾನಮಂತ್ರಿಗಳ ವೈಜ್ಞಾನಿಕ ಸಲಹಾ ಸಮಿತಿಯ ಅಧ್ಯಕ್ಷತೆ.



## ಸಮರ್ಥಿಸಿ ಬರೆಯಿರಿ

- 'ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆನ್ನುವ ಛಲವಿದ್ದರೆ ಯಾವುದೇ ಶಾರೀರಿಕ ಅಂಗವೈಕಲ್ಯಗಳು ಅಡ್ಡಿಯಾಗಲಾರವು' ಎಂಬ ಮಾತನ್ನು 'ಮೊಳಕೆಯ ಸಿರಿ' ಪಾಠದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.



## ಗಾದೆ ಬರೆಯಿರಿ

ಕೆಳಗೆ ಕೊಡಲಾದ ಗದ್ಯಭಾಗವನ್ನು ಓದಿ ಪ್ರತಿಯೊಂದಕ್ಕೂ ಹೊಂದುವ ಗಾದೆಮಾತನ್ನು ಬರೆಯಿರಿ.

1. ಜೀವನದಲ್ಲಿ ಯಶಸ್ಸನ್ನು ಸಂಪಾದಿಸಬೇಕಾದರೆ ಮನುಷ್ಯನು ಸಹನೆ, ತಾಳ್ಮೆ, ಸದಾಚಾರ ಮುಂತಾದ ಒಳ್ಳೆಯಗುಣಗಳನ್ನು ಹೊಂದಿರಬೇಕು. ಸಹನೆಯೊಂದಿದ್ದರೆ ಬದುಕಿನಲ್ಲಿ ಬರುವ ಎಷ್ಟೋ ಸಂಕಷ್ಟಗಳನ್ನು ದೂರೀಕರಿಸಲು ಸಾಧ್ಯವಾಗುತ್ತದೆ. ಸಹನೆ ಇದ್ದವನು ಕಷ್ಟಗಳಿಗೆ ಹೆದರದೆ ಮುಂದುವರಿಯುತ್ತಾನೆ. ಯಶಸ್ಸನ್ನು ಪಡೆಯುತ್ತಾನೆ. ನಿಶ್ಚಿಂತೆಯಿಂದ ಬದುಕನ್ನು ಸಾಗಿಸುತ್ತಾನೆ. ಆದುದರಿಂದ ಸಹನೆ ಎಂಬ ಗುಣ ಸುಂದರ ಬದುಕಿಗೆ ಮೂಲಾಧಾರ ಎಂದು ತಿಳಿಯಬಹುದು.

2. ಸಮಾಜದಲ್ಲಿ ವಿವಿಧ ರೀತಿಯ ಜನರಿರುತ್ತಾರೆ. ನಮಗೆ ಎಲ್ಲರೊಡನೆ ವ್ಯವಹಾರ ಮಾಡಬೇಕಾಗುತ್ತದೆ. ಪರಸ್ಪರ ಕೊಡುಕೊಳ್ಳುವಿಕೆಯ ಹೊರತು ಜೀವನ ಸಾಗಲಾರದು. ಅಂತಹ ಪರಿಸ್ಥಿತಿಯನ್ನು ನಿತ್ಯ ಹಾದುಹೋಗಬೇಕಾಗಿ ಬರುವಾಗ ನಾವು ಸೋತುಹೋಗಬಾರದು. ಸೂಕ್ಷ್ಮದೃಷ್ಟಿಯಿಂದ ಅವಲೋಕನ ಮಾಡಿ ಪ್ರತಿಯೊಂದು ಹೆಜ್ಜೆಯನ್ನೂ ಇರಿಸಬೇಕು. ಒಳ್ಳೆಯವರನ್ನು ಗುರುತಿಸುವ ಕೆಲಸ ಬಹಳ ಕಷ್ಟ. ಸುಂದರವಾದ ಮುಖ, ನಗುವಿನೊಂದಿಗಿನ ಮಾತು ಇರುವವರು ಒಳ್ಳೆಯವರಾಗಿರಬೇಕಾಗಿಲ್ಲ. ಇಲ್ಲಿ ಹೆಚ್ಚಾಗಿ ಮೋಸಹೋಗುವ ಸಂದರ್ಭ ಬರುವುದು ಮೊದಲನೆಯ ವಿಭಾಗದವರಿಂದ. ಅವರನ್ನು ಅವಲೋಕಿಸಿ ತಿಳಿದುಕೊಳ್ಳುವುದು ಅತ್ಯಗತ್ಯ.

# ಸಂದರ್ಶನ ಕೌಶಲ

ಸಂವಹನವು ಮಾಧ್ಯಮದ ಅಡಿಪಾಯ. ಅದಿಲ್ಲದಿದ್ದರೆ ಜನರಿಗೆ ಮಾಹಿತಿ ನೀಡುವುದು ಅಸಾಧ್ಯ, ಜನರ ಜತೆ ನಿರಂತರ ಸಂಪರ್ಕ ಹಾಗೂ ಅವರ ಜತೆ ಮಾತುಕತೆಗಳ ಮೂಲಕ ಮಾಹಿತಿ ಪಡೆಯುವುದು ಮಾಧ್ಯಮಗಳಿಗೆ ಅನಿವಾರ್ಯ. ದಿನನಿತ್ಯ ನಮ್ಮ ಕೈ ಸೇರುವ ಪತ್ರಿಕೆಯನ್ನಾಗಲೀ, ರೇಡಿಯೋ ಟಿ.ವಿ.ಗಳ ಮೂಲಕ ಬಿತ್ತರವಾಗುವ ಸುದ್ದಿಗಳನ್ನಾಗಲೀ, ಸೂಕ್ಷ್ಮವಾಗಿ ಗಮನಿಸಿದರೆ ಅವುಗಳ ಪೈಕಿ ಬಹುತೇಕ ವರದಿಗಳು ಆ ಸುದ್ದಿಗಳಿಗೆ ಸಂಬಂಧಪಟ್ಟ ವ್ಯಕ್ತಿಗಳ ಸಂದರ್ಶನಗಳನ್ನೇ ಆಧರಿಸಿರುತ್ತವೆ.

ಯಾವುದಾದರೂ ಘಟನೆ ಸಂಭವಿಸಿದ ಮಾಹಿತಿ ತಲುಪಿದ ತಕ್ಷಣ ಘಟನೆಗೆ ಸಂಬಂಧಿಸಿ ವ್ಯಕ್ತಿಗಳನ್ನು ಅಧಿಕಾರಿಗಳನ್ನು ಅಥವಾ ಇನ್ನಿತರರನ್ನು ದೂರವಾಣಿ ಮೂಲಕ ಇಲ್ಲವೇ ಸ್ವತಃ ಭೇಟಿಯಾಗಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸುವುದು ಅತ್ಯಗತ್ಯ. ಆದ್ದರಿಂದ ಎಲ್ಲ ವಾರ್ತೆಗಳ ಸಂಗ್ರಹಕ್ಕೆ ಸಂದರ್ಶನವೇ ಸಂಪನ್ಮೂಲ ಎನ್ನುವುದು ನಿರ್ವಿವಾದ.

ಸಂದರ್ಶನಕ್ಕೆ ಇಂಗ್ಲೀಷಿನಲ್ಲಿ 'ಇಂಟರ್‌ವ್ಯೂ' ಎಂದು ಕರೆಯಲಾಗುತ್ತದೆ. ಅಂದರೆ 'ಒಳದೃಷ್ಟಿ' ಅಥವಾ 'ಒಳನೋಟ' ಎಂದು ಅರ್ಥೈಸಬಹುದು. ಒಂದು ವಿಷಯದ ಕುರಿತು ವ್ಯಕ್ತಿಗಳ ವೈಚಾರಿಕ ಆಳಕ್ಕೆ ಇಳಿದು ಅವರ ಆಂತರ್ಯವನ್ನು ಕೆದಕಿ ಹೊಸತನ್ನು ಬೆಳಕಿಗೆ ತರುವುದೇ ಸಂದರ್ಶನದ ಉದ್ದೇಶ. ಆದ್ದರಿಂದ ಸಂದರ್ಶನವು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ನಡುವೆ ನಡೆಯುವ ಚರ್ಚೆ ಅಥವಾ ಸಂದರ್ಶಕನು ಸಂದರ್ಶಿತ ವ್ಯಕ್ತಿಗಳಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿಗಳನ್ನು ಪಡೆಯುವ ಪ್ರಕ್ರಿಯೆಯಾಗಿದೆ. ಇಂತಹ ಸಂದರ್ಶನಗಳು ಅನೇಕ ಕಡೆ ನಡೆಯುತ್ತಲೇ ಇರುತ್ತವೆ. ಉದ್ಯೋಗ ನೇಮಕಾತಿಗೆ, ಶೈಕ್ಷಣಿಕ ಸಂಸ್ಥೆಗಳ ಪ್ರವೇಶಕ್ಕೆ, ಸಂಶೋಧನೆಗಳಿಗೆ ಸಂದರ್ಶನಗಳು ಅನಿವಾರ್ಯ.

ಸಂದರ್ಶನಕ್ಕೆ ಜಾಣ್ಮೆ ಮುಖ್ಯ. ಅದಕ್ಕೆ ಹೋಗುವಾತನು ಮಾತನಾಡುವ ಕಲೆಯನ್ನು ರೂಢಿಸಿಕೊಳ್ಳಬೇಕು. ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರ ಪಡೆಯಲು ಅಧ್ಯಯನವೂ ಸಾಕಷ್ಟಿರಬೇಕು. ಹಾಗೆ ಸಂಗ್ರಹಿಸಿದ ಮಾಹಿತಿಗಳನ್ನು ನಿರೂಪಿಸುವ ಕಲೆಯೂ ಅಷ್ಟೇ ಪ್ರಧಾನ. ಸಂದರ್ಶಕನಿಗೆ ಅನುಭವ ಹಾಗೂ ವಿಷಯ ಜ್ಞಾನವೂ ಅತ್ಯಗತ್ಯ. ಸಂದರ್ಶನಕಾರ ಸರಳವಾಗಿ ಮಾತನಾಡಿ ಸಂಬಂಧಪಟ್ಟವರು ಸರಿಯಾದ ಮಾಹಿತಿ ನೀಡುವಂತೆ ಅವರ ಮನವೊಲಿಸುವುದು ಸಂದರ್ಶನದ ಜಾಣ್ಮೆಗಳಲ್ಲಿ ಒಂದು. ಈ ಎಲ್ಲ ಕಾರಣಗಳಿಂದ ಸಂದರ್ಶನವನ್ನು ಕಲೆ ಮತ್ತು ಕೌಶಲವೆಂದು ಪರಿಗಣಿಸಲಾಗುತ್ತದೆ.

ಪತ್ರಿಕೋದ್ಯಮ ಹಾಗೂ ಸಮೂಹ ಮಾಧ್ಯಮ ಕ್ಷೇತ್ರಗಳಲ್ಲಿ ಸಂದರ್ಶನ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತದೆ. ಇಲ್ಲಿ ವರದಿಗಾರ ತನ್ನ ಪತ್ರಿಕೆಗೆ ಅಥವಾ ತಾನು ಕೆಲಸ ಮಾಡುವ ದೂರದರ್ಶನದ ವಾಹಿನಿಗೆ, ಛಾನೆಲ್‌ಗಳಿಗೆ ಇಲ್ಲವೇ ರೇಡಿಯೋಕ್ಕಾಗಿ ಸಂದರ್ಶನ ನಡೆಸುತ್ತಾನೆ. ಒಂದು ವಿಷಯದ ಆಳ ಕಂಡುಹಿಡಿಯಲು ಸಂದರ್ಶಕನು ಸಂಬಂಧಿತ ವ್ಯಕ್ತಿಗಳನ್ನು ಸಂಪರ್ಕಿಸಿ ಅವರಿಂದ ಪಡೆದ ಮಾಹಿತಿಗಳನ್ನು ಜನರಿಗೆ ನಿರಂತರವಾಗಿ ತಿಳಿಸುತ್ತಲೇ ಇರುತ್ತಾನೆ. ಇದು ಎಂದಿಗೂ ಅನುದ್ದೇಶಿತವಲ್ಲ. ನಿರುಪಯುಕ್ತ ಹರಟೆಯೂ ಅಲ್ಲ. ಪ್ರತಿ ಪ್ರಶ್ನೆಗಳ ಮೂಲಕವೂ ಉಪಯುಕ್ತ ಮಾಹಿತಿಗಳನ್ನು ಪಡೆಯುವ ಗುರಿಯನ್ನು ಸಂದರ್ಶಕ ತನ್ನ ಓದುಗರು ಅಥವಾ ಶ್ರೋತೃಗಳಿಗೆ ತಲುಪಿಸುತ್ತಾನೆ.

ಸಂದರ್ಶನವನ್ನು ನಡೆಸುವಾಗ ಸಂದರ್ಶಕ ಅತಿ ಹೆಚ್ಚು ಕಾಳಜಿ ವಹಿಸಬೇಕಾದುದು ಅತ್ಯಗತ್ಯ. ಸಂದರ್ಶಕನ ವ್ಯಕ್ತಿತ್ವ, ಧ್ವನಿ, ಧರಿಸಿರುವ ವಸ್ತ್ರವಿನ್ಯಾಸ, ಸ್ಟುಡಿಯೋದಲ್ಲಿರುವ ಸುಸಜ್ಜಿತ ವ್ಯವಸ್ಥೆ ಮಾತನಾಡುವ ಶೈಲಿ, ಕಣ್ಣಿನ ನೋಟ, ಅಂಗಭಾಷೆ ಮೊದಲಾದವು ಹೆಚ್ಚಿನ ಗಮನ ಸೆಳೆಯುತ್ತವೆ. ವಸ್ತ್ರ ವಿನ್ಯಾಸಕ್ಕೆ ಟೆಲಿವಿಷನ್ ಸಂದರ್ಶನದಲ್ಲಿ ಹೆಚ್ಚಿನ ಆದ್ಯತೆ ಇದೆ. ವಸ್ತ್ರದ ಬಣ್ಣ, ವಿನ್ಯಾಸ, ನೆಕ್‌ಲೈನ್ ಮತ್ತು ಇತರ ಅಗತ್ಯದ ಅಲಂಕಾರಗಳು ದೃಶ್ಯಗಳ ಗುಣಮಟ್ಟ ಹೆಚ್ಚಿಸಲು ಅನುಕೂಲ ಒದಗಿಸುತ್ತವೆ. ಕುತ್ತಿಗೆಯನ್ನು ತೆರೆದು ತೋರಿಸದಂತಿರಲು ಪುರುಷರು ಟೈ ಕಟ್ಟಿಕೊಳ್ಳುವ ಮತ್ತು ಮಹಿಳೆಯರು ನೆಕ್‌ಲೈನ್ ಅಥವಾ ಕುತ್ತಿಗೆ ಮುಚ್ಚುವ ಆಭರಣಗಳನ್ನು ಧರಿಸುವುದರ ಮೂಲಕ ದೃಶ್ಯಗಳ ಗುಣಗಳನ್ನು ಹೆಚ್ಚಿಸಬಹುದು. ಗಾಜು ಹಾಗೂ ಬಣ್ಣಗಳನ್ನು ಹೊಂದಿರುವ ಆಭರಣಗಳನ್ನು ಬಳಸುವುದರಿಂದ ಅವುಗಳ ಮೂಲಕ ಬೆಳಕು ಪ್ರತಿಫಲಿಸಿ ದೃಶ್ಯಗಳು ತೆರೆಯ ಮೇಲೆ ಸ್ಪಷ್ಟವಾಗಿ ಕಾಣಲಾರವು. ಆದುದರಿಂದ ಹೊಳಪಿನ ಆಭರಣಗಳು ನಿಷಿದ್ಧವಾಗಿಸಿವೆ.

ಟೆಲಿವಿಷನ್ ಸಂದರ್ಶನದಲ್ಲಿ ದೇಹ ಭಾಷೆಗೆ ಹೆಚ್ಚಿನ ಮಹತ್ವವಿದೆ. ದೇಹಭಾಷೆ ಸರಳವೂ ನಿಯಂತ್ರಿತವೂ ಆಗಿರಬೇಕು. ಸಂದೇಶಗಳು ದೇಹಭಾಷೆಯೊಂದಿಗೆ ಹೊಂದಾಣಿಕೆಯಾಗದಿದ್ದರೆ ಅರ್ಥ ಪೂರ್ಣವಾಗಲಾರದು. ವೀಕ್ಷಕರ ಮನದಲ್ಲಿ ಮಧುರ

[redacted]

– ಸಾಧಾರ

### ಉತ್ತರ ಬರೆಯಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

1. ವಾರ್ತೆಗಳನ್ನು ಸಂಗ್ರಹ ಮಾಡುವುದು ಹೇಗೆ?
2. ಸಂದರ್ಶನವನ್ನು ಕಲೆ ಮತ್ತು ಕೌಶಲವೆಂದು ಹೇಳಲು ಕಾರಣವೇನು?
3. ಸಂದರ್ಶಕನು ಗಮನಿಸಬೇಕಾದ ಪ್ರಧಾನ ಅಂಶಗಳು ಯಾವುವು?

### ಪ್ರತಿಕ್ರಿಯೆ ಸಂದೇಶ ಬರೆಯಿರಿ

- ದೂರದರ್ಶನದಲ್ಲಿ ಯಾವುದಾದರೂ ಸಂದರ್ಶನ ಕಾರ್ಯಕ್ರಮವನ್ನು ವೀಕ್ಷಿಸಿ, ನಿಮಗೆ ಮೆಚ್ಚುಗೆಯಾದ ಅಂಶಗಳನ್ನು ತಿಳಿಸಿ ನಿಲಯ ನಿರ್ದೇಶಕರಿಗೆ ಮಿಂಚಂಚೆ (ಇ – ಮೈಲ್) ಮೂಲಕ ಕಳಹಿಸುವ ಸಲುವಾಗಿ ಸಂದೇಶವನ್ನು ಸಿದ್ಧಪಡಿಸಿರಿ.

### ಸಂದರ್ಶನಾ ಪ್ರಶ್ನಾವಳಿ ತಯಾರಿಸಿರಿ

- ಸಂದರ್ಶಕನು ಪ್ರತಿ ಪ್ರಶ್ನೆಗಳ ಮೂಲಕವು ಉಪಯುಕ್ತ ಮಾಹಿತಿಗಳನ್ನು ಪಡೆಯುವ ಗುರಿಯನ್ನು ತನ್ನ ಓದುಗರು ಅಥವಾ ಶ್ರೋತೃಗಳಿಗೆ ತಲುಪಿಸುತ್ತಾನೆ. 'ಸಂದರ್ಶನ ಕೌಶಲ'ದ ಈ ಮಾತಿನ ಆಧಾರದಲ್ಲಿ ನಿಮ್ಮ ಊರಿನ ಪ್ರಸಿದ್ಧ ವ್ಯಕ್ತಿಯೊಬ್ಬರ ಸಾಧನೆಗಳನ್ನು ಪ್ರಸ್ತುತ ಪಡಿಸುವುದಕ್ಕಾಗಿ ಸಂದರ್ಶನ ನಡೆಸಲು ಸಂದರ್ಶನಾ ಪ್ರಶ್ನಾವಳಿಯನ್ನು ತಯಾರಿಸಿರಿ.

### ಮನವಿಪತ್ರ ಬರೆಯಿರಿ

- ನಿಮ್ಮ ಊರಿನ ಪ್ರಸಿದ್ಧ ವ್ಯಕ್ತಿಯೊಬ್ಬರ ಸಾಧನೆಗಳನ್ನು ಪ್ರಸ್ತುತಪಡಿಸುವುದಕ್ಕಾಗಿ , ಸಂದರ್ಶನ ನಡೆಸಲು ವಿನಂತಿಸಿಕೊಂಡು, ನಿಲಯ ನಿರ್ದೇಶಕರಿಗೆ ಮನವಿಪತ್ರ ಬರೆಯಿರಿ.

### ಭಿತ್ತಿಪತ್ರ ತಯಾರಿಸಿರಿ

- ನಿಮ್ಮ ಶಾಲೆಯ ವಿಜ್ಞಾನ ಸಂಘದ ಆಶ್ರಯದಲ್ಲಿ ನಡೆಯುವ ವೈಜ್ಞಾನಿಕ ಉಪಕರಣಗಳ ಪ್ರದರ್ಶನ ಕಾರ್ಯಕ್ರಮವನ್ನು ಪ್ರಚಾರ ಪಡಿಸಲು ಭಿತ್ತಿ ಪತ್ರವನ್ನು ತಯಾರಿಸಿರಿ.



## ಮುಖ್ಯಾಂಶಗಳನ್ನು ಬರೆಯಿರಿ

ಕೆಳಗೆ ವಿವರವಾಗಿ ಕೊಡಲಾದ ವಾರ್ತೆಗಳ ಮುಖ್ಯಾಂಶಗಳನ್ನು ಗುರುತಿಸಿ ಬರೆಯಿರಿ.

ಗಣರಾಜ್ಯವಾಗಿರುವ ಭಾರತದ ಬಗ್ಗೆ ಪ್ರತಿಯೊಬ್ಬ ಪ್ರಜೆಯೂ ಅಭಿಮಾನಪಡಬೇಕು. ಜೊತೆಗೆ ಅದನ್ನು ಉಳಿಸಿಬೆಳೆಸುವ ಪ್ರತಿಜ್ಞೆಯನ್ನು ಕೈಗೊಳ್ಳಬೇಕು. ಆಂತರಿಕ ಮತ್ತು ಬಾಹ್ಯಶತ್ರುಗಳು ಇದ್ದೇ ಇರುತ್ತಾರೆ. ಅವರಿಂದ ದೇಶವನ್ನು ಪಾರುಮಾಡುವ ಕಾರ್ಯಕ್ಕೆ ಮುಂದಾಗುವುದು ನಮ್ಮೆಲ್ಲರ ಕರ್ತವ್ಯ ಎಂದು ರಾಷ್ಟ್ರಪತಿಗಳು ನುಡಿದರು. ಅವರು ನಮ್ಮ ದೇಶದ ಗಣರಾಜ್ಯೋತ್ಸವ ಸಂದೇಶ ನೀಡುತ್ತಾ ಮಾತನಾಡಿದರು. ಉತ್ತರ ಭಾರತದ ಹಿಮಾಲಯ ತಪ್ಪಲ ಪ್ರದೇಶಗಳಲ್ಲಿ ವಾತಾವರಣದ ಉಷ್ಣತೆ ಬಹಳಷ್ಟು ಕಡಿಮೆಯಾಗಿದೆ. ಹಿಮಾವೃತವಾಗಿರುವ ಇಲ್ಲಿಯ ಜನರ ಜೀವನ ಬಹಳಷ್ಟು ದುಸ್ತರವಾಗಿದೆ. ಮುಂಬಯಿಂದ ಕನ್ಯಾಕುಮಾರಿಯ ವರೆಗಿನ ಚತುಷ್ಪಥ ವ್ಯವಸ್ಥೆಯನ್ನು ಶೀಘ್ರದಲ್ಲೇ ಮಾಡುವುದಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನಿರ್ದೇಶಕರು ತಿಳಿಸಿದ್ದಾರೆ. ರಾಜ್ಯಮಟ್ಟದ ಶಾಲಾಕಲೋತ್ಸವ ಕಾಸರಗೋಡಿನಲ್ಲಿ ಆರಂಭಗೊಂಡಿತು. ಮುನ್ನೂರಕ್ಕೂ ಹೆಚ್ಚು ಸ್ಪರ್ಧೆಗಳಲ್ಲಿ ಎರಡು ಸಾವಿರದೈನ್ನೂರರಷ್ಟು ಕಲಾಪ್ರತಿಭೆಗಳು ಪ್ರದರ್ಶನ ನೀಡಲಿದ್ದಾರೆ. ಅದಕ್ಕಾಗಿ ಹದಿನಾಲ್ಕು ವೇದಿಕೆಗಳಲ್ಲಿ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿದೆಯೆಂದು ಜಿಲ್ಲಾ ಶಿಕ್ಷಣ ಉಪನಿರ್ದೇಶಕರು ತಿಳಿಸಿದ್ದಾರೆ. ರಾಷ್ಟ್ರೀಯ ಮಟ್ಟದ ಕ್ರೀಡಾಕೂಟ ಗುಜರಾತಿನ ಅಹಮ್ಮದಾಬಾದಿನಲ್ಲಿ ನಡೆಯುತ್ತಿದ್ದು ಕೇರಳದ ಕ್ರೀಡಾಪಟುಗಳು ಅತ್ಯುತ್ತಮ ಸಾಧನೆ ಮಾಡುತ್ತಿದ್ದಾರೆ. ಈಗಾಗಲೇ ಪದಕಪಟ್ಟಿಯಲ್ಲಿ ಕೇರಳ ಬಹಳಷ್ಟು ಅಂತರದಿಂದ ಪ್ರಥಮಸ್ಥಾನವನ್ನು ಪಡೆದುಕೊಂಡಿದೆ.



## ಸಂದರ್ಶನ ನಡೆಸಿರಿ

- ಯಾರಾದರೊಬ್ಬ ಪ್ರಸಿದ್ಧ ವ್ಯಕ್ತಿಯನ್ನು ತರಗತಿಗೆ ಆಹ್ವಾನಿಸಿ, ನೀವೊಬ್ಬ ಸಂದರ್ಶನಕಾರರಾಗಿ ಮಾಹಿತಿ ಸಂಗ್ರಹಿಸಿರಿ.

NT-269-9-KANNADA-10-BT



# ಬದುಕು ಬದಲಿಸಿದ ಜಂಗಮ ಗಂಟೆ!

– ಡಾ. ನಿರಂಜನ ವಾನಳ್ಳಿ

ಅಭಿವೃದ್ಧಿ ಪಥದ ಮೇಲೆ ಮನುಷ್ಯನ ನಡಿಗೆಯಲ್ಲಿ ಬರವಣಿಗೆಯೊಂದು ದಾಪುಗಾಲು. ಹಲವು ಶತಮಾನಗಳ ಕನಸನ್ನು ಸಾಕಾರಗೊಳಿಸಿದ ಹೆಜ್ಜೆ. ಬರವಣಿಗೆ ರೂಢಿಯಾದ ಮೇಲೆ ಮುದ್ರಣವು ಇನ್ನೊಂದು ಮಹತ್ತರ ತಿರುವು. ಹಾಗೆಯೇ ನಮ್ಮ ಅಭಿವೃದ್ಧಿಯ ದಾರಿಯಲ್ಲಿ ಮನುಷ್ಯನ ಧ್ವನಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವಿಸ್ತರಿಸುವುದು ದೊಡ್ಡ ಸವಾಲಾಗಿತ್ತು. ಒಬ್ಬನ ಧ್ವನಿ ಎಷ್ಟು ದೂರ ಕೇಳಬಹುದು? ನಾವು ಆಧುನಿಕರು ದೊಡ್ಡದಾಗಿ ಮಾತನಾಡುವುದನ್ನು ಅನಾಗರಿಕತೆ ಎಂದು ಯೋಚಿಸುವವರು ದೊಡ್ಡದಾಗಿ ದೂರಕ್ಕೆ ಕೇಳುವಂತೆ ಕೂಗಲಾರೆವು. ಅದೇ ಹಳ್ಳಿಹೈದರು ಕಿಲೋಮೀಟರ್‌ಗಟ್ಟಲೆ ದೂರ ಕೇಳುವಂತೆ ಕೂ ಹಾಕಬಹುದು. ಕೂಗಳತೆಯ ದೂರ ಎಂಬುದು ನಮ್ಮಲ್ಲಿ ದೂರದ ಅಳತೆಗೋಲಾಗಿತ್ತು. ಹಿಂದೆಲ್ಲಾ ಕಾಡಿಗೆ ಹೋದವರು ದಾರಿತಪ್ಪಿದರೆ ಕುಹೂ ಎಂದು ಬಹಳ ದೂರಕೇಳುವಂತೆ ಕೂಗುವ ಮೂಲಕ ಸಂಪರ್ಕ ಸಾಧಿಸುತ್ತಿದ್ದರು. ಈಗ ಹಾಗೆ ಕೂಗುವುದೂ ಕೂಡ ಚರಿತ್ರೆಗೆ ಸೇರಿಬಿಟ್ಟಿದೆ.

ಅಲೆಮಾರಿಗಳಾಗಿದ್ದ ಮನುಷ್ಯ ಪಂಗಡಗಳಿಗೆ ಧ್ವನಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆ ವಿಸ್ತರಿಸುವುದು ಅನಿವಾರ್ಯವಾಗಿತ್ತು. ಗ್ರಹಾಂಬೆಲ್ ದೂರವಾಣಿಯ ಸಂಶೋಧನೆ ಮಾಡಿದ್ದು ಅಂಥ ಬಹುದಿನಗಳ ಬೇಡಿಕೆಯನ್ನು ಪೂರೈಸಿತು. ಆಗ ಇದ್ದುದು ವೈರುಗಳ ಮೂಲಕ ಸಂಪರ್ಕ ಸಾಧಿಸುವ ದೂರವಾಣಿ.

ಇಲ್ಲಿಂದ ಇಂಗ್ಲೆಂಡಿಗೆ ಫೋನು ಮಾಡುವುದಿದ್ದರೂ ನಿಮ್ಮ ಧ್ವನಿ ತಂತಿಯ ಮೂಲಕವೇ ಸಾಗಬೇಕಿತ್ತು. ಅದೇ ಒಂದು ಮಹತ್ತರ ಕ್ರಾಂತಿಯಾಗಿತ್ತು. ಮಹಾಸಾಗರಗಳ ಅಡಿಯಲ್ಲಿ ಕೇಬಲ್ಲುಗಳನ್ನು ಎಳೆದು ಖಂಡಾಂತರ ಸಂಪರ್ಕ ಸಾಧಿಸುವ ವ್ಯವಸ್ಥೆ ಜಾರಿಗೆ ಬಂದಿದ್ದು ಮನುಕುಲದ ದೊಡ್ಡ ಸಾಧನೆ. ಅಲ್ಲಿಯವರೆಗೂ ಖಂಡಾಂತರ ಸಂಪರ್ಕಕ್ಕೆ ಇದ್ದ ಏಕೈಕ ಸಾಧನ ಪತ್ರಗಳು. ಪತ್ರಬರೆದರೆ ಸಮುದ್ರ ಮೂಲಕ ಹೋಗಲು ತಿಂಗಳುಗಟ್ಟಲೆ ಬೇಕಾಗುತ್ತಿತ್ತು.

ಕೇಬಲ್ಲುಗಳನ್ನು ಎಳೆದಾಗ ಈ ಸಮಸ್ಯೆ ಬಗೆಹರಿಯಿತು. ಟೆಲಿಫೋನು ಬಹುದೊಡ್ಡ ಸಂಪರ್ಕ ಕ್ರಾಂತಿಯಾಗಿ ಕಾಣಿಸಿಕೊಂಡಿತು.

ಮಲೆನಾಡಿನ ಹಳ್ಳಿಗಳಲ್ಲಿ ಕಾಡುಮೇಡುಗಳನ್ನು ಭೇದಿಸಿಕೊಂಡು ಟೆಲಿಫೋನು ತಂತಿಗಳನ್ನು ಎಳೆದು ಮನೆಮನೆಗಳಲ್ಲಿ ಫೋನೆಂಬ ಪೆಟ್ಟಿಗೆ ಬಂದು ಕುಳಿತಾಗ ಜನಕ್ಕೆ ಆಗುತ್ತಿದ್ದ ರೋಮಾಂಚನವನ್ನು ನಾನು ಚಿಕ್ಕಂದಿನಲ್ಲಿ ವಾನಳ್ಳಿಗೆ ಫೋನು ಬಂದಾಗ ಕಂಡಿದ್ದೇನೆ. ಟೆಲಿಫೋನು ಗುಣಗುಣಿಸಿದರೆ ಮುದುಕರು ಹೆದರಿಬೀಳುತ್ತಿದ್ದರು. ಮಕ್ಕಳು ಕುಂಯ್‌ಗುಡುತ್ತಿದ್ದರು. ಆರಂಭದಲ್ಲಿ ಮಲೆನಾಡಿನ ಮನೆಗಳಲ್ಲಿ ಫೋನೆಂಬುದು ಅಲಂಕಾರದ ಪೆಟ್ಟಿಗೆಯಾಗುವುದೇ ಹೆಚ್ಚಿತ್ತು. ಒಂದಲ್ಲ ಒಂದು ಕಡೆ ಮರಬಿದ್ದು ತಂತಿಹರಿದು ಫೋನು ಸತ್ತಂತಾಗುತ್ತಿತ್ತು. ಮಳೆಗಾಲದಲ್ಲಂತೂ ನಾಲ್ಕು ತಿಂಗಳು ದೂರವಾಣಿಯನ್ನು ಮರೆತುಬಿಡಬೇಕಾಗುತ್ತಿತ್ತು.

ಇದೆಲ್ಲ ಯಾಕೆ ನೆನಪಿಗೆ ಬಂತೆಂದರೆ....ಮೊನ್ನೆ ಜುಲೈ ೩೦ರಂದು ಪತ್ರಿಕೆ ಓದುತ್ತಿದ್ದಾಗ ಮೊಬೈಲು ಭಾರತಕ್ಕೆ ಬಂದು ಹದಿನೈದು ವರ್ಷವಾಯಿತು ಎಂಬ ಸುದ್ದಿ ಓದಿದೆ. ಜುಲೈ ೩೦, ೧೯೯೫ರಂದು ಸಂಪರ್ಕ ಸಚಿವ ಸುಖರಾಮ್ ಆಗಿನ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಅವರಿಗೆ ಫೋನಾಯಿಸುವ ಮೂಲಕ ಭಾರತದಲ್ಲಿ ಮೊಬೈಲು ಕ್ರಾಂತಿಗೆ ನಾಂದಿ ಹಾಡಿದ್ದರಂತೆ. ಒಂದು ಬಿಲಿಯನ್ ಜನರ ದೇಶದಲ್ಲಿ ಹದಿನೈದು ವರ್ಷದಲ್ಲಿ ಮೊಬೈಲು ಈ ಪರಿ ಕ್ರಾಂತಿ ಮಾಡಬಹುದೆಂದು ಯಾರು ನಿರೀಕ್ಷಿಸಿದ್ದರು? ಈಗ ಭಾರತದ ಜನಸಂಖ್ಯೆಯ ಶೇಕಡಾ ೬೩.೫ ಜನ ಮೊಬೈಲು ಮಾಲಿಕರಾಗುತ್ತಿದ್ದಾರೆ ಎಂಬುದು ಈಚಿನ ವರದಿ. ಜಗತ್ತಿನ ಬಹುಪಾಲು ದೇಶಗಳ ಜನಸಂಖ್ಯೆಯೇ ಹತ್ತು ಮಿಲಿಯವಿಲ್ಲ ಎಂಬುದನ್ನು ನೆನೆದರೆ ಆಶ್ಚರ್ಯವಾಗುತ್ತದೆ!

ಈಗ ಮೊಬೈಲು ಎಂಬುದು 'ಎಲ್ಲಿಬೇಕಾದರೂ ಹಾಗೂ ಯಾವಾಗಬೇಕಾದರೂ' ಎನಿಸಿಕೊಳ್ಳುವ ಸಾಧನ. ಕನ್ನಡದಲ್ಲಿ ಇದನ್ನು ಬೇರೆ ಬೇರೆ ಹೆಸರಿಂದ ಕರೆಯುವ ಪ್ರಯತ್ನಗಳು ನಡೆದರೂ ಈಗ ಮೊಬೈಲು ಎಂಬುದು ಸರ್ವಮಾನ್ಯತೆ ಪಡೆದಂತಿದೆ. ಜಂಗಮಗಂಟೆ ಎಂದು ಯಾರು ಬಳಸಿದ್ದೋ ಗೊತ್ತಿಲ್ಲ. ಆದರೆ ಈ ಹೆಸರು ಮಾರ್ಮಿಕವಾಗಿದೆ. ಹಿಂದೆ ಮೊಬೈಲಿನ ಬೆಲೆ ಜನಸಾಮಾನ್ಯರ ಕೈಗೆ ಎಟುಕುವಂತಿರಲಿಲ್ಲ. ಗಾತ್ರ ಎಲ್ಲರ ಕೈಯಲ್ಲಿ ಹಿಡಿಯುವಂತಿರಲಿಲ್ಲ. ಜೇಬೊಳಗೆ ಇಳಿಬಿಟ್ಟರೆ ಜೇಬು ಹರಿಯುವಷ್ಟು ಭಾರವಿರುತ್ತಿತ್ತು. ಕಿವಿಗೆ ಮೊಬೈಲು ಹಚ್ಚಿಕೊಂಡು ಕತ್ತುವಾರೆ ಮಾಡಿಕೊಂಡು ರಸ್ತೆಯ ಮೇಲೆ ನಡೆಯುವುದೊಂದು ಘನತೆಯ ವಿಷಯವಾಗಿತ್ತು. ಈಗ ಹಾಗಲ್ಲ. ಮಕ್ಕಳಿಂದ ಮುದುಕರ ವರೆಗೆ, 'ಎಲ್ಲರಿಗೂ ಎಲ್ಲಕಾಲದಲ್ಲೂ' ಬೇಕಾಗುವ ಸಾಧನ ಎಂಬಂತಾಗಿದೆ. ಅದರ ಗಾತ್ರ ಚಿಕ್ಕದಾಗಿದೆ. ಆಕಾರ ಆಕರ್ಷಕವಾಗಿದೆ. ಜೊತೆಗೆ ಅದು ಕೇವಲ ಫೋನಲ್ಲ. ಫೋಟೋ ತೆಗೆಯುವ ಕೆಮರಾ, ಸುದ್ದಿ ಕೇಳಬಹುದಾದ ರೇಡಿಯೋ, ಹಾಡು ಕೇಳುವ ಟೇಪ್‌ರೆಕಾರ್ಡರು, ಧ್ವನಿಮುದ್ರಕ, ಸಮಯ ಕಳೆಯುವ ಆಟಿಗೆ, ಲೆಕ್ಕಮಾಡುವ ಗಣಕಯಂತ್ರ ಮುಂತಾಗಿ ಅದರ ಸಾಧ್ಯತೆಗಳಿಗೂ ಉಪಯುಕ್ತತೆಗಳಿಗೂ ಲೆಕ್ಕವಿಲ್ಲ ಎಂಬಂತಾಗಿದೆ. ಒಂದು ಕಾಲದಲ್ಲಿ ಮೊಬೈಲು ಹಿಡಿದು ಓಡಾಡುವುದು ಪ್ರತಿಷ್ಠೆವಿಷಯವಾಗಿದ್ದರೆ ಇಂದು ಬಡತನವನ್ನು ನಿರ್ಧರಿಸಲು ಇದೂ ಒಂದು ಅಳತೆಗೋಲು ಎಂಬಂತಾಗಿದೆ. 'ಅವರ ಬಳಿ ಒಂದು ಮೊಬೈಲೂ ಇಲ್ಲ' ಎಂದರೆ ಪಾಪ ಬಡವರು ಎಂಬ ಅರ್ಥ. ಮೊಬೈಲು ಹೊಂದದಿದ್ದರೆ 'ಈ ಕಾಲದವರಲ್ಲ' ಎಂದು ತಮಾಷೆಮಾಡುತ್ತಾರೆ.

[redacted]

[redacted]

# ಲೇಖಕರ ಪರಿಚಯ



ಖ್ಯಾತ ಅಂಕಣಕಾರರಾದ **ನಿರಂಜನ ವಾನಳ್ಳಿ**ಯವರು ಕರ್ನಾಟಕ ರಾಜ್ಯದ ಉತ್ತರಕನ್ನಡ ಜಿಲ್ಲೆಯ ವಾನಳ್ಳಿಯಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ವಾನಳ್ಳಿಯಲ್ಲಿ ಮುಗಿಸಿ, ಉನ್ನತ ವಿದ್ಯಾಭ್ಯಾಸವನ್ನು ಉಡುಪಿಯ ಎಂ.ಜಿ.ಯಂ. ಕಾಲೇಜು ಹಾಗೂ ಮಾನಸ ಗಂಗೋತ್ರಿಯಲ್ಲಿ ಪೂರೈಸಿದರು. ಉಜಿರೆಯ ಎಸ್.ಡಿ.ಯಂ. ಕಾಲೇಜಿನಲ್ಲಿ ಆರು ವರ್ಷಗಳ ಕಾಲ ಪ್ರಾಧ್ಯಾಪಕರಾಗಿದ್ದರು. ೧೯೯೪ರಿಂದ ಮೈಸೂರು ವಿಶ್ವವಿದ್ಯಾಲಯದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರಾಗಿದ್ದಾರೆ. ಅನೇಕ ವರ್ಷಗಳಿಂದ ಕನ್ನಡದ ಬಹುತೇಕ ಪತ್ರಿಕೆಗಳಿಗೆ ನುಡಿಚಿತ್ರ ಬರೆದುದಲ್ಲದೆ ನಿಯತವಾಗಿ ಅಂಕಣಗಳನ್ನು ಬರೆದು ಪ್ರಸಿದ್ಧರಾಗಿದ್ದಾರೆ. ಇವರು ಬರೆದ 'ಕಂಡಿದ್ದು – ಕಾಡಿದ್ದು' ಅಂಕಣ ಉದಯವಾಣಿ ಪತ್ರಿಕೆಯಲ್ಲಿ ಏಳುವರ್ಷಗಳ ಕಾಲ ಹರಿದುಬಂತು. 'ಓಮಾನ್ ಎಂಬ ಒಗಟು' ಅವರಿಗೆ ಹೆಸರು ತಂದುಕೊಟ್ಟ ಪ್ರವಾಸ ಕಥನವಾಗಿದೆ. ಇದಲ್ಲದೆ ಸೋಡಿಗದ್ದೆಯ ಚೆಲುವೆಯರು, ಎರಡು ದಡಗಳ ನಡುವೆ, ಮೊಗೆದಷ್ಟು ನೆನಪು, ಪ್ರೀತಿಗೆಷ್ಟು ಮುಖಗಳು, ತುಡಿದ ಮನ, ಸಂವಹನ ಕೌಶಲ ಮುಂತಾದ ಮೂವತ್ತಕ್ಕೂ ಅಧಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಗೊರೂರು ಪ್ರಶಸ್ತಿ, ಉಗ್ರಾಣ ಪ್ರಶಸ್ತಿ ಮೊದಲಾದ ಶ್ರೇಷ್ಠ ಪ್ರಶಸ್ತಿಗಳನ್ನು ಅವರು ಪಡೆದಿದ್ದಾರೆ.

ಬದುಕು ಬದಲಿಸಿದ ಜಂಗಮಗಂಟೆ ಪಾಠವನ್ನು ಅವರ 'ತುಡಿದ ಮನ' ಅಂಕಣ ಬರಹಗಳ ಸಂಕಲನದಿಂದ ಆರಿಸಲಾಗಿದೆ.

## ಉತ್ತರ ಬರೆಯಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

1 ಹಿಂದಿನ ಕಾಲದಲ್ಲಿ ಮನುಷ್ಯರು ಪರಸ್ಪರ ಸಂಪರ್ಕಸಾಧಿಸಲು ಯಾವ ವಿಧಾನವನ್ನು ಅನುಸರಿಸುತ್ತಿದ್ದರು?

2 ಟೆಲಿಫೋನು ಬಹುದೊಡ್ಡ ಸಂಪರ್ಕ ಕ್ರಾಂತಿಯಾಗಿ ಕಾಣಿಸಿಕೊಂಡ ಬಗೆ ಹೇಗೆ?

3 ಆರಂಭಕಾಲದ ಮೊಬೈಲಿಗೂ ಈಗಿನ ಕಾಲದ ಮೊಬೈಲಿಗೂ ಇರುವ ವ್ಯತ್ಯಾಸಗಳೇನು?

4 ಮೊಬೈಲು ನಮ್ಮ ಜೀವನದ ಭಾಗವಾಗಿದೆಯೆಂದು ಲೇಖಕರು ಹೇಳಲು ಕಾರಣವೇನು?

## ಸಮರ್ಥಿಸಿ ಬರೆಯಿರಿ

ಕೆಳಗೆ ಕೊಡಲಾದ ವಿಷಯಗಳನ್ನು ಸಮರ್ಥಿಸಿ ಬರೆಯಿರಿ.

- ಜಂಗಮಗಂಟೆ ಎನ್ನುವ ಹೆಸರು ಮೊಬೈಲ್‌ಗೆ ಅನ್ವಯವಾದ ಬಗೆ.
- 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಮಾತನ್ನು ಜಂಗಮಗಂಟೆ ಸಾಬೀತುಪಡಿಸಿದ ರೀತಿ.

## ಲೇಖನವನ್ನು ಬರೆಯಿರಿ

- ಮೊಬೈಲ್‌ಫೋನ್‌ನ ದುರುಪಯೋಗದಿಂದ ಉಂಟಾಗುವ ತೊಂದರೆಗಳ ಕುರಿತು ಜನರನ್ನು ಜಾಗೃತಿಗೊಳಿಸುವ ಸಲುವಾಗಿ ಪತ್ರಿಕೆಯ ವಾಚಕರವಾಣಿ ವಿಭಾಗಕ್ಕೆ ಲೇಖನವನ್ನು ಬರೆಯಿರಿ.

## ಟಿಪ್ಪಣಿ ಬರೆಯಿರಿ

- ದೂರವಾಣಿಯು ನಮ್ಮ ಬದುಕನ್ನು ಯಾವ ರೀತಿಯಲ್ಲಿ ಆವರಿಸಿದೆ ಎನ್ನುವುದನ್ನು ಲೇಖಕರು ಈ ಪಾಠದಲ್ಲಿ ಹೇಗೆ ನಿರೂಪಿಸಿದ್ದಾರೆ ಎಂಬುದರ ಕುರಿತು ಟಿಪ್ಪಣಿ ಬರೆಯಿರಿ.

## ವರದಿ ತಯಾರಿಸಿರಿ

- 'ವಿಜ್ಞಾನದ ಪ್ರಗತಿ - ಸಾಧಕ ಬಾಧಕಗಳು' ಎಂಬ ವಿಷಯದ ಕುರಿತು ತರಗತಿಯಲ್ಲಿ ಚರ್ಚಾಗೋಷ್ಠಿಯನ್ನು ನಡೆಸಿರಿ. ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ವರದಿಯನ್ನು ತಯಾರಿಸಿರಿ.



## ಸಂವಾದಿಯಾದ ಪದ ಬರೆಯಿರಿ

ಕೆಳಗೆ ಕೊಡಲಾದ ಗದ್ಯಭಾಗದಲ್ಲಿರುವ ಆಂಗ್ಲಪದಗಳಿಗೆ ಸಾಧ್ಯವಿರುವಷ್ಟು ಸಂವಾದಿಯಾದ ಕನ್ನಡ ಪದ ಬರೆಯಿರಿ.

ನಾವೆಲ್ಲ ಊಟಮಾಡುವುದಕ್ಕಾಗಿ ಡೈನಿಂಗ್ ಹಾಲ್‌ಗೆ ಹೋಗಿದ್ದರಿಂದ ಮನೆಯ ಮುಂದಿನ ಬಾಗಿಲು ಹಾಕಿತ್ತು. ಥಕ್ಕನೆ ಯಾರೋ ಬೆಲ್ ಮಾಡಿದಂತಾಯಿತು. ಅಕ್ಕ ಇನ್ನೂ ಊಟ ಆರಂಭಿಸಿರಲಿಲ್ಲವಾದ್ದರಿಂದ ಹೋಗಿ ಬಾಗಿಲು ತೆರೆದು ನೋಡಿದರೆ ಬೆಂಗಳೂರಿನಿಂದ ಮಾವ ಬಂದಿದ್ದಾರೆ! ಎಲ್ಲರಿಗೂ ಅದೊಂದು ಸರ್ಪ್ರೈಸ್. ಕಳೆದ ವಾರವಷ್ಟೇ ಬಂದು ಹೋದವರು ಇಂದು ಬರುವರೆಂಬ ನಿರೀಕ್ಷೆಯೇ ಇರಲಿಲ್ಲ.

ಮಾವ ಬೆಂಗಳೂರಿನಲ್ಲಿ ಕಾಲೇಜೊಂದರಲ್ಲಿ ಪ್ರಾಚಾರ್ಯರು. ಮನೆಯವರ ಜೊತೆಯೂ ಇವರ ಪ್ರಾಚಾರ್ಯತನ ಪ್ರದರ್ಶನವಾಗುವುದು ನಮಗೆಲ್ಲ ಕಿರಿಕಿರಿ ಎನಿಸುತ್ತದೆ. ಅದನ್ನು ತೋರ್ಪಡಿಸಿದರೆ ಮತ್ತೆ ಅವರು ತುಂಬಾ ಮಾತನಾಡುತ್ತಾರೆ. ಮಾತನಾಡುವುದಕ್ಕೆ ವಿಷಯ ಕಂಪ್ಯೂಟರ್ ಒಂದೇ. ಆ ನಮ್ಮ ಅತ್ತೆ ಡೈವೋರ್ಸ್‌ಗೆ ಯಾಕೆ ಪ್ರಯತ್ನಿಸಲಿಲ್ಲ ಅನ್ನಿಸಿದ್ದುಂಟು ನಮಗೆ. ಯಾಕಂದ್ರೆ ಯಾರೂ ಸಿಗದಿದ್ದರೆ ಮಾವನ ಕಂಪ್ಯೂಟರ್ ಜ್ಞಾನ ಪ್ರದರ್ಶನ ಅತ್ತೆಯ ಮುಂದೆ... "ನೋಡು ಇನ್ಫೋರ್ಮೇಶನ್ ಎನ್ನುವುದು ಜನರೊಂದಿಗಿನ ಕಮ್ಯೂನಿಕೇಶನ್‌ಗೆ ಬಹಳ ಅಗತ್ಯ. ಸಣ್ಣ ಬಾಕ್ಸ್ ನಮಗೆ ನೀಡುವ ಸೇವೆ ಸಣ್ಣದಲ್ಲ. ಅದರ ಮುಂದೆ ಕುಳಿತು ಇಂಟರ್ನೆಟ್ ಮೂಲಕ ನಾವು ಸಹಸ್ರಾರು ವಿಷಯಗಳ ಅರಿವು ಪಡೆಯಬಹುದು. ಪ್ರಪಂಚದ ಮೂಲೆ ಮೂಲೆಗಳಲ್ಲಿದ್ದವರೊಂದಿಗೆ ಒಳ್ಳೆಯ ಬಾಂಧವ್ಯವನ್ನಿಟ್ಟುಕೊಳ್ಳಬಹುದು. ಸಾಮಾನ್ಯ ಕಂಡಕ್ಟರನಿಂದ ಬಾನಂಗಳದಲ್ಲಿ ಹಾರಾಡುವ ವಿಮಾನದೊಳಗಿರುವ ಏರ್‌ಹೋಸ್ಟೆಸ್‌ಗಳವರೆಗೆ, ಇತ್ತ ಹೊಲದಲ್ಲಿ ಕೆಲಸಮಾಡುವ ರೈತನಿಂದ ಪ್ರೈಮ್‌ಮಿನಿಸ್ಟರ್‌ವರೆಗೆ ಎಲ್ಲರಿಗೂ ಇದರ ಅಗತ್ಯ ಇದೆ ಗೊತ್ತಾ..." ಮಿನಿಟುಗಳಿಂದ ಗಂಟೆಗಳವರೆಗೆ ಹರಿಯುವ ಪ್ರಾಚಾರ್ಯ ಮಹಾಶಯರ ವಾಗ್ಝರಿ ಯಾವಾಗ ನಿಲ್ಲುವುದೋ ಎಂದು ಕಾಯುವುದು ಮಾತ್ರ ನಮ್ಮ ಕೆಲಸ.

ಅರ್ಥಕೋಶ

## ಕನ್ನಡದ ಬಗ್ಗೆ.....

- ಕನ್ನಡ ಎರಡು ಸಾವಿರ ವರ್ಷಗಳಷ್ಟು ಹಳೆಯ ಭಾಷೆ. ಇದನ್ನು ಮಾತನಾಡುವಂತೆ ಬರೆಯಬಹುದು. ಬರೆದಂತೆಯೇ ಓದಬಹುದು.
- ಕ್ರಿಸ್ತಪೂರ್ವದ ಗ್ರೀಕ್ ಪ್ರಹಸನಗಳಲ್ಲಿ ಕನ್ನಡ ಪದಗಳು ಬಳಕೆಯಾಗಿರಬೇಕೆಂದು ಗೋವಿಂದ ಪೈಗಳು ಹೇಳಿದ್ದಾರೆ.
- ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ಅವಿದ್ಯಾವಂತರು ಕೂಡ ಕಾವ್ಯಪ್ರಯೋಗ ಮಾಡುವಷ್ಟು ಬುದ್ಧಿವಂತರು ಎಂಬ ಕನ್ನಡಿಗರ ಬಗೆಗಿನ ಈ ಮಾತನ್ನು ಸಾವಿರ ವರ್ಷಗಳ ಹಿಂದೆಯೇ ಶ್ರೀವಿಜಯನ ಕವಿರಾಜ ಮಾರ್ಗದಲ್ಲಿ ಹೇಳಲಾಗಿದೆ.
- ವಚನ ಸಾಹಿತ್ಯ ಎಂಬುದು ಕನ್ನಡದಲ್ಲಿ ಮಾತ್ರ ಕಾಣಬಹುದಾದ ವಿಶಿಷ್ಟ ಹಾಗೂ ಅಪರೂಪವಾದ ಸಾಹಿತ್ಯವಾಗಿದೆ.

NT-269-10-KANNADA-10-BT

# ಅರ್ಥಕೋಶ

## ಅ

- ಅಂಚು – ಬದಿ, ದಡ
- ಅಂತರ್ಮುಖಿ – ಮನಸ್ಸು ಒಳಮುಖವಾಗಿರುವ,ಯಾರೊಡನೆಯೂಹೆಚ್ಚುಬೆರೆಯದ
- ಅಂತರಂಗ – ಮನಸ್ಸು
- ಅಖಿಲ – ಸಂಪೂರ್ಣ, ಸಮಸ್ತ
- ಅಚ್ಚಳಿಯದೆ – ಅಳಿದು ಹೋಗದೆ, ನಾಶವಾಗದೆ
- ಅಜ್ಞಾನ – ಏನೂ ಗೊತ್ತಿಲ್ಲದಿರುವಿಕೆ, ಬುದ್ಧಿಗೇಡಿತನ
- ಅಡವಿ – ಕಾಡು, ಅರಣ್ಯ, ಕಾನನ
- ಅಡವು – ಸಾಲವಾಗಿ ಕೊಟ್ಟ ಹಣದ ಭರವಸೆಗಾಗಿ ಚಿನ್ನ, ಬೆಳ್ಳಿ ಪಾತ್ರೆ ಮೊದಲಾದವುಗಳನ್ನು ಹಣಕೊಟ್ಟವನ ವಶದಲ್ಲಿ ಇಡುವುದು.
- ಅಡಿಪಾಯ – ತಳಹದಿ
- ಅಣಕಿಸು – ಅಪಹಾಸ್ಯ ಮಾಡು
- ಅಧಿವೇಶನ – ಸಭೆ, ಸಭೆಸೇರುವಿಕೆ
- ಅನಿವಾರ್ಯ – ತಪ್ಪಿಸಲಾಗದ, ಗತ್ಯಂತರವಿಲ್ಲದಿರುವುದು
- ಅನುಯಾಯಿ – ಹಿಂಬಾಲಕ
- ಅನುದ್ದೇಶಿತ – ಉದ್ದೇಶಿತವಲ್ಲದ, ಆಕಸ್ಮಿಕ
- ಅಪರಿಮಿತ – ಮಿತಿ ಇಲ್ಲದ
- ಅಭಿನೇತ್ರಿ – ನಟಿ
- ಅಭಿವ್ಯಕ್ತಿ – ಪ್ರಕಟಪಡಿಸುವಿಕೆ
- ಅರಸು – ಹುಡುಕು, ದೊರೆ, ರಾಜ

## ಆ

- ಆಂತರ್ಯ – ಮನಸ್ಸು, ಅಂತರಂಗ
- ಆಕಸ್ಮಿಕ – ಅನಿರೀಕ್ಷಿತ ಘಟನೆ
- ಆಕ್ಷೇಪಣೆ – ಪ್ರತಿಭಟನೆ
- ಆಡಂಬರ – ತೋರಿಕೆ, ಬಡಾಯಿ
- ಆತಂಕ – ಹೆದರಿಕೆ, ಚಿಂತೆ
- ಆತಿಥೇಯ – ಅತಿಥಿಗಳನ್ನು ಬರಮಾಡಿಕೊಂಡು ಸತ್ಕಾರ ಮಾಡುವವನು
- ಆತುರ – ಅವಸರ
- ಆತುಕೊಳ್ಳು – ಒರಗು
- ಆದ್ಯತೆ – ಮೊದಲ ಸ್ಥಾನ
- ಆಭಾರಿ – ಋಣಿ
- ಆರಿಸು – ಆಯು,ಆಯ್ಕೆಮಾಡು, ನಂದಿಸು

## ಇ

- ಇಂದ್ರಿಯಾತೀತ – ಇಂದ್ರಿಯಗಳಿಗೆ ಹೊರತಾದ
- ಇಚ್ಛೆ – ಬಯಕೆ
- ಇರುಳು – ರಾತ್ರಿ

## ಈ

- ಈಡುಕಟ್ಟು – ಮುಡಿಪಾಗಿಡು

## ಉ

- ಉಗ್ರಾಣಕಾರ – ದಾಸ್ತಾನುಕೋಣೆಯ ಕಾವಲುಗಾರ

[redacted]

ಗುಜರಿ - ಉಪಯೋಗಿಸಿ ಹಳತಾದ, ಬಳಕೆಗೆ ಯೋಗ್ಯವಲ್ಲದ ವಸ್ತುಗಳು

ಗುಮಾಸ್ತ - ಲೆಕ್ಕಪತ್ರಗಳನ್ನು ಬರೆಯುವವನು, ಪತ್ರ ವ್ಯವಹಾರಕ್ಕೆ ಗಮನ ಕೊಡುವವನು

ಗುಪ್ತ - ಗುಟ್ಟು, ರಹಸ್ಯ

ಗೌಣ - ಅಮುಖ್ಯ

## ಚ

ಚಾಕರಿ - ಕೆಲಸ, ನೌಕರಿ, ಊಳಿಗ

ಚಾಚೂತಪ್ಪದೆ - ಸ್ವಲ್ಪವೂ ನ್ಯೂನತೆ ಇಲ್ಲದೆ

ಚಾವಡಿ - ಮನೆಯ ಮುಂದಿನ ಜಗಲಿ

ಚಿಮುಟ - ಇಕ್ಕುಳದಂತಹ ಒಂದು ಚಿಕ್ಕ ಸಾಧನ

## ಛ

ಛಲ - ಹಟಮಾರಿತನ

## ಜ

ಜಂಗಮ - ಚಲಿಸುತ್ತಿರುವ

ಜಟಕಾ - ಒಂಟಿ ಕುದುರೆಯ ಗಾಡಿ

ಜಾಳು - ಪೊಳ್ಳು, ನಿಷ್ಪ್ರಯೋಜಕ

ಜೀಕು - ಚಿಮ್ಮಿಸು, ಸಿಡಿಸು

## ಝ

ಝಾಡಮಾಲಿ - ಪಾಯಿಖಾನೆಯನ್ನು ತೊಳೆಯುವವ, ತೋಟಿ

## ಠ

ಠಾವು - ಜಾಗ, ವಾಸ

## ತ

ತ್ವರಿತ - ವೇಗ, ಶೀಘ್ರ

ತಾರೆ - ನಕ್ಷತ್ರ

ತಾಳ್ಮೆ - ಸಹನೆ, ಸೈರಣೆ

ತಿಳಿವು - ಅರಿವು, ಜ್ಞಾನ

ತುಡುಕು - ಮುನ್ನುಗ್ಗು, ಸೆಣಸು

ತೆಪ್ಪಗೆ - ಸುಮ್ಮನೆ

ತೊದಲು - ಮಾತು ಕಲಿಯುವ ಸಮಯದಲ್ಲಿ ಮಕ್ಕಳು ಆಡುವ ಮಾತು, ಅಸ್ಪಷ್ಟ ಮಾತು

## ದ

ದಟ್ಟಿ - ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ, ಲುಂಗಿ

ದಟ್ಟೈಸು - ಆವರಿಸು

ದಣಿವು - ಆಯಾಸ

ದಮ್ಮು - ಏದುಸಿರು, ಉಬ್ಬಸ

ದ್ರವಿತ - ಮನಸ್ಸು ಕರಗಿದ, ನೀರಾದ

ದಾಪುಗಾಲು - ದೊಡ್ಡ ಹೆಜ್ಜೆ, ದೂರದೂರಕ್ಕಿಡುವ ಹೆಜ್ಜೆ

ದಾಹ – ಬಯಕೆ,ಬಾಯಾರಿಕೆ, ಉತ್ಕಟ ಇಚ್ಛೆ

ದಿರಿಸು – ಬಟ್ಟೆ, ವಸ್ತ್ರ, ಡ್ರೆಸ್

ದ್ವಿಭಾಷಿ – ಎರಡು ಭಾಷೆಯನ್ನು ಬಲ್ಲವನು

ದುರ್ಬಲ – ಬಲಹೀನ

ದುರುಗುಟ್ಟಿನೋಡು– ಸಿಟ್ಟಿನಿಂದ ನೋಡು, ಕೆಕ್ಕರಿಸು

ದುಸ್ಸಹ – ಸಹಿಸಲು ಅಸಾಧ್ಯವಾದ

## ಧ

ಧಣುಧಣು – ಧನ್ಯ ಧನ್ಯ, ಭಾಪು ಎಂಬ ಹೊಗಳಿಕೆ

ಧನ – ಸಂಪತ್ತು

## ನ

ನಾಂದಿಹಾಡು – ಆರಂಭಿಸು

ನಡಸು – ನಡೆಸು

ನಾಟಿ – ಭತ್ತ ಮುಂತಾದ ಪೈರುಗಳ ಸಸಿಗಳನ್ನು ನೆಡುವ ಕೆಲಸ

ನಾಭಿ – ಹೊಕ್ಕುಳ, ಶರೀರದ ಕೇಂದ್ರಸ್ಥಾನ

ನಿಬಂಧನೆ – ಕಟ್ಟುಪಾಡು, ನಿಯಮ

ನಿರರ್ಥಕ – ವ್ಯರ್ಥ

ನಿರ್ಲಿಪ್ತ – ಅನಾಸಕ್ತ

ನಿವಾಳಿಸು – ದೃಷ್ಟಿ ದೋಷವನ್ನು ತೆಗೆ

ನಿರ್ವಿಣ್ಣ – ದುಃಖದಿಂದ ಕೂಡಿದ, ನಿರಾಶೆಯಿಂದ ಕೂಡಿದ

ನಿರ್ವಿವಾದ – ಚರ್ಚೆಯಿಲ್ಲದ

ನಿಸ್ತೇಜ – ಕಾಂತಿಹೀನ, ಕಳೆಗುಂದಿದ

ನಿಷಿದ್ಧ – ತಿರಸ್ಕೃತ

ನೀಹಾರಿಕೆ – ಆಕಾಶಗಂಗೆ

ನೆರವು – ಸಹಾಯ

ನೇಗಿಲು – ಗದ್ದೆಯನ್ನು ಉಳಲು ಉಪಯೋಗಿಸುವ ಉಪಕರಣ

ನ್ಯೂರಾನ್ – ನರಕೋಶ

## ಪ

ಪೌಂಡು – ತೂಕದ ಮಾನ, ಒಂದು ಪೌಂಡು – 453.59 ಗ್ರಾಂ, ಇಂಗ್ಲೇಂಡ್‌ನ ಕರೆನ್ಸಿ

ಪದಗುಚ್ಛ – ಪದಗಳ ಗುಂಪು

ಪರಿಭಾವಿಸು – ಸರಿಯಾಗಿ ಯೋಚಿಸು

ಪ್ರತಿರೂಪ – ಪ್ರತಿಬಿಂಬ

ಪ್ರತಿಷ್ಠಾಪಿಸು – ಸ್ಥಾಪಿಸು

ಪ್ರತೀಕ – ದ್ಯೋತಕ, ಚಿಹ್ನೆ, ಗುರುತು

ಪಿತಾಮಹ – ಅಜ್ಜ

ಪೀಚಾಗಿ – ಎಳೆಯದಾಗಿ

ಪುಕ್ಕಟೆ – ಉಚಿತ

ಪೂರ್ವಿಕ – ಪೂರ್ವಜ, ಹಳಬ

ಪೋಣಿಸು – ಜೋಡಿಸು

## ಬ

ಬಾಂಧವ್ಯ – ನೆಂಟಸ್ತಿಕೆ, ಬಂಧುತನ, ಸಂಬಂಧ

ಬೊಂತೆ – ಕಟ್ಟು, ಗುಚ್ಛ

[redacted]

ರಥಾರೂಢ - ರಥವನ್ನು ಏರಿದವನು
ರಿಕಾಟು - ದಾಖಲೆ, ರೆಕಾರ್ಡು

## ಲ

ಲೀನವಾಗು - ಸೇರಿಕೊಳ್ಳು, ಐಕ್ಯವಾಗು

## ವ

ವ್ಯಂಜನ - ಪದಾರ್ಥ
ವಕಾಲತ್ತು - ಇನ್ನೊಬ್ಬನ ಪರವಾಗಿ ವಾದಿಸುವುದು.
ವ್ಯವಸ್ಥಿತ - ಅಚ್ಚುಕಟ್ಟಾದ
ವಾಸ್ತುಶಿಲ್ಪ - ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಶಾಸ್ತ್ರ
ವಾಣಿಜ್ಯ - ವ್ಯಾಪಾರ
ವ್ಯಾಧಿ - ರೋಗ, ಖಾಯಿಲೆ
ವಿದಾಯ - ಬೀಳ್ಕೊಡುಗೆ
ವಿರಸ - ವಿರೋಧ, ವೈಮನಸ್ಸು
ವಿಜೃಂಭಿಸು - ಶೋಭಿಸು
ವಿನ್ಯಾಸ - ರಚನೆ
ವಿಷಾದ - ದುಃಖ
ವಿಲಕ್ಷಣ - ವಿಶೇಷ ಗುಣಸ್ವಭಾವದ
ವ್ಯತಿರಿಕ್ತ - ಭಿನ್ನ
ವೈಯಾರ - ಬೆಡಗು, ಬಿಂಕ
ವೈಶಿಷ್ಟ್ಯ - ವಿಶೇಷ ಗುಣ, ಹೆಚ್ಚುಗಾರಿಕೆ

## ಶ

ಶರಣ - ಆಶ್ರಯವನ್ನು ಬಯಸಿದವನು, ಮೊರೆರೊಕ್ಕುವ, ಭಕ್ತ
ಶ್ರೋತೃ - ಕೇಳುಗ

## ಸ

ಸಂತತಿ - ವಂಶ, ಪೀಳಿಗೆ
ಸಂತಾಪ - ಅತಿಯಾದ ದುಃಖ
ಸಂದಾಯ - ತಿರುಗಿ ಕೊಡುವುದು
ಸಂಬಳ - ವೇತನ
ಸಂದರ್ಶಿತ - ಸಂದರ್ಶನಕ್ಕೆ ಒಳಗಾದ
ಸಂಯಮ - ಹಿಡಿತ
ಸಂವಹನ - ವಿಷಯವನ್ನು ದಾಟಿಸುವುದು
ಸಂವೇದನೆ - ಭಾವನೆ, ಮನಸ್ಸಿಗೆ ತಟ್ಟುವಿಕೆ
ಸನಿಕೆ - ಕಬ್ಬಿಣದಿಂದ ತಯಾರಿಸಿದ ಒಂದು ಅಗೆಯುವ ಸಾಧನ
ಸಮ್ಮತ - ಒಪ್ಪಿಗೆ
ಸರಬರಾಜು - ಪೂರೈಕೆ, ಒದಗಿಸುವಿಕೆ
ಸಹಾನುಭೂತಿ - ಅನುಕಂಪ, ದಯೆ
ಸಾಕ್ಷಿ - ಪುರಾವೆ, ಕಣ್ಣಿಂದ ನೋಡಿದವನು
ಸಾದಾ - ಸಾಧಾರಣವಾದ, ಸಾಮಾನ್ಯವಾದ
ಸಾಬೀತು - ರುಜುವಾತು, ಪ್ರಮಾಣ
ಸ್ಥಾವರ - ಸ್ಥಿರವಾದ, ಅಲ್ಲಾಡದ
ಸ್ವಾರ್ಥ - ಸ್ವಪ್ರಯೋಜನ
ಸ್ವಾಧೀನ - ಹಿಡಿತ, ವಶ
ಸಿಡುಕು - ಕೋಪ, ಸಿಟ್ಟು
ಸುತ್ತಿಗೆ - ಚಮ್ಮಟಿಗೆ
ಸೃಜನಾತ್ಮಕ - ಹೊಸದಾಗಿ ನಿರ್ಮಾಣ ಮಾಡಬಲ್ಲ

ಸ್ಟ್ರೆಚರ್ – ರೋಗಿಯನ್ನು ಮಲಗಿಸಿ ಸಾಗಿಸುವ ಉಪಕರಣ

## ಹ

ಹಣಕಿ – ಇಣುಕಿ

ಹಣಗು – ಹೆಣಗು, ಅತಿಸಾಹಸ ಮಾಡು

ಹರಯ – ಪ್ರಾಯ

ಹಸ್ತಪ್ರತಿ – ಕೈಬರಹದ ಪ್ರತಿ

ಹಾರೈಸು – ಬಯಸು

ಹಾಲುಗೆನ್ನೆ – ಮೃದುವಾದ ಕೆನ್ನೆ

ಹೀಯಾಳಿಸು – ನಿಂದಿಸು, ತೆಗಳು

ಹುದುಗಿ – ಅಡಗಿ

ಹೆಚ್ಚುವರಿ – ಅಧಿಕವಾದ

ಹೆಮ್ಮಿಂಚು – ದೊಡ್ಡಮಿಂಚು

ಹೈಕಳು – ಹುಡುಗರು, ಬಾಲಕರು

ಹೊಟ್ಟು – ಧಾನ್ಯದ ಹೊರಗಿನ ಸಿಪ್ಪೆ

ಹೋರ್ಡಿಂಗ್ – ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತಿಗಾಗಿ ಇರಿಸುವ ಬೃಹತ್ತಾದ ನಾಮಫಲಕ